UNIVERSAL LIBRARY

OU_202034

UNIVERSAL LIBRARY

# ಹಣದ ವಿನಿಮಯ ಬೆಲೆ

ಜಿ. ರಾಮಕೃಷ್ಣರೆಡ್ಡಿ, ಎಂ.ಎ., ಬಿ.ಟಿ.
(ಮೈಸೂರು ವಿಶ್ವವಿದ್ಯಾನಿಲಯ)

ಚೇತನ ಪುಸ್ತಕಾಲಯ,
ಮೈಸೂರು.

ಮೊದಲ ಮುದ್ರಣ : ೧೯೫೦

ಎಲ್ಲಾ ಹಕ್ಕುಗಳೂ ಗ್ರಂಥಕರ್ತರಿಗೆ ಸೇರಿವೆ.

ಬೆಲೆ ೧-೮-೦

ಪ್ರಕಾಶಕರು : ಗ್ರಂಥಕರ್ತರು.

ಮುದ್ರಣಕಾರರು :
ಜಿ. ಹೆಚ್. ರಾಮರಾವ್, ಬಿ.ಎಸ್ಸಿ.,
ಮೈಸೂರು ಪ್ರಿಂಟಿಂಗ್ ಮತ್ತು ಪಬ್ಲಿಷಿಂಗ್ ಹೌಸ್, ಮೈಸೂರು.

# ಮುನ್ನುಡಿ

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಅರ್ಥಶಾಸ್ತ್ರದ ಅಧ್ಯಾಪಕರಾಗಿರುವ, ಶ್ರೀಯುತ ಜಿ. ರಾಮಕೃಷ್ಣರೆಡ್ಡಿ, ಎಂ.ಎ., ಬಿ.ಟಿ., ಇವರು ಸಾಹಿತ್ಯಪ್ರಪಂಚಕ್ಕೆ ಅಪರಿಚಿತರಲ್ಲ. ಅನೇಕ ಕನ್ನಡ ಮತ್ತು ಆಂಗ್ಲೇಯ ಪತ್ರಿಕೆಗಳಲ್ಲಿ ವಿಚಾರಪೂರಿತವಾದ ಮತ್ತು ಪ್ರಭಾವಯುತವಾದ ಲೇಖನಗಳನ್ನು ಪ್ರಕಟಿಸಿ, ಇವರು ಬೆಳಕಿಗೆ ಬಂದಿದ್ದಾರೆ. ಇವರ ಲೇಖನಗಳನ್ನು ಓದಿದವರು, ಇವರ ಸಂಸ್ಕೃತಿಯ ವೈಶಾಲ್ಯವನ್ನಾಗಲೀ, ಜ್ಞಾನಗಂಭೀರತೆಯನ್ನಾಗಲೀ, ಆರ್ಥಿಕ ವಿಷಯಗಳಲ್ಲಿರುವ ಇವರ ಪ್ರತಿಭಾಪೂರ್ಣವಾದ ನಿಷ್ಕೃಷ್ಟ ಜ್ಞಾನವನ್ನಾಗಲೀ ಮೆಚ್ಚದೇ ಇಲ್ಲ. ಶ್ರೀಯುತರು ಬರೆದಿರುವ ಈ ಪುಸ್ತಕದಲ್ಲಿ ಈ ಗುಣವಿಶೇಷಗಳು ಪರಿಪೂರ್ಣತೆಯನ್ನು ಪಡೆದಿವೆ.

"ಹಣದ ವಿನಿಮಯ ಬೆಲೆ" ಈ ಪುಸ್ತಕದ ಹೆಸರು. ಭಾರತವನ್ನು ಹಾಗೂ ಪ್ರಪಂಚವನ್ನು ತಲ್ಲಣಗೊಳಿಸುತ್ತಿರುವ ಪ್ರಚಲಿತ ಸಮಸ್ಯೆಗಳನ್ನು ಸ್ಪಷ್ಟೀಕರಿಸಿರುವ ಗ್ರಂಥವಿದು. ಪ್ರತಿಯೊಂದು ದೇಶದ ಒಳಬೆಲೆಯ ಮಟ್ಟದಲ್ಲಿ ಸ್ಥಿರತೆಯನ್ನೂ, ಅಂತರರಾಷ್ಟ್ರೀಯ ವಿನಿಮಯದಲ್ಲಿ ದೃಢತೆಯನ್ನೂ ಸಾಧಿಸುವ ವಿಶ್ವಾಸಾರ್ಹವಾದ ಹಣದ ಪ್ರಮಿತಿಗಾಗಿ ಮಾನವ ವರ್ಗವು ಹಾತೊರೆಯುತ್ತಿದೆ. ಇಂತಹ ಪ್ರಮಿತಿಯ ಅನ್ವೇಷಣೆಯಲ್ಲಿ, ಬ್ಯಾಂಕಿನ ಅಧಿಕಾರಿಗಳು, ಅರ್ಥಶಾಸ್ತ್ರಜ್ಞರು ಹಾಗೂ ಹಣಕಾಸಿನ ಸಂಯೋಜಕರು ಭಾಗವಹಿಸಿದ್ದಾರೆ. ಶತಮಾನಗಳಿಂದ ನಮ್ಮ ಹಣಕಾಸಿನ ವ್ಯವಸ್ಥೆಯ ನಿರ್ವಹಣೆಯಲ್ಲಿ, ನಾವು ವಿವೇಕವನ್ನೂ ಮತ್ತು ಅನುಭವವನ್ನೂ ಹೊಂದುತ್ತಿದ್ದೇವೆ; ಈಗ ಬೆಲೆಗಳ, ಬಡ್ಡಿಯ ದರದ, ವಿದೇಶಿ ವಿನಿಮಯದ, ಸ್ವರ್ಣಪ್ರಮಿತಿಯ ಮತ್ತು ವ್ಯವಸ್ಥಿತವಾದ ಹಣದ ಪದ್ಧತಿಗಳ ಚಲನವಲನಗಳನ್ನು ಸರಿಯಾಗಿ ತಿಳಿದುಕೊಳ್ಳಲು ನಮಗೆ ಶಕ್ತಿ ಬಂದಿದೆ. ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಕ್ಷೇತ್ರದ ಹತೋಟಿಯ ವಿಧಾನಗಳನ್ನು

ನಾವು ರೂಪಿಸಿಕೊಂಡಿದ್ದೇವೆ. ನಾವು ಸಂಪೂರ್ಣ ಸ್ಥಿರತೆಯ ಗುರಿಯನ್ನು ತಲುಪದಿದ್ದರೂ, ಆ ಗಮ್ಯಸ್ಥಾನದ ಹತ್ತಿರದಲ್ಲಿದ್ದೇವೆ.

ಶ್ರೀ ರೆಡ್ಡಿಯವರು ಆರ್ಥಿಕಸ್ಥಿರತೆಯ ಮುನ್ನಡೆಯ ಕತೆಯನ್ನು ಸ್ವಾರಸ್ಯವಾಗಿಯೂ ಸಹಜವಾಗಿಯೂ ಹೇಳಿದ್ದಾರೆ. ಹಾಟ್ರೀ, ಕೇನ್ಸ್, ಕ್ರೌಥರ್, ಹಾಬರ್ಲರ್ ಮತ್ತು ರಾಬರ್ಟ್‌ಸನ್—ಈ ಉದ್ದಾಮ ಅರ್ಥಶಾಸ್ತ್ರಜ್ಞರ ಸ್ಫೂರ್ತಿಯ ಪರಿಪೂರ್ಣತೆಯನ್ನು ಪಡೆದು, ಆರ್ಥಿಕ ಸಮಾಲೋಚನೆಯ ಹಿರಿಯ ಸಂಪ್ರದಾಯಾನುಸಾರವಾಗಿ ಈ ಕತೆಯನ್ನು ಇವರು ನಿರೂಪಿಸಿದ್ದಾರೆ. ಇದು ಹಿಂದಿನ ಆರ್ಥಿಕ ವಿದ್ಯಮಾನಗಳ ಕೇವಲ ಸಂಗ್ರಹವಲ್ಲ; ಆರ್ಥಿಕಕ್ಷೇತ್ರದಲ್ಲಿನ ಇತ್ತೀಚಿನ ಬೆಳವಣಿಗೆಗಳನ್ನು ಪೃಥಕ್ಕರಿಸಿ ವಿವರಿಸುವ ಸಂಶೋಧನಾತ್ಮಕವಾದ ಗ್ರಂಥವಿದು.

ಸ್ವರ್ಣಪ್ರಮಿತಿ, ಅಂತರರಾಷ್ಟ್ರೀಯ ಆರ್ಥಿಕ ಸ್ಥಿತಿ, ಇಂಗ್ಲೆಂಡ್ ಮತ್ತು ಅಮೆರಿಕದ ಹಣಕಾಸಿನ ವ್ಯವಸ್ಥೆ, ರೂಪಾಯಿಯ ಸಮಸ್ಯೆ ಹಣದ ವಿನಿಮಯ ಬೆಲೆಯ ಇಳಿವರಿಯಿಂದ ಆಗಬಹುದಾದ ಫಲಿತಾಂಶಗಳು— ಇವೇ ಮೊದಲಾದ ಹಣ ವಿನಿಮಯದ ಹಲವಾರು ಹಂತಗಳನ್ನು ಶ್ರೀ ರೆಡ್ಡಿಯವರು ಓದುಗರಿಗೆ ಪರಿಚಯಮಾಡಿಕೊಡುತ್ತಾರೆ ಇವರು ಸಾಗಿರುವ ಕ್ಷೇತ್ರ ಅತ್ಯಂತ ಗಹನವಾದುದು ಮತ್ತು ತೊಡಕಾದುದು; ಆದರೆ, ಇವರು ಅದರ ಏರಿಳಿತಗಳಲ್ಲಿ, ಹಳ್ಳತಿಟ್ಟುಗಳಲ್ಲಿ ಮತ್ತು ಕಣಿವೆಕಂದರಗಳಲ್ಲಿ, ದೃಢಪ್ರತಿಜ್ಞರಾಗಿ ನಿರ್ದಿಷ್ಟವಾದ ಸೂಕ್ಷ್ಮಪರಿಜ್ಞಾನವುಳ್ಳವರಾಗಿ ಓದುಗರನ್ನು ಸುಲಭವಾಗಿ ಸಾಗಿಸುತ್ತಾರೆ.

ರೂಪಾಯಿಯ ಅದೃಷ್ಟ ದುರದೃಷ್ಟಗಳ ಸುಳಿಯಲ್ಲಿ ನಾವು ಸಿಕ್ಕಿಕೊಂಡಿದ್ದೇವೆ. ರೂಪಾಯಿ ವಿನಿಮಯ ಬೆಲೆ ಒಂದು ಸಲ ಮೇಲ್ಮಟ್ಟದಲ್ಲಿರಬಹುದು, ಇನ್ನೊಂದುಸಲ ಕೆಳಮಟ್ಟದಲ್ಲಿರಬಹುದು; ಅದರ ಬೆಲೆ ಏರಬಹುದು, ಇಳಿಯಬಹುದು; ಇದು ಪೌಂಡ್ ಸ್ಟರ್ಲಿಂಗಿಗೆ ಅಧೀನವಾಗಿ ಹೊಂದಿಕೊಳ್ಳಬಹುದು, ಅಮೆರಿಕದ ಡಾಲರಿಗೆ ಅಧೀನವಾಗಿ ಹೊಂದಿಕೊಳ್ಳಬಹುದು; ಇದು ಚಿನ್ನದ ಪ್ರಮಾಣ

ವಾಗಬಹುದು, ಕೇವಲ ಕಾಗದದ ಪ್ರಮಾಣವಾಗಬಹುದು ; ಇದು ಸ್ವತಂತ್ರ ಹಣವಾಗಬಹುದು, ಅಥವಾ ಹತೋಟಿಗೊಳಪಟ್ಟ ಹಣ ವಾಗಬಹುದು. ಈ ಎಲ್ಲಾ ಪದ್ಧತಿಗಳಲ್ಲಿಯೂ ಕೆಲವರಿಗೆ ಅನು ಕೂಲಗಳು, ಇತರರಿಗೆ ಅನಾನುಕೂಲಗಳು ಒದಗಬಹುದು- ಇವು ದೇಶದ ಆಮದು ಮತ್ತು ರಫ್ತುಗಳು, ವ್ಯಾಪಾರ ಸರಕಿನ ತುಲನ ಮತ್ತು ಒಟ್ಟು ಸಾಲಸೋಲಗಳ ವ್ಯವಸ್ಥೆ, ಸಾರ್ವಜನಿಕ ಆಯವ್ಯಯ, ಸ್ಥಿರ ಆದಾಯ ಮತ್ತು ಅನಿರ್ದಿಷ್ಟ ಆದಾಯ, ವೇತನಗಳು ಮತ್ತು ಸಟ್ಟಾವ್ಯಾಪಾರದ ಲಾಭ, ಕ್ಷಣಿಕ ಕಾಲದ ಇಲ್ಲವೆ ದೀರ್ಘಕಾಲದ ಸಾಲಸೋಲಗಳು—ಇವೇ ಮೊದಲಾದ ಅನುಕೂಲವಾದ ಮತ್ತು ಪ್ರತಿಕೂಲವಾದ ಪ್ರತಿಕ್ರಿಯೆಗಳು. ಹಣ ಪ್ರಮಾಣದ ಇಳಿವರಿ ಅಥವಾ ಏರುವರಿಯ ಬದಲಾವಣೆಗಳಿಂದ, ಭಯಾನಕವೂ, ಕಠಿಣವೂ ಆದ ಇಂತಹ ಫಲಿತಾಂಶಗಳು ಸಂಭವಿಸುತ್ತವೆ. ಶ್ರೀ ರೆಡ್ಡಿಯವರು ರೂಪಾಯಿ ಮೌಲ್ಯದ ಇಳಿವರಿಯ ಈಗಿನ ಸಂದರ್ಭದಲ್ಲಿ ಇವೆಲ್ಲವನ್ನೂ ವಿವರಿಸಿದ್ದಾರೆ. ಪ್ರಚಲಿತ ಸಮಸ್ಯೆಗಳನ್ನು ಮತ್ತು ಅವುಗಳ ಪ್ರಭಾವದಿಂದುಂಟಾಗುವ ಆಗುಹೋಗುಗಳನ್ನು ತಿಳಿಸು ವುದರಲ್ಲಿ ತಮ್ಮ ಪಾಂಡಿತ್ಯವನ್ನೂ, ವಿವೇಚನಾಸೂಕ್ಷ್ಮತೆಯನ್ನೂ ವ್ಯಕ್ತಪಡಿಸಿದ್ದಾರೆ. ಭಾರತದ ಆರ್ಥಿಕ ಹಾಗೂ ಹಣಕಾಸಿಗೆ ಸಂಬಂ ಧಿಸಿದ ಆಧುನಿಕ ಸಮಸ್ಯೆಗಳ ಮೇಲೆ ಈ ಪುಸ್ತಕ ಹೊಂಬೆಳಕನ್ನು ಚೆಲ್ಲಿ ಕನ್ನಡಿಗರಿಗೆ ಬಹು ಉಪಯುಕ್ತವಾಗಿದೆ. ಈ ಸಮಸ್ಯೆಗಳು ಸಾಮಾನ್ಯರಿಗೆ ಮಾತ್ರವೇ ಅಲ್ಲ, ವಿಶ್ವವಿದ್ಯಾನಿಲಯದವರಿಗೂ ಕಠಿ ಣವೂ, ಜಟಿಲವೂ,ಆಗಿವೆ.

ಶ್ರೀ ರೆಡ್ಡಿಯವರು ಈ ಅತಿ ಕಠಿಣವಾದ ಆರ್ಥಿಕ ಹಾಗೂ ವಿನಿ ಮಯ ಸಮಸ್ಯೆಗಳಲ್ಲಿ ಅತ್ಯಂತ ಹೆಚ್ಚಾದ ಚಾಕಚಕ್ಯತೆಯನ್ನೂ, ಸೂಕ್ಷ್ಮಜ್ಞಾನವನ್ನೂ ತೋರಿಸಿದ್ದಾರೆ. ಆರ್ಥಿಕ ಕ್ಷೇತ್ರದಲ್ಲಂತು ಸುಲಭವಾಗಿ ಅಣಗದ ವಿಷಯದೊಡನೆ ಮತ್ತು ಮುಂಗಾಣಲಾಗದ ಹಾಗೂ ಅಂಕೆಗೊಳಗಾಗದ ಶಕ್ತಿಗಳೊಡನೆ ಹೆಣಗಾಡಬೇಕೆಂಬುದು ಇವರಿಗೆ ಗೊತ್ತು. ಎಲ್ಲಾ ಸಮಸ್ಯೆಗಳೂ ಬಹಿರಂಗವಾದುವು, ಎಲ್ಲಾ

ಊಹೆಗಳೂ ತಾತ್ಕಾಲಿಕವಾದುವು ಮತ್ತು ಎಲ್ಲಾ ನಿರ್ಣಯಗಳೂ ಕ್ಷಣಿಕವಾದುವೆಂಬುದನ್ನರಿತು ನಾವು ಈ ನಿಗೂಢವಾದ ಆರ್ಥಿಕ ಕ್ಷೇತ್ರದಲ್ಲಿ ಮುಂದೆ ಸಾಗಬೇಕಾಗಿದೆ. ಹಣಕಾಸಿನ ಕ್ಷೇತ್ರದಲ್ಲಿರುವ ಉಗ್ರ ಅವ್ಯವಸ್ಥೆಯಲ್ಲಿ ವ್ಯವಸ್ಥಾಬದ್ಧವಾದ ಕ್ರಮವನ್ನು ಹೊರಗೆಡಹಿ, ಶ್ರೀ ರೆಡ್ಡಿಯವರು ಇಡೀ ಕನ್ನಡಿಗರಿಗೆ ಅತ್ಯಮೂಲ್ಯವಾದ ಸೇವೆಯನ್ನು ಸಲ್ಲಿಸಿದ್ದಾರೆ.

**ವಿ. ಎಲ್. ಡಿಸೌಜ,**

೧೪-೧-೧೯೫೦.

# ಎರಡು ಮಾತು

ಈ ಪುಸ್ತಕದಲ್ಲಿ ಅಂತರರಾಷ್ಟ್ರೀಯ ಆರ್ಥಿಕ ವಿದ್ಯಮಾನಗಳ ಲಘು ಪರಿಚಯವನ್ನು ಕೊಡಲು ಪ್ರಯತ್ನಿಸಿದೆ. ಸ್ವರ್ಣಪ್ರಮಿತಿಯ ಮೂಲವನ್ನು ಶೋಧಿಸಿ, ಅದರ ತಿರುಳನ್ನು ಪರೀಕ್ಷಿಸಿ, ಅದರ ಸ್ಥಾನ ಮಾನಗಳನ್ನು ಪರಿಶೀಲಿಸಿ, ಅಂತರ ರಾಷ್ಟ್ರೀಯ ಆರ್ಥಿಕ ನಿಧಿಯ ರಚನೆಯೊಂದಿಗೆ, ಸೆಪ್ಟೆಂಬರ್ ೧೯ ತಾರೀಖು ೧೯೪೯ ರಿಂದ ೨೫ ರಾಷ್ಟ್ರಗಳು ತಮ್ಮ ನಾಣ್ಯಗಳ ವಿನಿಮಯ ಬೆಲೆಯನ್ನು ಇಳಿಸಿದ ಮಹತ್ವಪೂರಿತವಾದ ವಿದ್ಯಮಾನಗಳನ್ನು ಆರ್ಥಿಕ ದೃಷ್ಟಿಯಿಂದ ಪ್ರಚೋದಿಸಲು ಹೊರಟಿರುವ ಕಿರುಹೊತ್ತಗೆ ಇದು. ವಿಶ್ವದ ಅನಂತ ಗರ್ಭದಲ್ಲಿ ಬೆಳೆದು, ಯಾವರೀತಿಯಲ್ಲಿ ವಿಶ್ವದಚರಿತ್ರೆಯನ್ನೇ ಆರ್ಥಿಕ ಸಮಸ್ಯೆಗಳು ಕ್ರಾಂತಿದಾಯಕವಾದ ಹಾಗೂ ನಾಗಾಲೋಟದ ವೇಗದಿಂದ ಮಾರ್ಪಾಡುಮಾಡಬಲ್ಲವು ಎಂಬ ಮಹತ್ತರ ಸಮಸ್ಯೆಯನ್ನು ನಿರೂಪಿಸುವುದೇ ಈ ಪುಸ್ತಕದ ಧ್ಯೇಯ. ಇದನ್ನು ನಾನು ಬರೆಯಲು ಸಾಧ್ಯವಾದುದು ನನ್ನ ಪೂಜ್ಯ ಗುರುಗಳಾದ ಪ್ರೊಫೆಸರ್ ವಿ. ಎಲ್ ಡಿಸೌಜ, ಬಿ. ಎ. ಬಿ.ಕಾಂ., (ಲಂಡನ್) ಇವರು ನನಗೆ ನೀಡಿದ ಅನಂತ ಸಹಾಯದಿಂದ, ಅಮಿತವಾದ ಅಕ್ಕರೆಯಿಂದ. ಅರ್ಥಶಾಸ್ತ್ರದ ಹೃದಯವನ್ನು ತೋರಿಸಿ, ಅದರಲ್ಲಿ ಅನುಪಮ ಆಸಕ್ತಿಯನ್ನು ಹುಟ್ಟಿಸಿದವರು ಅವರು. ಅಮೂಲ್ಯವಾದ ಅವರ ಮುನ್ನುಡಿಯಿಂದ ನನಗೂ, ಈ ಪುಸ್ತಕಕ್ಕೂ ಆಶೀರ್ವಾದ ದೊರಕಿದುದು ನನ್ನ ಒಂದು ಭಾಗ್ಯ. ಅವರ ಶಿಷ್ಯರಲ್ಲೊಬ್ಬರ ವಾತ್ಸಲ್ಯಪೂರಿತವಾದ, ಪ್ರೇಮಮಯವಾದ ಕಿರಿಯಕಾಣಿಕೆ ಇದು.

ಈ ಅತಿಗಹನವಾದ ಹಣದ ವಿನಿಮಯ ಸಮಸ್ಯೆಯ ಶೋಧನೆಯಲ್ಲಿ, ಪ್ರತ್ಯಕ್ಷವಾಗಿ, ಪರೋಕ್ಷವಾಗಿ ದೊರೆತ ಎಲ್ಲಾ ಸಹಾಯ ಸೌಲಭ್ಯಗಳಿಗೂ ನಾನು ಋಣಿ. ಮುಖ್ಯವಾಗಿ, ಕೇನ್ಸ್, ಹಾಟ್ರೀ, ಹಾಬರ್ಲರ್, ಕ್ರೋಥರ್, ರಾಬರ್ಟ್‌ಸನ್—ಈ ಉದ್ದಾಮ ಅರ್ಥಶಾಸ್ತ್ರಜ್ಞರ ಗ್ರಂಥಗಳು ನನಗೆ ಬಹು ಸಹಾಯವಾಗಿವೆ.

ನನ್ನ ಹಸ್ತ ಪ್ರತಿಯನ್ನು ಕೂಲಂಕಷವಾಗಿ ನೋಡಿ, ಉಪಯುಕ್ತವಾದ ಸಲಹೆಗಳನ್ನು ಕೊಟ್ಟ, ನನ್ನ ಮಿತ್ರರಾದ ಶ್ರೀ ತ. ಸು. ಶಾಮರಾಯರಿಗೂ; ನನಗೆ ಅನೇಕ ವಿಧದಲ್ಲಿ ಪ್ರೋತ್ಸಾಹಕೊಟ್ಟು, ಸಹಾಯಮಾಡಿದ ಶ್ರೀ ದೆ. ಜವರೇಗೌಡ ಮತ್ತು ಶ್ರೀ ಎಸ್. ವಿ. ಸಂಪತ್—ರವರಿಗೂ ನನ್ನ ಅನಂತ ವಂದನೆಗಳು.

ಈ ಪುಸ್ತವನ್ನು ಸ್ವಲ್ಪಕಾಲದಲ್ಲಿಯೇ ಅಂದವಾಗಿ ಮುದ್ರಿಸಿದ, ಮೈಸೂರು ಪ್ರಿಂಟಿಗ್ ಮತ್ತು ಪಬ್ಲಿಷಿಂಗ್ ಹೌಸ್ ಮಾಲೀಕರಾದ ಶ್ರೀ ಜಿ. ಎಚ್. ರಾಮರಾಯರಿಗೂ ನಾನು ಋಣಿ.

ಮೈಸೂರು.
ತಾ|| ೨೬–೧–೧೯೫೦,

**ಜಿ. ರಾಮಕೃಷ್ಣರೆಡ್ಡಿ.**

---

## ಪ್ರಕಾಶಕರ ಅರಿಕೆ

ಕನ್ನಡ ವೈಜ್ಞಾನಿಕ ಸಾಹಿತ್ಯ ಅತಿ ವಿರಳ. ದಿನ ದಿನದ ಜೀವನದ ಮೇಲೆ ಪರಿಣಾಮ ಮಾಡುವ—ಸಮಸ್ಯೆಗಳನ್ನೆದುರಿಸಲು ಆಧುನಿಕ ಪ್ರಪಂಚ ವ್ಯವಹಾರದ ಜ್ಞಾನ ಸಾಮಾನ್ಯ ಮನುಷ್ಯನಿಗೆ ಇಂದು ಅತ್ಯಗತ್ಯ. ಪ್ರಚಲಿತ ವಿಷಯಗಳ ಮೇಲೆ ಆಯಾ ಶಾಸ್ತ್ರಗಳಲ್ಲಿ ಪರಿಣಿತರಾಗಿರುವ ಪಂಡಿತರ ಸರಳ ಗ್ರಂಥಗಳನ್ನು ಪ್ರಕಾಶಿಸಲು 'ಚೇತನ' ಹವಣಿಸುತ್ತಿದೆ. ನಮ್ಮ ಕಾರ್ಯದಲ್ಲಿ ನೆರವಾಗಿ ಬಂದು ತಮ್ಮ ಪುಸ್ತಕವನ್ನು ಪ್ರಕಾಶಿಸಲು ಅವಕಾಶಕೊಟ್ಟ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಅಧ್ಯಾಪಕರಾದ ಶ್ರೀ ರಾಮಕೃಷ್ಣರೆಡ್ಡಿ, ಎಂ.ಎ , ಬಿ.ಟಿ. ಇವರಿಗೆ ನಾವು ಋಣಿಗಳು. ಓದುಗರ ಎಲ್ಲಾ ಸಲಹೆ ಸಹಕಾರಗಳು ನಮಗೆ ಅತ್ಯಗತ್ಯ. ಸಹೃದಯ ಕನ್ನಡಿಗರು ಕೃಪೆಯಿಟ್ಟು ನೆರವಾಗಬೇಕು.

# ವಿಷಯ ಸೂಚಿಕೆ


| | | | | |
|---|---|---|---|---|
| ೧. | ಚಿನ್ನದ ಹಣ ಪದ್ಧತಿ | .... | .... | ೧ |
| ೨. | ಅಂತರ ರಾಷ್ಟ್ರೀಯ ಆರ್ಥಿಕ ನಿಧಿ | | .... | ೧೫ |
| ೩ | ಬ್ರಿಟನ್ನಿನ ಪೌಂಡ್ ಸ್ಟರ್ಲಿಂಗ್ | .... | .... | ೩೩ |
| ೪. | ಇತರ ರಾಷ್ಟ್ರಗಳು | .... | .... | ೫೫ |
| ೫. | ಭಾರತದ ರೂಪಾಯಿ | .... | .... | ೬೩ |
| ೬. | ಮುಂದೇನು ? | .... | .... | ೧೦೭ |

# ಚಿನ್ನದ ಹಣ ಪದ್ಧತಿ

ಅಂತರ ರಾಷ್ಟ್ರೀಯ ಆರ್ಥಿಕ ವಿನ್ಯಮಾನಗಳ ಸೂಕ್ಷ್ಮ ಪರಿಶೀಲನೆ ಮಾನವ ಜೀವನದ ಪ್ರಗತಿಗೆ ಮುಖ್ಯ ಸಾಧನವಾಗುತ್ತವೆ. ಹತ್ತೊಂಬತ್ತನೆಯ ಶತಮಾನದಲ್ಲಿ ಹಾಗೂ ಮೊದಲನೆಯ ಮಹಾಯುದ್ಧಕ್ಕಿಂತ ಹಿಂದೆ ಅಂತರ ರಾಷ್ಟ್ರೀಯ ವ್ಯಾಪಾರವು ನಿರಾತಂಕವಾಗಿ ನಡೆಯುತ್ತಿತ್ತು. ಪ್ರಪಂಚದ ಅನೇಕ ರಾಷ್ಟ್ರಗಳ ವ್ಯಾಪಾರದ ವಿಸ್ತರಣಕ್ಕೆ ಕೃತ್ರಿಮವಾದ ಯಾವ ಎಡರು ತೊಡರುಗಳೂ ಇರಲಿಲ್ಲ; ವಿಶ್ವವ್ಯಾಪಾರ ಸ್ವಚ್ಛಂದವಾಗಿ ಸಾಗಿತ್ತು. ಅಂತರ ರಾಷ್ಟ್ರೀಯ ವ್ಯಾಪಾರದ ಸಂಬಂಧದಲ್ಲಿ ಉತ್ಪನ್ನವಾದ ಸಾಲಸೋಲಗಳ ಸಮಸ್ಯೆ ಸ್ವಾಭಾವಿಕವಾಗಿ ಸುಲಭವಾಗಿ ಪರಿಹಾರವಾಗುತ್ತಿತ್ತು. ಚಿನ್ನದ ಹಣ ಪದ್ಧತಿ ಆರ್ಥಿಕ ಕ್ಷೇತ್ರದಲ್ಲಿ ಬಹು ಯಶಸ್ವಿಯಾಗಿ ಕೆಲಸ ಮಾಡುತ್ತಿತ್ತು. ೧೯೧೪ ನೆಯ ಇಸವಿಗಿಂತ ಹಿಂದೆ ಚಿನ್ನದ ಹಣ ಪದ್ಧತಿ ವಿಶ್ವವ್ಯಾಪಿಯಾಗಿದ್ದುದರಿಂದ ಅಂತರ ರಾಷ್ಟ್ರೀಯ ವ್ಯಾಪಾರದ ಸಾಲಸೋಲಗಳನ್ನು ಯಾವ ತೊಂದರೆಯಿಲ್ಲದೆ ಪರಿಹಾರ ಮಾಡಲು ಅನುಕೂಲವಿತ್ತು. ಇದಲ್ಲದೆ, ಅನೇಕ ರಾಷ್ಟ್ರಗಳ ನಾಣ್ಯಗಳ ವಿನಿಮಯ ದರಗಳನ್ನು ಹೆಚ್ಚು ಪರಿಕಿತಗಳಿಲ್ಲದೆ ಸ್ಥಿರವಾಗಿಡಲು ಚಿನ್ನದ ಹಣ ಪದ್ಧತಿ ಮುಖ್ಯ ಸಾಧನವಾಗಿತ್ತು. ಪ್ರಪಂಚದ ಅನೇಕ ನಾಣ್ಯಗಳ ಪರಸ್ಪರ ವಿನಿಮಯ ಬೆಲೆಗಳನ್ನು ನಿರ್ಧರಿಸಲು ಚಿನ್ನ ಸರ್ವಸಮ್ಮತವಾದ ಲೋಹವಾಗಿತ್ತು. ಸ್ಥಿರವಾದ ವಿನಿಮಯ ಬೆಲೆ ಅಂತರರಾಷ್ಟ್ರೀಯ ವ್ಯಾಪಾರ ಹಾಗೂ ಬಂಡವಾಳದ ಚಲನವಲನಗಳಿಗೆ ಬಲವಾದ ತಳಹದಿ ಎನ್ನುವುದು ನಿರ್ವಿವಾದ ವಿಷಯ

ಚಿನ್ನದ ಹಣ ಪದ್ಧತಿ ಎಂದರೇನು? ಚಿನ್ನದ ಹಣ ಪದ್ಧತಿ ಎಂದರೆ ದೇಶದ ಹಣ ವ್ಯವಸ್ಥೆಯಲ್ಲಿ ಚಿನ್ನಕ್ಕೇ ಮೊದಲನೆಯ ಸ್ಥಾನ ಇರುವುದು. ದೇಶದ ಹಣ ಅಂದರೆ ಪೌಂಡಿನ, ಫ್ರಾಂಕಿನ, ಡಾಲರಿನ ಅಥವಾ ರೂಪಾಯಿಯ ಬೆಲೆಯನ್ನು ನಿರ್ದಿಷ್ಟ ತೂಕದ ಅಪ್ಪಟ

ಚಿನ್ನದಲ್ಲಿ ನಿಶ್ಚಯಿಸಿ, ಕಾನೂನಿನಂತೆ ಅಥವಾ ಪದ್ಧತಿಯಂತೆ ಇತರ ಎಲ್ಲವನ್ನೂ ಚಿನ್ನದ ಲೆಕ್ಕದಿಂದಲೇ ಅಳೆಯುವ ನಿಯಮವನ್ನು ರೂಪುಗೊಳಿಸಿ, ದೇಶದ ಹಣವನ್ನು ಅಮಿತ ಪ್ರಮಾಣದಲ್ಲಿ ಚಿನ್ನದೊಂದಿಗೆ ವಿನಿಮಯ ಮಾಡುವ ವ್ಯವಸ್ಥೆ ಇದ್ದರೆ, "ಚಿನ್ನದ ಹಣ ಪದ್ಧತಿ" ಇದೆಯೆಂದು ಹೇಳಬಹುದು. ಒಂದು ನಿರ್ದಿಷ್ಟವಾದ ತೂಕದ ಚಿನ್ನದ ಮೂಲನಾಣ್ಯವನ್ನು ಪ್ರಧಾನ ನಾಣ್ಯನೆಂದೋ, ಅಥವಾ ಮೂಲ ನಾಣ್ಯಕ್ಕೆ ಒಂದು ಗೊತ್ತಾದ ಚಿನ್ನವನ್ನು ಕೊಡುವೆವೆಂದೋ ವ್ಯವಸ್ಥೆಗೊಳಿಸಿ ಬಳಕೆಯಲ್ಲಿರಬಹುದಾದ ಇತರ ನಾಣ್ಯಗಳೆಲ್ಲಾ ಅದಕ್ಕೆ ಅಧೀನ ಎಂದು ಪ್ರಕಟಿಸುವುದು ಈ ಪದ್ಧತಿಯ ತಿರುಳು. ಇದಲ್ಲದೆ, ಹೊನ್ನಿನ ಹಣ ಪದ್ಧತಿಗೆ ಇನ್ನೊಂದು ನಿಯಮ ಅತ್ಯಾವಶ್ಯಕ. ಚಿನ್ನದ ಆಮದು ಮತ್ತು ರಫ್ತಿಗೆ ಯಾವ ನಿಷೇಧದ ಅಡ್ಡಿ ಆತಂಕಗಳೂ ಇರಕೂಡದು. ಚಿನ್ನದ ಹಣ ಪದ್ಧತಿ ಇರುವ ದೇಶಗಳಲ್ಲಿ ಚಿನ್ನದ ಚಲನವಲನಗಳು ನಿರಾತಂಕವಾಗಿ, ಸ್ವಾಭಾವಿಕವಾಗಿ ಸಾಗುತ್ತಿರಬೇಕು.

ಹೊನ್ನಿನ ಹಣ ಪದ್ಧತಿಯನ್ನು ಮೊಟ್ಟ ಮೊದಲು ಸ್ಥಾಪಿಸಿದ ದೇಶ ಬ್ರಿಟನ್ನು. 1816 ನೆಯ ಇಸವಿಯ ಹಣಕಾಸಿನ ಕಾನೂನು ಈ ಪದ್ಧತಿಯನ್ನು ಬ್ರಿಟನ್ನಿನಲ್ಲಿ ಭದ್ರವಾಗಿ ಸ್ಥಾಪಿಸಿತು. 20 ಷಿಲ್ಲಿಂಗಿನ ಸವರಿನ್ ಜನ್ಮತಾಳಿತು. ಹನ್ನೊಂದು ಭಾಗ ಚೊಕ್ಕ ಚಿನ್ನ ಒಂದು ಭಾಗ ಕಂದು ಇರುವ ಒಂದು ಔನ್ಸ್ (Standard) ಚಿನ್ನಕ್ಕೆ 3 ಪೌಂ. 17 ಷಿ. 10½ ಪೆನ್ನಿಗಳ ಬೆಲೆ ಎಂದು ಸರಕಾರ ಗೊತ್ತು ಮಾಡಿತ್ತು; ಒಂದು ಸವರನ್ನಿನಲ್ಲಿ 113 $\frac{1}{623}$ ಗ್ರೈನ್‌ಗಳಷ್ಟು ಚೊಕ್ಕ ಚಿನ್ನವಿತ್ತು ಯುದ್ಧಕಿಂತ ಹಿಂದಿನ ಸವರನ್ನಿನಲ್ಲಿ 113 $\frac{1}{623}$ ಗ್ರೈನ್‌ಗಳಷ್ಟು ಚೊಕ್ಕ ಚಿನ್ನವೂ, ಸ್ವಲ್ಪಭಾಗಕಂದೂ ಇದ್ದವು. ಸವರನ್ನಿನ ಒಟ್ಟು ತೂಕ 123·27447 ಗ್ರೈನುಗಳು. ಈ ಎಣಿಕೆಯಂತೆ ಯಾರೆಷ್ಟು ಚಿನ್ನವನ್ನು ತೆಗೆದುಕೊಂಡುಹೋಗಿ ಕೊಟ್ಟರೂ, ಇಂಗ್ಲೆಂಡಿನ ಕೇಂದ್ರ ಬ್ಯಾಂಕು ಸವರನ್ನು ಕೊಡಬೇಕೆಂದು ನಿಯಮವಿದ್ದಿತು. ಒಂದು ಔನ್ಸಿಗೆ 3 ಪೌಂ. 17 ಷಿ. 10½ ಪೆನ್ನಿಗಳಂತೆ. ಚಿನ್ನವನ್ನು ಮಾರಾಟ ಮಾಡಲು ಇಂಗ್ಲೆಂಡಿನ ಕೇಂದ್ರ ಬ್ಯಾಂಕಿಗೆ

ಕಧಿಕಾರವಿತ್ತು. ಒಂದು ಔನ್ಸ್ ಚಿನ್ನದ ಗಟ್ಟಿಯನ್ನು ಯಾವ ಖರ್ಚನ್ನೂ ವಿಧಿಸದೆ ಇಂಗ್ಲಿಷ್ ಟಂಕಸಾಲೆಯು 3 ಪೌಂ. 17 ಷಿ. 10½ ಪೆನ್ನಿಗಳಾಗಿ ಮಾಡುತ್ತಿತ್ತು. ಚಿನ್ನದ ಗಟ್ಟಿಯನ್ನು ಒಂದು ಔನ್ಸಿಗೆ ೩ ಪೌಂ. ೧೭ ಷಿ. ೯ ಪೆನ್ನಿಗಳಂತೆ ಇಂಗ್ಲೆಂಡಿನ ಕೇಂದ್ರ ಬ್ಯಾಂಕು ಕೊಳ್ಳುತ್ತಿತ್ತು.

ಹೊನ್ನಿನ ಹಣ ಪದ್ಧತಿಗೆ ಮೂರು ರೂಪಗಳಿದ್ದವು – ಚಿನ್ನದ ನಾಣ್ಯ ಚಲಾವಣಾ ಪದ್ಧತಿ, ಚಿನ್ನದ ಗಟ್ಟಿ ಪದ್ಧತಿ, ಸ್ವರ್ಣವಿನಿಮಯ ಪದ್ಧತಿ. ಚಿನ್ನದ ನಾಣ್ಯ ಪದ್ಧತಿಯಲ್ಲಿ ಮುಖ್ಯನಾಣ್ಯವೇ ಚಿನ್ನದ್ದು; ಚಿನ್ನದ ನಾಣ್ಯಗಳೇ ಚಲಾವಣೆಯಲ್ಲಿರುತ್ತವೆ. ಹತ್ತೊಂಬತ್ತನೆಯ ಶತಮಾನದಲ್ಲಿ ಮುಂದೆ ಇಪ್ಪತ್ತನೆಯ ಶತಮಾನದ ಆದಿಭಾಗದಲ್ಲಿ (ಮೊದಲನೆಯ ಯುದ್ಧಕ್ಕಿಂತ ಮುಂಚೆ), ಚಿನ್ನದ ಹಣ ಪದ್ಧತಿ ವಿಸ್ತ ವ್ಯಾಪಿಯಾಗಿತ್ತೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಯುದ್ಧಾನಂತರ ಈ ಪದ್ಧತಿ ಅಂಗೀಕಾರವಾಗಿಲ್ಲ. ಚಿನ್ನದ ಗಟ್ಟಿ ಪದ್ಧತಿಯಲ್ಲಿ, ಒಳಬಳಕೆಗೆ ಚಿನ್ನದ ನಾಣ್ಯವಿರುವುದಿಲ್ಲ. ಮುಖ್ಯ ನಾಣ್ಯ ಯಾವುದೇ ಇರಲಿ ಒಂದು ಗೊತ್ತಾದ ಲೆಕ್ಕದಂತೆ ಚಿನ್ನದ ಗಟ್ಟಿಯನ್ನು ಕೊಡಬೇಕೆಂಬ ನಿಯಮವಿರುತ್ತದೆ. ಯುದ್ಧಾನಂತರದ ಕಾಲದಲ್ಲಿ, ಚಿನ್ನದ ಹಣ ಪದ್ಧತಿಯಲ್ಲಿ ಮಾರ್ಪಾಡುಗಳು ಅಗತ್ಯವಾದಾಗ, ಈ ಚಿನ್ನದ ಗಟ್ಟಿ ಪದ್ಧತಿ ಇಂಗ್ಲೆಂಡಿನಲ್ಲಿ ಮೇ 1925 ರಲ್ಲಿ ಸ್ಥಾಪಿತವಾಯಿತು. ಈ ಪದ್ಧತಿಯಲ್ಲಿ ಚಿನ್ನದ ನಾಣ್ಯಗಳು ಚಲಾವಣೆಯಲ್ಲಿರುವುದಿಲ್ಲ ಹಾಗೂ ಒಂದು ನೋಟನ್ನು ಚಿನ್ನಕ್ಕೆ ಮಾರಿಸುವ ಹಾಗಿಲ್ಲ. ಬ್ರಿಟನ್ನು ಮೇ 1925 ರಿಂದ ಸೆಪ್ಟೆಂಬರ್ 1931 ರ ವರೆಗೆ ಈ ಪದ್ಧತಿಯನ್ನು ಅನುಸರಿಸುತ್ತಿತ್ತು. ನೋಟುಗಳಿಗೆ ಚಿನ್ನದ ನಾಣ್ಯಗಳನ್ನು ಕೊಡದೆ ಕನಿಷ್ಟಪಕ್ಷ 400 ಔನ್ಸುಗಳ ಬೆಲೆಯುಳ್ಳ ನೋಟುಗಳಿಗ ಮಾತ್ರ ಚಿನ್ನದ ಗಟ್ಟಿಗಳನ್ನು ಇಂಗ್ಲೆಂಡಿನ ಕೇಂದ್ರ ಬ್ಯಾಂಕು ಕೊಡುತ್ತಿತ್ತು. ಇದರಿಂದ ಚಿನ್ನದ ನಾಣ್ಯಗಳ ನಿರ್ವಿಘ್ನವಾದ ತಯಾರಿಕೆಗೆ ಬದಲಾಗಿ, ಚಿನ್ನದ ಗಟ್ಟಿಗಳನ್ನು ಇಂಗ್ಲೆಂಡಿನ ಕೇಂದ್ರ ಬ್ಯಾಂಕಿನ ನೋಟುಗಳಿಗೆ ವಿನಿಮಯಮಾಡುವ ವ್ಯವಸ್ಥೆ

ರೂಪುಗೊಂಡಿತು. ಆದರೆ, ಖಾಸಗಿ ಜನರು ಚಿನ್ನವನ್ನು ಇಟ್ಟುಕೊಳ್ಳುವುದಕ್ಕಾಗಲೀ ಅಥವಾ ಉಪಯೋಗಿಸುವುದಕ್ಕಾಗಲೀ ಯಾವ ಆತಂಕವೂ ಇರಲಿಲ್ಲ. ಫ್ರಾನ್ಸ್ 1928 ರಲ್ಲಿ ಚಿನ್ನದ ಗಟ್ಟಿ ಪದ್ಧತಿಯನ್ನು ಅಂಗೀಕರಿಸಿತು. ಈ ಪದ್ಧತಿ 1926 ರಿಂದ ಸೆಪ್ಟೆಂಬರ್ 1931 ರ ವರೆಗೆ ಇಂಡಿಯಾ ದೇಶದಲ್ಲಿ ಪ್ರಚಾರದಲ್ಲಿತ್ತು. ಈ ಪದ್ಧತಿಯು ಚಿನ್ನವನ್ನು ಮಿತವಾಗಿ ಉಪಯೋಗಿಸಲು ಸಾಧಕವಾಯಿತು. ಸ್ವರ್ಣವಿನಿಮಯ ಪದ್ಧತಿಯು (The Gold Exchange Standard) ಚಿನ್ನವನ್ನು ಉಳಿಸುವ ಇನ್ನೊಂದು ಪದ್ಧತಿ. ಬೆಳ್ಳಿಯ ಹಣ ಪದ್ಧತಿಯನ್ನನುಸರಿಸುತ್ತಿದ್ದ ಕೆಲವು ರಾಷ್ಟ್ರಗಳಲ್ಲಿ ಈ ಪದ್ಧತಿ ರೂಪುಗೊಂಡಿತು. ಈ ಪದ್ಧತಿಯನ್ನು ಹೊಂದಿರುವ ರಾಷ್ಟ್ರದ ಹಣವನ್ನು ನೇರವಾಗಿ ಚಿನ್ನದಲ್ಲಿ ವಿನಿಮಯಮಾಡದೆ, ಚಿನ್ನದ ಹಣ ಪದ್ಧತಿಯು ಪ್ರಚಾರದಲ್ಲಿರುವ ಬೇರೊಂದು ರಾಷ್ಟ್ರದ ಹಣಕ್ಕೆ ವಿನಿಮಯ ಮಾಡುವುದು ಈ ಪದ್ಧತಿಯ ತಿರುಳು. ವಿದೇಶಿ ನಾಣ್ಯ ಚಿನ್ನದಷ್ಟೇ ಉತ್ತಮವಾದುದು ಎಂಬ ಭಾವನೆಯಲ್ಲಿ ಈ ಪದ್ಧತಿ ಅಡಕವಾಗಿದೆ. ಇಂಡಿಯಾ, ಡೆನ್ಮಾರ್ಕ್, ಆಸ್ಟ್ರೇಲಿಯಾ---ಈ ದೇಶಗಳು ಈ ಸ್ವರ್ಣ ವಿನಿಮಯ ಪದ್ಧತಿಯನ್ನು ಅಂಗೀಕರಿಸಿದವು. ಈ ಪದ್ಧತಿ 1899 ರಿಂದ 1926 ರ ವರೆಗೆ ಇಂಡಿಯಾದಲ್ಲಿ ಬಳಕೆಯಲ್ಲಿತ್ತು. ಇಂಡಿಯಾದಲ್ಲಿ ಒಳ ಚಲಾವಣೆಗೆ ರೂಪಾಯಿ ಉಪಯೋಗವಾಗಿ, ಹೊರದೇಶಗಳವರಿಗೆ ಹಣ ತೆರಬೇಕಾದಾಗ ಮಾತ್ರ ಬ್ರಿಟನ್ನಿನ ಸ್ಟರ್ಲಿಂಗ್ ಹಣವನ್ನು ಪಡೆಯುವ ವ್ಯವಸ್ಥೆಯಿತ್ತು. 1898 ರಿಂದ ಸರಕಾರವು ಸ್ಟರ್ಲಿಂಗ್ ಬಿಲ್ಲುಗಳನ್ನು ರೂಪಾಯಿಗಳಿಗೆ ಬದಲಾಗಿ, ಒಂದು ರೂಪಾಯಿಗೆ $15\frac{29}{32}$ ಪೆನ್ನಿಗಳಂತೆ ಮಾರುತ್ತಿತ್ತು; ಇದರಂತೆ ಲಂಡನ್ನಿನಲ್ಲಿ ರೂಪಾಯಿಯ ಬಿಲ್ಲುಗಳು ಒಂದು ರೂಪಾಯಿಗೆ $16\frac{1}{8}$ ಪೆನ್ನಿಗಳಂತೆ ಮಾರಾಟವಾಗುತ್ತಿದ್ದವು.

ಅಂತರರಾಷ್ಟ್ರೀಯ ಹೊನ್ನಿನ ಹಣಪದ್ಧತಿಯಲ್ಲಿ ಅನೇಕ ರಾಷ್ಟ್ರಗಳ ನಾಣ್ಯಗಳ ವಿನಿಮಯ ಬೆಲೆಗಳು ಸ್ಥಿರವಾಗಿರಲು ಸಾಧಕವಾದ ವಾತಾವರಣ ನಿರ್ಮಿತವಾಗಿತ್ತು. ಈ ಅಂಶವನ್ನು ಒಂದು ಉದಾ

ರಣೆಯಿಂದ ಪರಿಶೀಲಿಸುವುದು ಉತ್ತಮವಾಗಿ ಕಾಣುತ್ತದೆ. ಫ್ರಾನ್ಸ್ ಮತ್ತು ಇಂಗ್ಲೆಂಡ್— ಈ ಎರಡು ದೇಶಗಳು ಹೊನ್ನಿನ ಹಣಪದ್ಧತಿಯಲ್ಲಿದ್ದು ಫ್ರಾಂಕ್--ಪೌಂಡು ವಿನಿಮಯ ಬೆಲೆ 100 ಫ್ರಾಂಕ್-ಒಂದು ಪೌಂಡು ಎಂದು ಭಾವಿಸೋಣ. ಈ ವಿನಿಮಯದರವನ್ನು ಕಾರ್ಯಕ್ಷೇತ್ರದಲ್ಲಿ ಸ್ಥಿರವಾಗಿಡುವುದೇ ಹೊನ್ನಿನ ಹಣಪದ್ಧತಿಯ ಆದ್ಯ ಕರ್ತವ್ಯ. ಇದ್ದಕ್ಕಿದ್ದ ಹಾಗೆ ಅನೇಕ ಆಂಗ್ಲರು ಬೇಸಿಗೆಯಲ್ಲಿ ಫ್ರಾನ್ಸ್ ದೇಶಕ್ಕೆ ಹೋಗಿ ವಿನೋದವಾಗಿ ಕಾಲಕಳೆಯುವ ನಿರ್ಧಾರಮಾಡುತ್ತಾರೆಂದು ಭಾವಿಸೋಣ. ಆಗ ಸ್ವಾಭಾವಿಕವಾಗಿ ಇಂಗ್ಲೆಂಡಿನಲ್ಲಿ ಫ್ರಾಂಕುಗಳಿಗೆ ಹೆಚ್ಚಿನ ಗಿರಾಕಿಯುಂಟಾಗುತ್ತದೆ. ಫ್ರಾಂಕುಗಳನ್ನು ಕೊಳ್ಳಲು ಆಂಗ್ಲರು ವಿದೇಶಿನಾಣ್ಯ ವ್ಯಾಪಾರಗಾರರ ಹತ್ತಿರ ಹೋಗುತ್ತಾರೆ. ಈ ವ್ಯಾಪಾರಗಾರರು ಇರುವ ಫ್ರಾಂಕುಗಳೆಲ್ಲವನ್ನೂ ಪೌಂಡುಗಳಿಗೆ ಮಾರಾಟಮಾಡಬೇಕಾಗುತ್ತದೆ. ಫ್ರಾಂಕುಗಳ ಸರಬರಾಯಿ ಹೆಚ್ಚಾಗದೆ ಅವುಗಳ ಗಿರಾಕಿ ಮಾತ್ರ ನಾಗಾಲೋಟದಿಂದ ಏರಿದರೆ ಏನಾಗುತ್ತದೆ? ಯಾವುದಾದರೂ ಸಾಮಾನಿನ ಸರಬರಾಯಿ ಹೆಚ್ಚಾಗದೆ ಅವುಗಳ ಗಿರಾಕಿ ಮಾತ್ರ ದಿನೇ ದಿನೇ ಹೆಚ್ಚಾಗುತ್ತಿದ್ದರೆ, ಆ ಸಾಮಾನಿನ ಬೆಲೆಯಮೇಲೆ ಯಾವ ಪರಿಣಾಮವಾಗುತ್ತದೆ? ಸ್ವಾಭಾವಿಕವಾಗಿ, ಆ ಸಾಮಾನಿನ ಬೆಲೆ ಏರಲೇಬೇಕು. ಆದರೆ, ನಾಣ್ಯಗಳ ಸಂಬಂಧದಲ್ಲಿ ಬೆಲೆ ಹೆಚ್ಚಾಗುವುದೆಂದರೆ, ವಿನಿಮಯ ದರದಲ್ಲಿ ಬದಲಾವಣೆಯಾಗುತ್ತದೆ. ಫ್ರಾಂಕುಗಳ ಗಿರಾಕಿ ಹೆಚ್ಚಾಗುತ್ತಿದ್ದರೆ, ಫ್ರಾಂಕ್---ಪೌಂಡು ವಿನಿಮಯ ದರ 95 ಫ್ರಾಂಕುಗಳು--ಒಂದು ಪೌಂಡು ಆಗಬಹುದು. ಅಂದರೆ, ಒಂದು ಪೌಂಡಿಗೆ ಮೊದಲು 100 ಫ್ರಾಂಕುಗಳು ಬರುತ್ತಿದ್ದರೆ, ಈಗ 95 ಫ್ರಾಂಕುಗಳು ಮಾತ್ರ ಬರುತ್ತವೆ. ಫ್ರಾಂಕಿನ ಪೌಂಡಿನ ವಿನಿಮಯ ಬೆಲೆ ಹೆಚ್ಚಾಗುತ್ತದೆ. ಇದು ವಿದೇಶಿ ನಾಣ್ಯ ವಿನಿಮಯದ ಏರುಪೇರುಗಳಿಂದ ಲಾಭವನ್ನು ಸಂಪಾದಿಸಿ ವ್ಯಾಪಾರ ಮಾಡುವ ವರ್ತಕನಿಗೆ ಕಾರ್ಯಕ್ಷೇತ್ರದಲ್ಲಿ ಕಾಲಿಡಲು ಅನುಕೂಲವಾದ ಸಮಯ. ಈ ವರ್ತಕನು ಹೆಚ್ಚಿನ ಪ್ರಮಾಣದಲ್ಲಿ ಸ್ಟರ್ಲಿಂಗನ್ನು ಇಂಗ್ಲೆಂಡಿನ ಕೇಂದ್ರ ಬಾಂಕಿಗೆ ತೆಗೆದುಕೊಂಡು ಹೋಗಿ, ಅದರಿಂದ

ಚಿನ್ನವನ್ನು ಪಡೆಯುತ್ತಾನೆ. ಈ ಚಿನ್ನವನ್ನು ತನ್ನ ಪ್ಯಾರಿಸ್ ಏಜೆಂಟಿಗೆ ಕಳುಹಿಸಿ, ಅಲ್ಲಿ ಆ ಚಿನ್ನಕ್ಕೆ ಫ್ರಾಂಕುಗಳನ್ನು ತೆಗೆದುಕೊಳ್ಳುತ್ತಾನೆ. ಫ್ರಾನ್ಸಿನಲ್ಲಿ ಫ್ರಾಂಕ್—ಪೌಂಡ್ ವಿನಿಮಯದರದಲ್ಲಿ ಯಾವ ಬದಲಾವಣೆಯೂ ಆಗಿರುವುದಿಲ್ಲ. ಇದರಿಂದ, ಇಂಗ್ಲೆಂಡಿನ ವರ್ತಕನಿಗೆ ಪ್ರತಿಯೊಂದು ಪೌಂಡಿಗೂ 5 ಫ್ರಾಂಕು ಹೆಚ್ಚಾಗಿ ಬರುತ್ತವೆ. ಫ್ರಾಂಕುಗಳನ್ನು ಫ್ರಾನ್ಸಿನಿಂದ ಇಂಗ್ಲೆಂಡಿಗೆ ತರಿಸಿಕೊಳ್ಳಲು ಸ್ವಲ್ಪ ವೆಚ್ಚವಾಗುತ್ತದೆ. ಈ ವೆಚ್ಚ ಚಿನ್ನದ ಬೆಲೆಯ ಸೇಕಡ ಅರ್ಧದಷ್ಟು ಆಗುತ್ತದೆ.

ಫ್ರಾನ್ಸಿನಿಂದ ಹೆಚ್ಚಾಗಿ ಫ್ರಾಂಕುಗಳನ್ನು ತರಿಸಿಕೊಂಡು, ಇಂಗ್ಲೆಂಡಿನ ವರ್ತಕ ಒಂದು ಪೌಂಡಿಗೆ 95 ಫ್ರಾಂಕುಗಳಂತೆ ಇಂಗ್ಲೆಂಡಿನಲ್ಲಿ ಮಾರಾಟಮಾಡುತ್ತಾನೆ; ಇದರಿಂದ ಅವನಿಗೆ ಸೇಕಡ 4½ ಯಷ್ಟು ಲಾಭ ಸಂದಾಯವಾಗುತ್ತದೆ. ಇದು ಒಂದು ಉದಾಹರಣೆ ಮಾತ್ರ. ವಾಸ್ತವವಾಗಿ, ಇಷ್ಟು ಲಾಭಕ್ಕೆ ಅವಕಾಶವಿರಲಿಲ್ಲ. ಫ್ರಾಂಕ್—ಪೌಂಡು ವಿನಿಮಯದರ 95 ಫ್ರಾಂಕ್— ಒಂದು ಪೌಂಡ್ ಮಟ್ಟಕ್ಕೆ ಏರುವುದಕ್ಕಿಂತ ಮುಂಚೆಯೇ ವರ್ತಕರು, ಫ್ರಾನ್ಸಿನಿಂದ ಫ್ರಾಂಕುಗಳನ್ನು ಬೇಕಾದಷ್ಟು ಪ್ರಮಾಣದಲ್ಲಿ ತರಿಸಿಕೊಂಡು, ಇಂಗ್ಲೆಂಡಿನಲ್ಲಿ ಫ್ರಾಂಕುಗಳ ಸರಬರಾಯಿಯನ್ನು ಹೆಚ್ಚುಮಾಡುತ್ತಿದ್ದರು. ಚಿನ್ನವನ್ನು ಸಾಗಿಸಿ, ಫ್ರಾನ್ಸಿನಿಂದ ಫ್ರಾಂಕುಗಳನ್ನು ತರಿಸಿಕೊಳ್ಳುವ ವೆಚ್ಚ ಸೇಕಡ ಅರ್ಧವಾದ್ದರಿಂದ, ಫ್ರಾಂಕಿನ ಪೌಂಡ್ ವಿನಿಮಯ ಬೆಲೆ ಸೇಕಡ ಅರ್ಧಕ್ಕಿಂತ ಹೆಚ್ಚಾಗಿ ಏರಿಳಿತವಾಗುತ್ತಿರಲಿಲ್ಲ. ಅಂದರೆ, ನಿರ್ದಿಷ್ಟವಾದ ವಿನಿಮಯದ ಸಮಬೆಲೆಗಿಂತ ಸೇಕಡ ಅರ್ಧದಷ್ಟು ಮಾತ್ರ ಹೆಚ್ಚು ಕಡಮೆಯಾಗುವ ಅವಕಾಶವಿದ್ದಿತು. ಈ ಉದಾಹರಣೆಯಲ್ಲಿ, ಈ ಪರಿಮಿತಿಗಳು 99½ ಫ್ರಾಂಕುಗಳು ಅಥವಾ 100½ ಫ್ರಾಂಕುಗಳು. ವಿನಿಮಯದರವು ಈ ಪರಿಮಿತಿಗಳನ್ನು ದಾಟಿದಾಗ ಚಿನ್ನದ ಚಲನವಲನಗಳಿಂದ, ವಿನಿಮಯದರಗಳನ್ನು ಮೊದಲಿನ ಸ್ಥಾನದಲ್ಲಿಡಲು, ಚಿನ್ನದ ಹಣ ಪದ್ಧತಿಗೆ ಸ್ವಾಭಾವಿಕ ಶಕ್ತಿ ಇತ್ತು. ಈ ಎರಡು ಪರಿಮಿತಿಗಳನ್ನು ಚಿನ್ನದ ಆಮದು ರಫ್ತಿನ ಗಡಿಗಳೆಂದು ಕರೆಯುತ್ತಿದ್ದರು.

ಒಂದನೆಯ ಮಹಾಯುದ್ಧದ ಹಿಂದಿನ ಪರಿಶುದ್ಧವಾದ ಹೊನ್ನಿನ ಹಣಪದ್ಧತಿಯ ವಿಶೇಷವಾದ ಸಾಧನದಿಂದ, ಚಿನ್ನವು ಅಂತರರಾಷ್ಟ್ರೀಯ ಲೇವಾದೇವಿಗಳ ಪ್ರಮಾಣವಾಗಿ, ನಾಣ್ಯಗಳ ವಿನಿಮಯದರಗಳು ಚಿನ್ನದ ಆಮದು ರಫ್ತು ಪರಿಮಿತಿಗಳ ಆವರಣದಲ್ಲಿ ಮಾತ್ರ ಬದಲಾವಣೆಯಾಗುತ್ತಿದ್ದುವು. ಆದರೆ, ಯುದ್ಧಾನಂತರ, ಅಂದರೆ ಎರಡು ಮಹಾಯುದ್ಧಗಳ ನಡುವಿನ ಕಾಲದಲ್ಲಿ ಹೊನ್ನಿನ ಹಣಪದ್ಧತಿಯು ಕಾರ್ಯಕ್ಷೇತ್ರದಲ್ಲಿ ಯಶಸ್ವಿಯಾಗಿ ನಡೆಯಲು ಸಾಧ್ಯವಾಗಲಿಲ್ಲ. ಈ ಕಾಲದಲ್ಲಿ ಹೊನ್ನಿನ ಹಣಪದ್ಧತಿಯನ್ನನುಸರಿಸುತ್ತಿದ್ದ ದೇಶಗಳು, ಈ ಪದ್ಧತಿಯನ್ನು ಶಾಸ್ತ್ರೀಯವಾಗಿ, ಇದರ ನಿಯಮಗಳಿಗನುಸಾರವಾಗಿ ನಡೆಸಲಿಲ್ಲ. ಮಿತಿಮೀರಿದ ಆರ್ಥಿಕ ಸ್ವಪರಿಪೂರ್ಣತೆಯ ಯೋಜನೆಗಳು, ಬೆಲೆಗಳಲ್ಲಿ ಬಿಗಿ, ಬಂಡವಾಳದ ಚಲನ ವಲನಗಳಲ್ಲಿ ನಾಗಾಲೋಟ, ಅಂತರರಾಷ್ಟ್ರೀಯ ವ್ಯಾಪಾರಕ್ಕೆ ಅಡ್ಡಿ ಆತಂಕಗಳು---ಇವೆಲ್ಲವೂ ತಾನೇತಾನಾಗಿ ತಾಂಡವವಾಡುತ್ತಾ, ಹೊನ್ನಿನ ಹಣಪದ್ಧತಿಯು ಯಶಸ್ವಿಯಾಗಿ ಕೆಲಸಮಾಡಲು ಬೇಕಾದ ಉತ್ತಮ ವಾತಾವರಣ, ಸನ್ನಿವೇಶ ಮಾಯವಾಯಿತು. ಹೊನ್ನಿನ ಹಣಪದ್ಧತಿಯು ಯಶಸ್ವಿಯಾಗಿ ನಡೆಯಬೇಕಾದರೆ, ಹಲವು ನಿಯಮಗಳನ್ನು ಅನುಸರಿಸಬೇಕು. ಒಂದನೆಯದಾಗಿ, ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಹೆಚ್ಚಿನ ಸ್ವಾತಂತ್ರ್ಯವಿರಬೇಕು. ಎರಡನೆಯದಾಗಿ, ಬೆಲೆಗಳು ಮತ್ತು ವೇತನಗಳು ಶೀಘ್ರವಾಗಿ, ಸ್ವಾಭಾವಿಕವಾಗಿ, ಸುಲಭವಾಗಿ, ಚಿನ್ನದ ಚಲನವಲನಗಳಿಗೆ ಸರಿಯಾಗಿ ಹೊಂದಿಕೊಳ್ಳಲು, ದೇಶಗಳ ಆರ್ಥಿಕರಚನೆ ಸಡಿಲವಾಗಿರಬೇಕು. ಮೂರನೆಯದಾಗಿ, ಚಿನ್ನದ ಚಲನವಲನಗಳಿಂದ ಆಗುವ ಫಲಿತಾಂಶಗಳನ್ನು ಕೃತಕವಾಗಿ ತಡೆಗಟ್ಟಲು ಸರಕಾರವಾಗಲೀ, ಕೇಂದ್ರ ಬ್ಯಾಂಕಾಗಲೀ ಯಾವ ವಿಧವಾದ ಪ್ರಯತ್ನಗಳನ್ನೂ ಮಾಡಬಾರದು. ಅಂದರೆ, ಚಿನ್ನವು ದೇಶದಿಂದ ಹೊರಗಡೆ ಹೋಗುತ್ತಿದ್ದಾಗ, ಆ ದೇಶದಲ್ಲಿ ಬೆಲೆ ಇಳಿಯಬೇಕು; ಚಿನ್ನವು ದೇಶದೊಳಗೆ ಹರಿಯುತ್ತಿದ್ದರೆ, ಆ ದೇಶದಲ್ಲಿ ಬೆಲೆ ಏರಬೇಕು. ಮೊದಲನೆಯ ಯುದ್ಧಾನಂತರ, ಈ ನಿಯಮಗಳ ಉಲ್ಲಂಘನೆಯಿಂದ,

ಹೊನ್ನಿನ ಹಣಪದ್ಧತಿ ಯಶಸ್ವಿಯಾಗಿ ಕೆಲಸಮಾಡಲು ಕಷ್ಟವಾಗಿದೆ.

1914 ನೆಯ ಇಸವಿಗಿಂತ ಹಿಂದೆ, ಅನುಕೂಲವಾತಾವರಣದಲ್ಲಿ ಹೊನ್ನಿನ ಹಣಪದ್ಧತಿ ಸ್ವಚ್ಛಂದವಾಗಿ ಕೆಲಸಮಾಡಲು ಅವಕಾಶವಿತ್ತು. ಆದರೆ, ಆಗಿನ ಅಂತರರಾಷ್ಟ್ರೀಯ ಹೊನ್ನಿನ ಹಣಪದ್ಧತಿಯಲ್ಲಿ ಒಂದು ಮಹತ್ತರವಾದ ನ್ಯೂನತೆ ಇತ್ತು. ಅನೇಕ ದೇಶಗಳು ಈ ಹಣ ಪದ್ಧತಿಯನ್ನನುಸರಿಸುತ್ತಿದ್ದಾಗ, ಎಲ್ಲಾ ದೇಶಗಳ ಆರ್ಥಿಕ ಆಗು ಹೋಗುಗಳನ್ನು ವ್ಯವಸ್ಥೆಗೊಳಿಸಿ, ಕ್ರಮಬದ್ಧವಾಗಿ, ವಿಶ್ವದ ಆರ್ಥಿಕ ರಥವನ್ನು ಸಾಗಿಸಲು ಒಂದು ಅಂತರ ರಾಷ್ಟ್ರೀಯ ಸಂಸ್ಥೆ ಇರಲಿಲ್ಲ. ಕೇಂದ್ರ ಬ್ಯಾಂಕುಗಳು ಹೊನ್ನಿನ ಹಣಪದ್ಧತಿಯ ನಿಯಮಗಳನ್ನು ಅಂಧವಾಗಿ ಅನುಸರಿಸುತ್ತಿದ್ದವು. ಯಾವುದಾದರೂ ಒಂದು ರಾಷ್ಟ್ರದ ಆರ್ಥಿಕ ಆಗುಹೋಗುಗಳ ಅಂಧ ಅನುಕರಣೆ ಸ್ವಾಭಾವಿಕವಲ್ಲ, ಹಿತಕರವಲ್ಲ. ಮೊದಲನೆಯ ಯುದ್ಧಕ್ಕಿಂತ ಹಿಂದೆ, ಬ್ರಿಟನ್ನು ಅಂತರರಾಷ್ಟ್ರೀಯ ಆರ್ಥಿಕ ಕೇಂದ್ರವಾಗಿ ಪ್ರಖ್ಯಾತಿ ಹೊಂದಿದಾಗ, ಎಲ್ಲಾ ದೇಶಗಳೂ ಬ್ರಿಟನ್ನಿನ ಆರ್ಥಿಕ ಸ್ಥಿತಿಯನ್ನು ಅನುಸರಿಸುತ್ತಿದ್ದವು. ಆದರೆ, ಯುದ್ಧಾನಂತರ, ಈ ಸನ್ನಿವೇಶ ಬದಲಾವಣೆಯಾಗಿ, ಎಲ್ಲಾ ದೇಶಗಳೂ ರಾಷ್ಟ್ರೀಯ ಆರ್ಥಿಕ ಸ್ವಪರಿಪೂರ್ಣತೆಯ ಕಡೆ ಹೆಚ್ಚು ಗಮನಕೊಟ್ಟವು.

ಒಂದನೆಯ ಮಹಾಯುದ್ಧಕಾಲದಲ್ಲಿ ಯುದ್ಧದ ಅಪಾರ ವೆಚ್ಚಕ್ಕಾಗಿ ಹಣಬೇಕಾದಾಗ, ತೆರಿಗೆಗಳಿಂದಾಗಲೀ, ಸಾರ್ವಜನಿಕಸಾಲಗಳಿಂದಾಗಲಿ, ಸಾಕಷ್ಟು ಹಣ ಒದಗಲಿಲ್ಲ. ಆಗ, ಹಣಮುಬ್ಬರ ಅನಿವಾರ್ಯವಾಯಿತು. ಕಾಗದದ ಹಣವನ್ನು ಮಿತಿಮೀರಿದ ಪ್ರಮಾಣದಲ್ಲಿ ತಯಾರುಮಾಡುವ ಕ್ರಮ ಬಹು ಸುಲಭವಾದುದು. ಯುದ್ಧರಾಷ್ಟ್ರಗಳು ಈ ವಿಧಾನವನ್ನು ಅನುಸರಿಸಿದವು. "ಹಣಮುಬ್ಬರದ ಕ್ರಮ ಬೀಜದ ಧಾನ್ಯವನ್ನು ತಿಂದಹಾಗೆ" ಎಂದು ಹೇಳಿರುವ ಇಂಗ್ಲೆಂಡಿನ ಅರ್ಥಶಾಸ್ತ್ರಜ್ಞ ಆರ್. ಜಿ. ಹಾಟ್ರೀಯವರ ವಾಕ್ಯ ಗಮನಾರ್ಹವಾಗಿದೆ. ಈ ಹಣಮುಬ್ಬರದ ನಾಗಾಲೋಟದಿಂದ ಸರಕಾರದ ಹಣದಲ್ಲಿದ್ದ ಜನರ ವಿಶ್ವಾಸ ಮಾಯವಾಯಿತು. ಈ ಪರಿ

ಸ್ಥಿತಿಯ ಫಲಿತಾಂಶ, ಇನ್ನೂ ಹೆಚ್ಚಿನ ಹಣದುಬ್ಬರ. ಯುದ್ಧ ಮುಕ್ತಾಯವಾಗುವುದರೊಳಗೆ ಕೆಲವು ದೇಶಗಳಲ್ಲಿ ಹಣದುಬ್ಬರವು ಹತೋಟಿ ಮೀರಿಹೋಗಿತ್ತು. ಇಂಥ ಆರ್ಥಿಕ ಪ್ರಳಯ ಕಾಲದಲ್ಲಿ, ಹೊನ್ನಿನ ಹಣ ಪದ್ಧತಿಯ ಕಾರ್ಯಕ್ಕೆ ಮಹತ್ತರವಾದ ತೊಂದರೆಯಾಯಿತು. 1919 ನೆಯ ಇಸವಿಯ ಆದಿಯಲ್ಲಿ ಬ್ರಿಟನ್ನು ಈ ಪದ್ಧತಿಯನ್ನು ತಾತ್ಕಾಲಿಕವಾಗಿ ತ್ಯಜಿಸಿತು. 1920 ರಲ್ಲಿ ಹಣದುಬ್ಬರ ಸ್ವೇಚ್ಛೆಯಾಗಿ, ನಿರಂಕುಶವಾಗಿ ಉಲ್ಬಣವಾಗುತ್ತಿತ್ತು. ಈ ಸನ್ನಿವೇಶದಲ್ಲಿ ಪ್ರಪಂಚದ ಆರ್ಥಿಕಪರಿಸ್ಥಿತಿಯನ್ನು ಕೂಲಂಕಷವಾಗಿ ಚರ್ಚಿಸುವುದು ಅಗತ್ಯವಾಯಿತು. 1922 ರಲ್ಲಿ ಜಿನೋವ (Genoa) ದಲ್ಲಿ ಆರ್ಥಿಕ ಸಮ್ಮೇಳನ ಸೇರಿ, ಚಿನ್ನದ ಹಣಪದ್ಧತಿಯನ್ನು ಪುನಃ ರೂಪುಗೊಳಿಸಬೇಕೆಂದು ನಿರ್ಧಾರವಾಯಿತು. ಅಂದರೆ, ಸ್ವರ್ಣವಿನಿಮಯ ಪದ್ಧತಿಯನ್ನು ಮೊದಲು ಸ್ಥಾಪಿಸಬೇಕೆಂದು ನಿಶ್ಚಿತವಾಯಿತು. ಈ ನಿರ್ಧಾರದಂತೆ ಹೊನ್ನಿನ ಹಣಪದ್ಧತಿಯು ಅನೇಕ ದೇಶಗಳಲ್ಲಿ ಪುನರ್ಜನ್ಮವನ್ನು ತಾಳಿತು.

ಮೇ 1925 ರಲ್ಲಿ, ಬ್ರಿಟನ್ನು ಹೊನ್ನಿನ ಗಟ್ಟಿ ಪದ್ಧತಿಯನ್ನು ಸ್ಥಾಪಿಸಿತು. ಆಗ, ಇಂಗ್ಲೆಂಡಿನ ಕೇಂದ್ರ ಬ್ಯಾಂಕಿನಲ್ಲಿ ಸಾಕಾದಷ್ಟು ಚಿನ್ನದನಿಧಿ ಸೇರಿತ್ತು. ಪೌಂಡ್--ಡಾಲರ್ ವಿನಿಮಯ ಬೆಲೆಯು ಯುದ್ಧಕ್ಕಿಂತ ಹಿಂದಿನ ವಿನಿಮಯ ಬೆಲೆಯಂತೆ ಒಂದು ಪೌಂಡು — 4.86⅔ ಡಾಲರುಗಳೆಂದು ನಿಶ್ಚಿತವಾಯಿತು. ಪ್ರಪಂಚದ ಪ್ರಚಲಿತ ಬೆಲೆಗಳ ಸಂಬಂಧದಲ್ಲಿ, ಬ್ರಿಟನ್ನಿನ ಪೌಂಡ್‌ಸ್ಟರ್ಲಿಂಗಿನ ಡಾಲರು ವಿನಿಮಯ ಬೆಲೆಯು ಬಹು ಹೆಚ್ಚೆಂದು ಸುಪ್ರಸಿದ್ಧ ಅರ್ಥಶಾಸ್ತ್ರಜ್ಞ ಜೆ. ಎಮ್. ಕೇನ್ಸ್‌ರವರು ತಮ್ಮ ಅಭಿಪ್ರಾಯವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದರು. • ಪೌಂಡ್ ಸ್ಟರ್ಲಿಂಗಿನ ವಿನಿಮಯ ಬೆಲೆಯ ಹೆಚ್ಚುವರಿಯಿಂದ, ಬ್ರಿಟನ್ನಿನ ರಫ್ತು ವ್ಯಾಪಾರಕ್ಕೆ ಬಹು ತೊಂದರೆಯಾಯಿತು. ಸಂಬಂಧಪಟ್ಟ ಅಧಿಕಾರಿಗಳ ಆರ್ಥಿಕ ನೀತಿಯಿಂದ, ಅಂದರೆ ಚಿನ್ನದ ನಿಧಿಯನ್ನು ಕಾಪಾಡುವ ನೀತಿಯಿಂದ, ಹಣದ ಪ್ರಮಾಣದ ಸಂಕೋಚನವು (Deflation) ಅನಿವಾರ್ಯವಾಗಿ ಆರ್ಥಿಕಕ್ಷೇತ್ರದಲ್ಲಿ ಚಟು

ವಟಿಕೆ ಇಳಿಮುಖವಾಯಿತು. ಅತ್ಯಂತ ಉಗ್ರವಾದ ಆರ್ಥಿಕ ದುಃಸ್ಥಿತಿ ಸನ್ನಿಹಿತವಾಗುತ್ತಿತ್ತು; ಇದು ವಿಶ್ವವ್ಯಾಪಿಯಾಯಿತು. 1929 ರಿಂದ 1931 ರಲ್ಲಿ, ಬ್ರಿಟನ್ನಿನ ರಫ್ತುವ್ಯಾಪಾರ ಅರ್ಧದಷ್ಟು ಇಳಿಯಿತು. ಇದಲ್ಲದೆ, ಅಪ್ರತ್ಯಕ್ಷವಾದ ರಫ್ತುಗಳಿಂದ—(ಹಡಗು ಸಂಚಾರದಿಂದ ಬರುವ ಆದಾಯ ಮತ್ತು ಬಂಡವಾಳದ ಮೇಲಿನ ಬಡ್ಡಿ—) ಬರುವ ಆದಾಯ ಶೇಕಡ 40 ರಷ್ಟು ಇಳಿಯಿತು. ಆಕಾಲದಲ್ಲಿ ಆಮದು ಸಾಮಾನುಗಳ ಪ್ರಮಾಣ ಇಳಿಯಲೇ ಇಲ್ಲ. ಇದರಿಂದ, ಬ್ರಿಟನ್ನಿನ ವಿದೇಶಿ ವ್ಯಾಪಾರದ ಸಾಲಸೋಲಗಳಲ್ಲಿ, 1929 ರಲ್ಲಿ 100 ಮಿಲಿಯನ್ ಪೌಂಡುಗಳ ಉಳಿತಾಯವಿದ್ದುದು 1931 ರಲ್ಲಿ 100 ಮಿಲಿಯನ್ ಪೌಂಡುಗಳ ನಷ್ಟಾಂಶ ಬಂದಿತು. ಚಿನ್ನದ ಹಣಪದ್ಧತಿಯ ನಿಯಮಗಳಿಗನುಸಾರವಾಗಿ, ಅಂತರರಾಷ್ಟ್ರೀಯ ವ್ಯಾಪಾರದ ಸಾಲ ಸೋಲಗಳ ಅಸಮಾನತೆಯ ಸಿಲುಕನ್ನು ಸರಿಪಡಿಸಲು ಒಂದೇ ಹಾದಿ -ಹಣದಸಂಕೋಚ, ಬೆಲೆಗಳಲ್ಲಿ ಇಳಿತಾಯ. ಇದರಿಂದ, ಆಮದು ಕಡಮೆಯಾಗಿ, ರಫ್ತುವ್ಯಾಪಾರಕ್ಕೆ ಹೆಚ್ಚು ಪ್ರೋತ್ಸಾಹವುಂಟಾಗಿ, ಸಾಲಸೋಲಗಳ ಸಮಸ್ಯೆ ಸ್ವಾಭಾವಿಕವಾಗಿ ಪರಿಹಾರವಾಗುತ್ತಿತ್ತು. ಈ ಕ್ರಮವನ್ನನುಸರಿಸಿದ್ದರೆ, ರಾಷ್ಟ್ರಾದಾಯ ಕೇವಲ ಕಡಮೆಯಾಗಿ, ನಿರುದ್ಯೋಗ ಉಲ್ಬಣವಾಗಿ, ರಾಜಕೀಯ ಹಾಗೂ ಸಾಮಾಜಿಕ ಆಂದೋಲನದಿಂದ, ಧ್ಯೇಯ ಸಾಧನೆಯಾಗುತ್ತಿತ್ತು. ಇದಲ್ಲದೆ, ಪ್ರಪಂಚದ ಎಲ್ಲಾ ರಾಷ್ಟ್ರಗಳ ಆದಾಯ ಕ್ಷೀಣವಾಗುತ್ತಿರುವ ಸಮಯ ದಲ್ಲಿ, ಹಣದ ಪ್ರಮಾಣದ ಸಂಕುಚಿತದಿಂದ ವ್ಯಾಪಾರದ ಸಾಲಸೋಲ ಗಳ ಸಿಲುಕಿನಲ್ಲಿ ನಷ್ಟಾಂಶ ನಿವಾರಣೆಯಾಗಲು ಸಾಧ್ಯವಿರಲಿಲ್ಲ. ಇದ ರಿಂದ, ಆಮದು ಮಾತ್ರ ಕಡಮೆಯಾಗಿ ರಫ್ತುವ್ಯಾಪಾರ ಹೆಚ್ಚಾಗದೆ, ಉಳಿದ ಎಲ್ಲಾ ರಾಷ್ಟ್ರಗಳಿಗೂ ಹಣದ ಸಂಕುಚಿತದ ದುಷ್ಪರಿಣಾಮ ಗಳ ಬಿಸಿ ತಟ್ಟುತ್ತಿತ್ತು.

ಈ ಸನ್ನಿವೇಶದಲ್ಲಿ, ಬ್ರಿಟನ್ನಿನ ಹಾಗೂ ಇತರ ರಾಷ್ಟ್ರಗಳ ಆರ್ಥಿಕ ಸ್ಥಿತಿಯನ್ನು ಸರಿಪಡಿಸಲು ಪೌಂಡಿನ ವಿನಿಮಯ ಬೆಲೆ ಯನ್ನು ಇಳಿಸುವುದು ವಿಹಿತವಾದ ಕ್ರಮವಾಗಿತ್ತು. ಆದರೆ, ಪೌಂಡಿನ

ಮೌಲ್ಯದ ವಿನಿಮಯದರವನ್ನು ಇಳಿಸಲು ಬ್ರಿಟನ್ನು ಇಷ್ಟಪಡಲಿಲ್ಲ. ಪೌಂಡಿನ ಪ್ರಚಲಿತ ವಿನಿಮಯ ಬೆಲೆಯನ್ನು ಒಂದು ವಿಧವಾದ ಗೌರವವೆಂದು ಭಾವಿಸಲಾಗಿತ್ತು. ೧೯೩೧ ರಲ್ಲಿ ಬಹು ಮುಖ್ಯವಾದ ನಾಣ್ಯದ ಮೌಲ್ಯವನ್ನು ನಿರ್ದಿಷ್ಟವಾದ ಪ್ರಮಾಣದಲ್ಲಿ ಇಳಿಸಲು ಯಾವ ನೀತಿಯೂ ಪ್ರತಿಪಾದಿತವಾಗಿರಲಿಲ್ಲ. ನಾಣ್ಯ ಮೌಲ್ಯದ ಇಳಿವರಿಯಿಂದ ಹಣದುಬ್ಬರಕ್ಕೆ ಅವಕಾಶವಾಗುತ್ತದೆ ಎಂದು ಯೂರೋಪಿನ ಇತರ ದೇಶಗಳಲ್ಲಿದ್ದ ಭಯ ಬ್ರಿಟನ್ನಿನಲ್ಲಿ ಇಲ್ಲದೇ ಇದ್ದರೂ, ನಾಣ್ಯ ಮೌಲ್ಯದ ಇಳಿವರಿಯು ರಾಷ್ಟ್ರದ ಆರ್ಥಿಕ ಬಲಹೀನತೆಯ ಚಿಹ್ನೆಯೆಂದು ತಿಳಿಯಲಾಗಿತ್ತು. ಇದಲ್ಲದೆ, ಬ್ರಿಟನ್ನು ಬಹುಸುರಕ್ಷಿತವಾದ ಸ್ಥಳವೆಂದು ಅನೇಕ ರಾಷ್ಟ್ರಗಳು ಅಪಾರವಾದ ಪ್ರಮಾಣದಲ್ಲಿ ಹಣವನ್ನು ಇಟ್ಟಿದ್ದುದರಿಂದ ನಾಣ್ಯ ಮೌಲ್ಯದ ಇಳಿವರಿ ನಂಬಿಕೆ ದ್ರೋಹವಾಗುತ್ತದೆಂದು ಯೋಚಿಸಲಾಯಿತು.

ಆದರೆ, ಜುಲೈ, ಆಗಸ್ಟ್ ಮತ್ತು ಸೆಪ್ಟೆಂಬರು ತಿಂಗಳುಗಳಲ್ಲಿ ಲಂಡನ್ನಿನಲ್ಲಿಟ್ಟಿದ್ದ ಇತರ ರಾಷ್ಟ್ರಗಳ ಹಣ ಅವಿಚ್ಛಿನ್ನವಾಗಿ ವರ್ಗಾವಣೆಯಾಯಿತು. ಇದರಿಂದ; ಬ್ರಿಟನ್ನಿನ ಬಡ್ಜೆಟ್ಟನ್ನು ಸರಿದೂಗಿಸುವುದು ಕಷ್ಟವಾಯಿತು ಇತರ ರಾಷ್ಟ್ರಗಳ ಹಣ ಬ್ರಿಟನ್ನಿನಿಂದ ಸಾಗಿ ಹೋಗಿದ್ದಲ್ಲದೆ, ಚಿನ್ನದ ನಿಧಿಯು ಕ್ಷೀಣವಾಗುತ್ತಾ ಬಂದಿತು. ಈ ವಿಷಮ ಪರಿಸ್ಥಿತಿಯಲ್ಲಿ, ಚಿನ್ನದ ಹಣಪದ್ಧತಿಯನ್ನು ಮುಂದುವರಿಸಲು ಅಸಾಧ್ಯವಾಯಿತು. ಸೆಪ್ಟೆಂಬರ್ 2 ನೇ ತಾರೀಖು (ಭಾನುವಾರ) ೧೯೩೧ ರಲ್ಲಿ, ಬ್ರಿಟನ್ನು ಹೊನ್ನಿನ ಹಣ ಪದ್ಧತಿಯನ್ನು ತ್ಯಜಿಸಲು ನಿರ್ಧಾರಮಾಡಿ, 21 ನೆಯ ತಾರೀಖಿನಿಂದ ಈ ಹಣಪದ್ಧತಿ ಮಾಯವಾಯಿತು. ಪೌಂಡಿನ ವಿನಿಮಯ ಬೆಲೆ ಸೇಕಡ ೨೦ ರಷ್ಟು ಕಡಮೆಯಾಗಿ, 1931 ನೆಯ ಇಸವಿಯ ಕೊನೆಯಲ್ಲಿ ಸೇಕಡ ೩೦ ರಷ್ಟು ಕಡಮೆಯಾಯಿತು. ಅಂದರೆ ಪೌಂಡಿನ ವಿನಿಮಯ ಬೆಲೆ 4·86 ಡಾಲರುಗಳಿಂದ 3·23 ಡಾಲರುಗಳಿಗೆ ಸ್ವಾಭಾವಿಕವಾಗಿ ಇಳಿಯಿತು. ಇದರಿಂದ, ಬ್ರಿಟನ್ನಿನ ರಫ್ತು ವ್ಯಾಪಾರಕ್ಕೆ ಬಹು ಅನುಕೂಲವಾಗಿ, ಆಮದು ಸಾಮಾನುಗಳ ಪ್ರಮಾಣ ಕಡಮೆಯಾಯಿತು. 1931 ರ

ವರೆಗೆ ಬ್ರಿಟನ್ನಿನ ರಫ್ತು ವ್ಯಾಪಾರಗಾರರಿಗೆ ಪೌಂಡಿನ ಮೌಲ್ಯದ ಹೆಚ್ಚುವರಿಯಿಂದ ಬಹು ತೊಂದರೆಯಾಗಿತ್ತು; ಅನಂತರ ಎರಡು ವರ್ಷಗಳವರೆಗೆ, ವಿದೇಶಿ ವ್ಯಾಪಾರದಲ್ಲಿ ಬ್ರಿಟನ್ನಿಗೆ ಅಸಾಧಾರಣವಾದ ವ್ಯಾಪಾರ ಸೌಲಭ್ಯಗಳು ದೊರೆತವು. ಆರ್ಥಿಕ ಮುಃಸ್ಥಿತಿಯ ವಿಷಮತೆಯಲ್ಲಿ, ಬ್ರಿಟನ್ನು ಹೊನ್ನಿನ ಹಣಪದ್ಧತಿಯನ್ನು ತ್ಯಜಿಸಿದ್ದರಿಂದ ಆರ್ಥಿಕ ಪ್ರಗತಿಗೆ ಬಹು ಅನುಕೂಲವಾಯಿತು. ಮೊದಲು ಬ್ರಿಟನ್ನು ಮಾತ್ರ ಈ ರೀತಿಯಾಗಿ ಪೌಂಡಿನ ಮೌಲ್ಯವನ್ನು ಇಳಿಸಿದ್ದರಿಂದ, ಆ ದೇಶದ ರಫ್ತು ವ್ಯಾಪಾರವು ಹೆಚ್ಚಾಯಿತು.

ಹೊನ್ನಿನ ಹಣಪದ್ಧತಿಯನ್ನು ತ್ಯಜಿಸುವುದರಲ್ಲಿ ಬ್ರಿಟನ್ನು ಮೊದಲನೆಯದು ಎಂದು ಹೇಳಲು ಸಾಧ್ಯವಿಲ್ಲ. ದಕ್ಷಿಣ ಅಮೆರಿಕದ ದೇಶಗಳು, ಆಸ್ಟ್ರೇಲಿಯಾ ಮತ್ತು ನ್ಯೂಜೀಲೆಂಡ್, ವ್ಯವಸಾಯ ಉತ್ಪನ್ನಗಳ ಬೆಲೆಗಳು ಅಪಾರವಾಗಿ ಇಳಿದುದರ ಪರಿಣಾಮವಾಗಿ ೧೯೨೯ ರಲ್ಲಿ ಮತ್ತು ೧೯೩೦ ರಲ್ಲಿ, ಹೊನ್ನಿನ ಹಣ ಪದ್ಧತಿಯನ್ನು ತ್ಯಜಿಸಿದ್ದವು. ಆದರೆ, ಬ್ರಿಟನ್ನಿನ ಈ ಆರ್ಥಿಕ ನೀತಿಯ ಪರಿಣಾಮಗಳು, ಆ ದೇಶದ ವ್ಯಾಪಾರ ಪ್ರಮುಖತೆಯ ಹಾಗೂ ಅಂತರರಾಷ್ಟ್ರೀಯ ಬಂಡವಾಳ ಕೇಂದ್ರದ ಮತ್ತು ವ್ಯಾಪಾರದ ಲೇವಾದೇವಿಗಳಲ್ಲಿ ಪೌಂಡಿನ ಮಹತ್ವಗಳಿಗನುಸಾರವಾಗಿದ್ದವು. ದಕ್ಷಿಣ ಆಫ್ರಿಕ, ಕೆನಡ, ಬ್ರಿಟಿಷ್ ಹಾಂಡುರಾಸ್ ಮತ್ತು ಹಾಂಗ್‌ಕಾಂಗ್ ಇವು ಬಿಟ್ಟು, ಬ್ರಿಟಿಷ್ ಚಕ್ರಾಧಿಪತ್ಯದ ಇತರ ಎಲ್ಲಾ ದೇಶಗಳೂ, ಹೊನ್ನಿನ ಹಣಪದ್ಧತಿಯನ್ನು ತ್ಯಜಿಸಿ, ಸ್ಟರ್ಲಿಂಗಿನೊಂದಿಗೆ ತಮ್ಮ ನಾಣ್ಯಗಳ ಸಂಬಂಧವನ್ನಿಟ್ಟುಕೊಂಡವು. ಬ್ರಿಟನ್ನಿನ ಆರ್ಥಿಕ ನೀತಿಗೆ ಅಧೀನವಾಗಿದ್ದ ಇನ್ನೂ ಕೆಲವು ದೇಶಗಳೂ, ಸ್ಕ್ಯಾಂಡಿನೇವಿಯನ್ ದೇಶಗಳು ಪೋರ್ಚುಗಲ್ ಮತ್ತು ಈಜಿಪ್ಟ್ ಹೊನ್ನಿನ ಆಧಾರದ ಪದ್ಧತಿಯನ್ನು ಬಿಟ್ಟು, ತಮ್ಮ ನಾಣ್ಯಗಳನ್ನು ಸ್ಟರ್ಲಿಂಗಿಗೆ ಅಧೀನಪಡಿಸಿದವು, ಸೆಪ್ಟೆಂಬರ್ ೧೯೩೧ ರಿಂದ ಆಗಸ್ಟ್ ೧೯೩೨ ರಲ್ಲಿ ಸ್ಟರ್ಲಿಂಗ್ ಗುಂಪಿನ ರಾಷ್ಟ್ರಗಳಲ್ಲದೆ, ಇನ್ನೂ ಹನ್ನೆರಡು ರಾಷ್ಟ್ರಗಳು ಹೊನ್ನಿನ ಪದ್ಧತಿಯನ್ನು ಕಳಚಿಹಾಕಿದವು. ೧೯೩೩ರಲ್ಲಿ ಅಮೆರಿಕ ಡಾಲರಿನ ಮೌಲ್ಯವನ್ನು

ಇಳಿಸಿದಾಗ. ಪುನಃ ವಿನಿಮಯ ಬೆಲೆಗಳ ಇಳಿತಾಯದ ಸ್ಪರ್ಧೆ ಪ್ರಾರಂಭವಾಗಿ, ಅಂತರರಾಷ್ಟ್ರೀಯ ಲೇವಾದೇವಿಗಳ ಪ್ರಮಾಣದ ಸ್ವರ್ಣಪದ್ಧತಿ ತನ್ನ ಬಾಹ್ಯರೂಪವನ್ನೂ ಕಳೆದುಕೊಂಡಿತು. ಇದರ ಸ್ಥಾನದಲ್ಲಿ ಅಧಿಕೃತವಾದ ಹಣ ಪದ್ಧತಿಗಳು ಹಾಗೂ ಹಣ ಪ್ರದೇಶಗಳು ರೂಪುಗೊಂಡವು. ಇದೇ ಕಾಲದಲ್ಲಿ ಸ್ಟರ್ಲಿಂಗ್ ಪ್ರದೇಶ ಸ್ಥಾಪನೆಯಾಯಿತು. ಕೆಲವು ದೇಶಗಳು ತಮ್ಮ ನಾಣ್ಯಗಳ ವಿನಿಮಯ ಬೆಲೆಗಳನ್ನು ಸ್ಟರ್ಲಿಂಗಿನ ಸಂಬಂಧದಲ್ಲಿ ಸ್ಥಿರವಾಗಿಡಲು ನಿಶ್ಚಯಿಸಿದ್ದರಿಂದ ಬ್ರಿಟನ್ನಿನ ಯಾಜಮಾನ್ಯದಲ್ಲಿ ಸ್ಟರ್ಲಿಂಗ್ ಪ್ರದೇಶದ ರೂಪ ತಾಳಿತು. ಮೊದಲು ಈ ಕ್ಷೇತ್ರದಲ್ಲಿ ಕೆನಡವಿನಃ ಉಳಿದ ಬ್ರಿಟಿಷ್ ಕಾಮನ್ ವೆಲ್ತ್ ದೇಶಗಳು ಸೇರಿದ್ದವು. ಇದಲ್ಲದೆ ಕೆಲವು ಪೋರ್ಚುಗಲ್ ರಾಷ್ಟ್ರಗಳು ತಕ್ಷಣ ಈ ಕ್ಷೇತ್ರಕ್ಕೆ ಸೇರಿದವು. ಸ್ಕಾಂಡಿನೇವಿಯ ರಾಷ್ಟ್ರಗಳು ೧೯೩೩ರಲ್ಲಿ ಇರಾನ್ ಮತ್ತು ಲಾಟ್ವಿಯ ೧೯೩೬ ರಲ್ಲಿ ಸೇರಿದವು. ಇದಲ್ಲದೆ, ಜಪಾನ್ ಮತ್ತು ಅರ್ಜೆಂಟೈನ ಬಹಳ ವರ್ಷಗಳ ಕಾಲ ತಮ್ಮ ನಾಣ್ಯಗಳ ವಿನಿಮಯ ಬೆಲೆಯನ್ನು ಸ್ಟರ್ಲಿಂಗ್ ಸಂಬಂಧದಲ್ಲಿ ನಿರ್ಧರಿಸುತ್ತಿದ್ದರೂ, ಇವು ಸ್ಟರ್ಲಿಂಗ್ ಪ್ರದೇಶದ ರಾಷ್ಟ್ರಗಳಾಗಿ ಪರಿಗಣಿತವಾಗಲಿಲ್ಲ. ೧೯೩೯ ರಲ್ಲಿ, ಬ್ರಿಟನ್ನಿನೊಂದಿಗೆ ರಾಜಕೀಯ ಸಂಬಂಧವಿಲ್ಲದ ಕೆಲವು ದೇಶಗಳು ಸ್ಟರ್ಲಿಂಗಿನ ಸಂಬಂಧವನ್ನು ತ್ಯಜಿಸಿದ್ದರಿಂದ, ಈ ಪ್ರದೇಶ ಸ್ವಲ್ಪ ಮಟ್ಟಿಗೆ ಸಂಕುಚಿತವಾಯಿತು. ಎರಡನೆಯ ಮಹಾಯುದ್ಧ ಕಾಲದಲ್ಲಿ ವಿನಿಮಯ ಹತೋಟಿಗಳಿಂದ ಈ ಪ್ರದೇಶವು ವ್ಯವಸ್ಥೆಗೊಂಡು, ಒಂದು ಕ್ರಮಬದ್ಧವಾದ, ಸುಹತ್ವಪೂರಿತವಾದ ಆರ್ಥಿಕ ಪ್ರದೇಶವಾಯಿತು. ಈಗ ಈ ಪ್ರದೇಶಕ್ಕೆ ಈ ಕೆಳಗಿನ ದೇಶಗಳು ಸೇರಿವೆ. ಕೆನಡ ಮತ್ತು ನ್ಯೂ ಫೌಂಡ್ಲೆಂಡ್ ಬಿಟ್ಟು ಬ್ರಿಟಿಷ್ ಕಾಮನ್‌ವೆಲ್ತಿನ ಎಲ್ಲಾ ದೇಶಗಳು* ಬ್ರಿಟನ್ನಿನ ರಕ್ಷಣೆಗೆ ಒಳಪಟ್ಟ ಪ್ರದೇಶಗಳಾದ ಕ್ಯಾಮರೂನ್ಸ್, ನೌರ, ನ್ಯೂಗಿನಿ,

*ಪಾಕೀಸ್ಥಾನ ಈ ಪ್ರದೇಶಕ್ಕೆ ಸೇರಿದೆ.

ನೈರುತ್ಯ ಆಫ್ರಿಕ, ಟ್ಯಾಂಗನೀಕ, ಟೋಗೋಲ್ಯಾಂಡ್ ಮತ್ತು ಪಶ್ಚಿಮ ಸಾಮೋಅ; ಬ್ರಿಟನ್ನಿನ ಕಾವಲಿಗೆ ಒಳಪಟ್ಟ ಮತ್ತು ಸಾಮಂತ ರಾಷ್ಟ್ರಗಳಾದ ಬರ್ಮ, ಐಸ್ಲೆಂಡ್. ಐರ್ಲೆಂಡ್ ಮತ್ತು ಇರಾಕ್; ಐರ್. ಈ ಪ್ರದೇಶದ ರಾಷ್ಟ್ರಗಳಲ್ಲಿ ಒಂದು ದೇಶದ ಲೆಕ್ಕದಿಂದ ಇನ್ನೊಂದು ದೇಶಕ್ಕೆ ಸ್ಟರ್ಲಿಂಗ್ ವರ್ಗಾವಣೆಯಾಗಲು ಯಾವ ಆತಂಕವೂ ಇಲ್ಲ. ಆದರೆ ದಕ್ಷಿಣ ಆಫ್ರಿಕ, ಹಾಂಗ್‌ಕಾಂಗ್ ಇಂಡಿಯಾ ಮತ್ತು ಆಸ್ಟ್ರೇಲಿಯ ದೇಶಗಳಲ್ಲಿ ಸ್ಥಳೀಯ ಹತೋಟಿಗಳಿಂದ ಸ್ಟರ್ಲಿಂಗಿನ ವರ್ಗಾವಣೆಗೆ ಕೆಲವು ನಿಬಂಧನೆಗಳಿವೆ. ಈ ಪ್ರದೇಶದ ರಾಷ್ಟ್ರಗಳು ತಮ್ಮ ರಿಜರ್ವ್ ಹಣವನ್ನು ಸ್ಟರ್ಲಿಂಗಿನಲ್ಲಿಡಬೇಕೆಂದು ತೀರ್ಮಾನವಾಯಿತು. ಈ ರಾಷ್ಟ್ರಗಳು ಅಂತರ ರಾಷ್ಟ್ರೀಯ ವ್ಯಾಪಾರದಿಂದ ಸಂಪಾದನೆಯಾದ ಬಲಿಷ್ಠನಾಣ್ಯಗಳನ್ನು (Hard Currency) ಅಂದರೆ, ಡಾಲರುಗಳನ್ನು ಸ್ಟರ್ಲಿಂಗ್ ಪ್ರದೇಶ ಡಾಲರು ನಿಧಿಯಲ್ಲಿಡಬೇಕೆಂದು ನಿರ್ಧಾರವಾಯಿತು. ಸ್ಟರ್ಲಿಂಗ್ ಪ್ರದೇಶದ ಮುಖಂಡ ರಾಷ್ಟ್ರ ಬ್ರಿಟನ್ನು; ಬ್ರಿಟನ್ನು ಈ ಪ್ರದೇಶದ ಮುಖ್ಯ ಬ್ಯಾಂಕರ್ ಈ ರೀತಿಯಾಗಿ ಶೇಖರಣೆಯಾದ ಡಾಲರುಗಳನ್ನು ಆಯಾ ದೇಶದ ಆವಶ್ಯಕತೆಗಳಿಗನುಸಾರವಾಗಿ ಹಂಚುವ ಅಧಿಕಾರ ಬ್ರಿಟನ್ನಿಗಿದೆ.

ಬ್ರಿಟನ್ನಿನ ಹೊಸ ಹಣಪದ್ಧತಿಯು ನಿವಾರಣೆಯಿಂದ ನಾಣ್ಯ ಮೌಲ್ಯದ ಇಳಿವರಿ ಒಂದು ಗೌರವವಾದ ಆರ್ಥಿಕ ಕ್ರಮವೆಂದು ಸಿದ್ಧಾಂತವಾಗಿ ಇತರ ಅನೇಕ ದೇಶಗಳು ಈ ರೀತಿಯಾಗಿ ಅಪ್ರತ್ಯಕ್ಷವಾಗಿ ತಮ್ಮ ನಾಣ್ಯಗಳ ಮೌಲ್ಯದ ಇಳಿವರಿಯನ್ನು ಸಾಧಿಸಿದವು. ಇದರಿಂದ ಸ್ಟರ್ಲಿಂಗ್ ಕ್ಷೇತ್ರ ಬಲಗೊಂಡು, ಬಹು ಮುಖ್ಯವಾದ ಆರ್ಥಿಕ ಪ್ರದೇಶವಾಯಿತು. ಈ ಸ್ಟರ್ಲಿಂಗ್ ಪ್ರದೇಶದಲ್ಲಿ ಸರ್ವಸಮ್ಮತವಾದ ಹಣ ಬ್ರಿಟನ್ನಿನ ಪೌಂಡ್ ಸ್ಟರ್ಲಿಂಗ್. ಎರಡನೆಯ ಮಹಾಯುದ್ಧ ಕಾಲದಲ್ಲಿ ಈ ಪ್ರದೇಶದಿಂದ ಪಶ್ಚಿಮಾರ್ಧಗೋಳದ ಅಮೆರಿಕದ ಸಂಯುಕ್ತ ರಾಷ್ಟ್ರಗಳು, ಕೆನಡ ಮತ್ತು ಲ್ಯಾಟಿನ್ ಅಮೆರಿಕ ಈ ದೇಶಗಳಿಗೆ ರಫ್ತು ಸಾಮಾನುಗಳ ಪ್ರಮಾಣ ಕಡಮೆಯಾಗಿ, ಆಮದು ಮಾತ್ರ ಹೆಚ್ಚಾಯಿತು. ಬ್ರಿಟನ್ನಿನ ಹಾಗೂ ಒಟ್ಟು ಸ್ಟರ್ಲಿಂಗ್

ಕ್ಷೇತ್ರದ ಡಾಲರುಗಳ ಸಮಸ್ಯೆ ಅತ್ಯಂತ ಉಗ್ರವಾಯಿತು. ಸೆಪ್ಟೆಂಬರ್ ೧೯೩೯ ರಲ್ಲಿ ಬ್ರಿಟನ್ನಿನಲ್ಲಿ ೪೩೮೫ ಮಿಲಿಯನ್ ಡಾಲರುಗಳ ನಿಧಿ ಇತ್ತು. ಇದರಿಂದ, ಯುದ್ಧದ ವೆಚ್ಚವನ್ನು ಸುಲಭವಾಗಿ ನಿರ್ವಹಿಸಬಹುದೆಂದು ನಿರೀಕ್ಷಣೆ ಇತ್ತು. ೧೯೪೦ ನೆಯ ಬೇಸಿಗೆಯವರೆಗೆ ಯುದ್ಧದ ವೆಚ್ಚ ಬ್ರಿಟನ್ನಿನ ಡಾಲರುಗಳ ನಿಧಿಯೊಳಗೇ ಇತ್ತು. ಆದರೆ, ೧೯೪೦ ನೆಯ ಇಸವಿಯ ಕೊನೆಯೊಳಗೆ ಬ್ರಿಟನ್ನಿನ ಡಾಲರು ನಿಧಿಯೆಲ್ಲಾ ಕ್ಷೀಣವಾಗುತ್ತಾ ಬಂದಿತು. ಬ್ರಿಟನ್ನಿನ ಚಿನ್ನದ ಹಾಗೂ ಡಾಲರುನಿಧಿ ಪೂರ್ತಿಯಾಗಿ ವೆಚ್ಚವಾಯಿತು. ಈ ವಿಷಮ ಸನ್ನಿವೇಶದಲ್ಲಿ ಅಮೇರಿಕನರು ಲೆಂಡ್-ಲೀಸ್ ಒಪ್ಪಂದದಂತೆ ಬ್ರಿಟನ್ನಿಗೆ ಡಾಲರುಗಳ ಸಾಲವನ್ನು ಒದಗಿಸಲು ಒಪ್ಪಿಕೊಂಡರು.† ಈ ಒಪ್ಪಂದದಿಂದ ಬಂದ ಹಣವನ್ನು ಅಂದರೆ ಡಾಲರುಗಳನ್ನು ಯುದ್ಧದ ವೆಚ್ಚಕ್ಕಾಗಿ ಮಾತ್ರ ಉಪಯೋಗಿಸಬೇಕೆಂದು ತೀರ್ಮಾನವಾಯಿತು. ಆದರೆ ಯುದ್ಧದ ವೆಚ್ಚ ಯಾವುದು, ಯಾವುದು ಕೇವಲ ಸಾಮಾನ್ಯ ವೆಚ್ಚ ಎನ್ನುವುದನ್ನು ತೀರ್ಮಾನ ಮಾಡುವುದು ಕಷ್ಟವಾಯಿತು. ಬ್ರಿಟನ್ನಿನ ಎಲ್ಲಾ ಚಟುವಟಿಕೆಗಳೂ ಯುದ್ಧ ಕ್ಷೇತ್ರದಲ್ಲೇ ಕೇಂದ್ರೀಕೃತವಾಗಿದ್ದವು ಅಥವಾ ಯುದ್ಧಕ್ಕೇ ಮೀಸಲಾಗಿದ್ದವು. ಆದ್ದರಿಂದ, ಈ ಒಪ್ಪಂದ ಅಷ್ಟು ಅನುಕೂಲವಾಗಿರಲಿಲ್ಲ. ಈ ಲೆಂಡ್-ಲೀಸ್ ಸಹಾಯದಿಂದ ಒಟ್ಟು ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ೩೦,೦೦೦ ಮಿಲಿಯನ್ ಡಾಲರುಗಳ ಸಹಾಯ ಒದಗಿತು. ಆರು ವರ್ಷಗಳು ಬಿಡುವಿಲ್ಲದೆ ನಡೆದ ಯುದ್ಧದ ಅಪಾರ ವೆಚ್ಚದಲ್ಲಿ ಇದರಿಂದ ಸ್ವಲ್ಪ ಮಟ್ಟಿಗೆ ಮಾತ್ರ ಪ್ರಯೋಜನವಾಯಿತು. ಯುದ್ಧಾನಂತರ ಬ್ರಿಟನ್ನಿನ ಹಾಗೂ ಸ್ಟರ್ಲಿಂಗ್ ಕ್ಷೇತ್ರದ ಡಾಲರುಗಳ ಸಮಸ್ಯೆ ಇನ್ನೂ ಉಗ್ರವಾಗಿ ಸ್ಟರ್ಲಿಂಗ್ ಪ್ರದೇಶದಲ್ಲಿ ಡಾಲರುಗಳ ಕ್ಷಾಮವೇ ತಲೆದೋರಿತು. ಈ ಡಾಲರುಗಳ ಕ್ಷಾಮವನ್ನು ಮುಂದೆ ಪರಿಶೀಲಿಸಲಾಗುತ್ತದೆ.

---

† ಬ್ರಿಟನ್ನು ಅಮೇರಿಕದ ಲೆಂಡ್-ಲೀಸ್ ಒಪ್ಪಂದ ಮಾರ್ಚಿ ೧೧, ೧೯೪೧ ರಲ್ಲಿ ಕಾರ್ಯರೂಪಕ್ಕೆ ಬಂದಿತು.

# ೨ ಅಂತರರಾಷ್ಟ್ರೀಯ ಆರ್ಥಿಕ ನಿಧಿ

ಎರಡು ಮಹಾಯುದ್ಧಗಳ ನಡುವಿನ ಕಾಲದಲ್ಲಿ ಅಂದರೆ, ೧೯೧೯-೧೯೩೯ ರ ಕಾಲದಲ್ಲಿ ಅನೇಕ ದೇಶಗಳ ನಾಣ್ಯಗಳ ವಿನಿಮಯ ಬೆಲೆಯಲ್ಲಿ ಮಹತ್ತರವಾದ ಏರು ಪೇರುಗಳಾದುವೆಂಬುದು ಈಗಾಗಲೇ ವೇದ್ಯವಾಗಿದೆ. ಈ ಏರಿಳಿತಗಳ ಬಿಸಿಯಲ್ಲಿ ಬ್ರಿಟನ್ನು ಮತ್ತು ಅನೇಕ ರಾಷ್ಟ್ರಗಳು ಹೊನ್ನಿನ ಹಣ ಪದ್ಧತಿಯನ್ನು ತ್ಯಜಿಸಿ ಸ್ಟರ್ಲಿಂಗ್ ಪ್ರದೇಶವನ್ನು ನಿರ್ಮಿಸಿದ ಸನ್ನಿವೇಶವನ್ನು ಈಗಾಗಲೇ ಪರಿಶೀಲಿಸಲಾಗಿದೆ. ಈ ರೀತಿಯಾದ ಬೇರೆಬೇರೆ ಆರ್ಥಿಕ ಪ್ರದೇಶಗಳ ನಿರ್ಮಾಣದಿಂದ, ಅಂತರ ರಾಷ್ಟ್ರೀಯ ಆರ್ಥಿಕ ಸಹಕಾರವು ನಾಗಾಲೋಟದಲ್ಲಿ ಕಡಿಮೆಯಾಯಿತು. ಬ್ರಿಟನ್ನು ಮತ್ತು ಬ್ರಿಟನ್ನಿಗೆ ರಾಜಕೀಯ ಕ್ಷೇತ್ರದಲ್ಲಿ ಸಂಬಂಧಿಸಿದ ಇತರ ರಾಷ್ಟ್ರಗಳು ಸ್ಟರ್ಲಿಂಗ್ ಕ್ಷೇತ್ರವನ್ನು ಸ್ಥಾಪಿಸಿದಂತೆ, ಅಮೆರಿಕ ಮತ್ತು ಅಮೆರಿಕಕ್ಕೆ ಸಂಬಂಧಿಸಿದ ಕೆಲವು ರಾಷ್ಟ್ರಗಳು ಡಾಲರು ಪ್ರದೇಶವನ್ನು ರೂಪಿಸಿದವು. ಈಗ ಈ ಆರ್ಥಿಕ ಪ್ರದೇಶವನ್ನು ಅಮೆರಿಕದ ಲೇವಾದೇವಿಯ ಕ್ಷೇತ್ರವೆಂದು (The American Account Countries) ಕರೆಯಲಾಗಿದೆ. ಈ ಪ್ರದೇಶದ ದೇಶಗಳು ಕೆನಡ, ಬೊಲಿವಿಯ, ಕೊಲಂಬಿಯ, ಕೋಸ್ಟರಿಕ, ಕ್ಯೂಬ, ಡೊಮಿನಿಕನ್ ರಿಪಬ್ಲಿಕ್, ಈಕ್ವಡಾರ್, ಗೌಟೆಮಾಲ, ಹಯಾಟಿ, ಹಾಂಡೂರಾಸ್, ಮೆಕ್ಸಿಕೊ, ನಿಕರಾಗುವ, ಪನಾಮ, ಸಾಲ್ವಡಾರ್, ವೆನಿಸೂಲ, ಅಮೆರಿಕದ ಸಂಯುಕ್ತ ರಾಷ್ಟ್ರಗಳು, ಫಿಲಿಪೈನ್ ದ್ವೀಪಗಳು ಮತ್ತು ಅಮೆರಿಕಕ್ಕೆ ಅಧೀನವಾಗಿರುವ ಇತರ ಪ್ರದೇಶಗಳು.

ಸ್ಟರ್ಲಿಂಗ್ ಕ್ಷೇತ್ರ ಮತ್ತು ಡಾಲರ್ ಪ್ರದೇಶ ಮುಖ್ಯವಾದ ಆರ್ಥಿಕ ಪ್ರದೇಶಗಳು ಇವಲ್ಲದೆ, ಇನ್ನೂ ಅನೇಕ ಆರ್ಥಿಕ ಕ್ಷೇತ್ರಗಳು ಇತ್ತೀಚೆಗೆ ರೂಪುಗೊಂಡಿವೆ. ಇವುಗಳಲ್ಲಿ ಮುಖ್ಯವಾದುದು ದ್ವಿರಾಷ್ಟ್ರ ಲೆಕ್ಕಗಳ ದೇಶಗಳು (Bilateral Accounts Countries). ಈ

ಪ್ರದೇಶದಲ್ಲಿ ಎರಡೆರಡು ದೇಶಗಳಿಗೆ ವ್ಯಾಪಾರ ನಡೆದು ಆಮದು ರಫ್ತಿನ ಸಿಲುಕು ಪರಿಹಾರವಾಗಬೇಕು. ಅಂತರ ರಾಷ್ಟ್ರೀಯ ವ್ಯಾಪಾರವನ್ನು ಸಂಕುಚಿತಗೊಳಿಸಿರುವ ಆರ್ಥಿಕ ಕ್ರಮ ಇದು. ಇಂಥ ಸನ್ನಿವೇಶದಲ್ಲಿ ಅಂತರ ರಾಷ್ಟ್ರೀಯ ಆರ್ಥಿಕ ಶಾಂತಿ, ಸಹಕಾರ, ಸೌಹಾರ್ದಗಳು ಅಸಾಧ್ಯವೆಂದು ರಾಜಕಾರಣಿಗಳಿಗೂ, ಅರ್ಥಶಾಸ್ತ್ರಜ್ಞರಿಗೂ ವಿದಿತವಾಯಿತು. ಬ್ರಿಟನ್ನಿನ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞ, ಜೆ. ಎಮ್ ಕೇನ್ಸ್‌ರವರು, ಅಂತರ ರಾಷ್ಟ್ರೀಯ ಆರ್ಥಿಕ ಸಹಕಾರವನ್ನು ಸ್ಥಾಪಿಸಲು ಒಂದು ಆರ್ಥಿಕ ಯೋಜನೆಯನ್ನು ಏಪ್ರಿಲ್ ೮,೧೯೪೩ರಲ್ಲಿ ರೂಪುಗೊಳಿಸಿದರು. ಈ ಯೋಜನೆಯಂತೆ, ಅಂತರ ರಾಷ್ಟ್ರೀಯ ಲೇವಾದೇವಿಗಳನ್ನು ಎಲ್ಲಾ ರಾಷ್ಟ್ರಗಳ ಆಮದು ರಫ್ತುಗಳ ಒಟ್ಟು ಸಂಬಂಧದಲ್ಲಿ ನಿರ್ಧರಿಸಿ, ಸಾಲಸೋಲಗಳನ್ನು ಪರಿಹಾರ ಮಾಡಬೇಕೆಂದು ಕೇನ್ಸ್‌ರವರು ವಾದಿಸಿದರು. ಈ ಯೋಜನೆಯ ಅಂಗವಾಗಿ ಅಂತರ ರಾಷ್ಟ್ರೀಯ ಲೇವಾದೇವಿಗಳ ಪರಿಹಾರಕ ಸಂಘವನ್ನು (International Clearing Union) ಅಂತರ ರಾಷ್ಟ್ರೀಯ ಹಣದ ಆಧಾರದಮೇಲೆ ಸ್ಥಾಪಿಸಬೇಕೆಂದು ಕೇನ್ಸ್‌ರವರು ಸೂಚಿಸಿದರು. ಈ ಹಣದ ಹೆಸರು ಬ್ಯಾಂಕಾರ್ (Bancor). ಈ ಹಣದ ಬೆಲೆ ಚಿನ್ನದಲ್ಲಿ ನಿಷ್ಕರ್ಷಿತವಾಗಿದ್ದರೂ, ಇದರ ವಿನಿಮಯ ಬೆಲೆಯಲ್ಲಿ ಏರಿಳಿತಗಳಿಗೆ ಅವಕಾಶವಿದೆ. ಅಂತರ ರಾಷ್ಟ್ರೀಯ ಲೇವಾದೇವಿಗಳಲ್ಲಿ ಈ ಹಣವನ್ನು ಚಿನ್ನಕ್ಕೆ ಸಮವೆಂದು ಬ್ರಿಟಿಷ್ ಕಾಮನ್ ವೆಲ್ತ್ ರಾಷ್ಟ್ರಗಳು, ಅಮೆರಿಕ ಮತ್ತು ಈ ಸಂಘದ ಎಲ್ಲಾ ಸದಸ್ಯ ರಾಷ್ಟ್ರಗಳೂ ಅಂಗೀಕರಿಸಬೇಕು. ಈ ಅಂತರ ರಾಷ್ಟ್ರೀಯ ಸಂಘದ ಸದಸ್ಯ ರಾಷ್ಟ್ರಗಳು, ತಮ್ಮ ನಾಣ್ಯಗಳ ವಿನಿಮಯದ ಸಮ ಬೆಲೆಯನ್ನು ಈ ಬ್ಯಾಂಕಾರ್ ಹಣದ ಸಂಬಂಧದಲ್ಲಿ ನಿರ್ಧರಿಸಿಕೊಳ್ಳಬೇಕು. ಸದಸ್ಯ ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳು (ಸದಸ್ಯರಲ್ಲದ ದೇಶಗಳ ಕೇಂದ್ರ ಬ್ಯಾಂಕುಗಳು) ಈ ಅಂತರ ರಾಷ್ಟ್ರೀಯ ಸಂಘದಲ್ಲಿ ತಮ್ಮ ಲೆಕ್ಕಗಳನ್ನಿಟ್ಟುಕೊಂಡು, ಅಂತರ ರಾಷ್ಟ್ರೀಯ ವ್ಯಾಪಾರದಿಂದ ಉಂಟಾಗುವ ಸಾಲ ಸೋಲಗಳ ಸಿಲುಕನ್ನು ಬ್ಯಾಂಕಾರ್ ಹಣದಲ್ಲಿ ಪರಿಹಾರ

ಮಾಡಬೇಕು. ವಿದೇಶಿ ವ್ಯಾಪಾರದಲ್ಲಿ ಅನುಕೂಲ ಪರಿಸ್ಥಿತಿ ಒದಗಿದ ದೇಶಗಳಿಗೆ ಈ ಸಂಘದಲ್ಲಿ ಹೆಚ್ಚು ಹಣ ಜಮಾವಣೆಯಾಗುತ್ತದೆ; ಪ್ರತಿಕೂಲ ಪರಿಸ್ಥಿತಿ ಒದಗಿದ ದೇಶಗಳಿಗೆ ನಷ್ಟಾಂಶದ ಲೆಕ್ಕವಿರುತ್ತದೆ.

ಮಿತ್ರ ರಾಷ್ಟ್ರಗಳು ಮತ್ತು ಇತರ ರಾಷ್ಟ್ರಗಳು ಈ ಸಂಘದ ಸದಸ್ಯರಾಗಲು ಅವಕಾಶವಿದೆ. ಹಿಂದಿನ ಶತ್ರು ರಾಷ್ಟ್ರಗಳು ವಿಶೇಷವಾದ ಷರತ್ತುಗಳ ಮೇಲೆ ಸದಸ್ಯರಾಗಲು ಅವಕಾಶ ಕಲ್ಪಿತವಾಗಿದೆ. ಈ ಸಂಘದ ಆಡಳಿತ ಸಮಿತಿಯನ್ನು ಸದಸ್ಯ ಸರಕಾರಗಳು ಚುನಾಯಿಸಬೇಕು * ಯಾವ ಸದಸ್ಯ ರಾಷ್ಟ್ರವಾದರೂ ಈ ಆಡಳಿತ ಸಮಿತಿಯ ಅನುಮತಿ ಇಲ್ಲದೆ, ತನ್ನ ಹಣದ ವಿನಿಮಯ ಬೆಲೆಯನ್ನು ಬದಲಾಯಿಸ ಕೂಡದು. ಆದರೆ, ಈ ಸಂಘ ಪ್ರಾರಂಭವಾದ ಐದು ವರ್ಷಗಳ ವರೆಗೆ, ಅನಿರೀಕ್ಷಿತವಾದ ಕಷ್ಟ ನಷ್ಟಗಳ ಪರಿಹಾರಕ್ಕಾಗಿ, ಯಾವುದಾದರೂ ರಾಷ್ಟ್ರದ ಹಣದ ವಿನಿಮಯ ಬದಲಾವಣೆಯ ಅಹವಾಲನ್ನು ಸೂಕ್ತವಾಗಿ ಗಮನಿಸಲು, ಈ ಆಡಳಿತ ಸಮಿತಿಗೆ ಅಧಿಕಾರವಿದೆ. ಬ್ಯಾಂಕಾರಿನ ವಿನಮಯ ಬೆಲೆಯು ಚಿನ್ನದ ಪ್ರಮಾಣದಲ್ಲಿ ನಿರ್ಧರವಾಗಬೇಕು. ಸದಸ್ಯರಾಷ್ಟ್ರಗಳು ತಮ್ಮ ನಾಣ್ಯಗಳ ಬ್ಯಾಂಕರ್ ವಿನಿಮಯ ಬೆಲೆಗಿಂತ ಅಥವಾ ಬ್ಯಾಂಕರ್—ಚಿನ್ನದ ವಿನಿಮಯ ಬೆಲೆಗಿಂತ ಹೆಚ್ಚಾಗಿ ಪ್ರತ್ಯಕ್ಷವಾಗಿಯಾಗಲಿ, ಪರೋಕ್ಷವಾಗಿಯಾಗಲಿ ಚಿನ್ನವನ್ನು ಕೊಳ್ಳಕೂಡದು, ಶೇಖರಿಸಕೂಡದು. ಆದರೆ ಈ ಷರತ್ತುಗಳನ್ನು ಅನುಸರಿಸಿ, ಚಿನ್ನವನ್ನು ಕೊಳ್ಳುವುದಕ್ಕಾಗಲೀ, ಮಾರುವುದಕ್ಕಾಗಲೀ ಯಾವ ಅಡ್ಡಿಯೂ ಇಲ್ಲ. ಪ್ರತಿಯೊಂದು ಸದಸ್ಯರಾಷ್ಟ್ರವೂ ನಿರ್ದಿಷ್ಟವಾದ ಭಾಗದ ಠೇವಣಾತಿ ಹಣವನ್ನು ಅಂತರಾಷ್ಟ್ರೀಯ ಸಂಘದಲ್ಲಿ ಇರಿಸಬೇಕು. ಈ ಠೇವಣಾತಿಯ ಪ್ರಮಾಣವನ್ನು ಆಯಾರಾಷ್ಟ್ರದ ಯುದ್ಧಕ್ಕಿಂತ ಹಿಂದಿನ ಮೂರುವರ್ಷಗಳ ಸರಾಸರಿ ಆಮದು ರಫ್ತುಗಳ ಪ್ರಮಾಣದ $\frac{3}{4}$ ಭಾಗದಷ್ಟು ಎಂದು ನಿರ್ಧರಿಸಲಾಗುವುದು. ಕೆಲವು ರಾಷ್ಟ್ರಗಳಿಗೆ ಈ ನಿಯಮ ಸರಿಹೋಗದಿದ್ದರೆ, ವಿಶೇಷವಾದ ರೀತಿಯಲ್ಲಿ

* ಈ ಸಮಿತಿಯಲ್ಲಿ ೧೨ ಅಥವ ೧೫ ಸದಸ್ಯರಿಗಿಂತ ಹೆಚ್ಚಿರಬಾರದು.

ಈ ಪಾಲನ್ನು ನಿರ್ಧರಿಸಲಾಗುತ್ತದೆ. ಈ ಸಂಘದ ಸಂಕ್ರಮಣಕಾಲ ಕಳೆದ ಮೇಲೆ, ಮೂರುವರ್ಷಗಳ ಹಿಂದಿನ ವ್ಯಾಪಾರಪ್ರಮಾಣದ ಸರಾಸರಿಯ ಮೇಲೆ ಈ ಠೇವಣಾತಿ ಪಾಲುಗಳನ್ನು ವರ್ಷವರ್ಷ ಪುನರ್ವಿಮರ್ಶಿಸಬೇಕು. ಯುದ್ಧಮುಗಿದು ಐದುವರ್ಷಗಳ ನಂತರ, ಹಿಂದಿನ ಐದುವರ್ಷಗಳ ಸರಾಸರಿ ವ್ಯಾಪಾರ ಪ್ರಮಾಣದಂತೆ ಈ ಪಾಲುಗಳನ್ನು ಪುನರ್ವಿಮರ್ಶಿಸಬೇಕು. ಸದಸ್ಯರಾಷ್ಟ್ರಗಳ ಠೇವಣಾತಿ ಪಾಲುಗಳನ್ನು ಆಯಾರಾಷ್ಟ್ರದ ವಿದೇಶಿ ವ್ಯಾಪಾರದ ಪ್ರಮಾಣದಲ್ಲಿ ನಿರ್ಧರಿಸುವ ಈ ಕ್ರಮ ಮುಖ್ಯವಾಗಿ ನಾಣ್ಯಗಳ ವ್ಯವಸ್ಥೆಯಲ್ಲಿ ಹಾಗೂ ವಿದೇಶಿವ್ಯಾಪಾರದ ಸಿಲುಕಿನ ಪರಿಹಾರದಲ್ಲಿ ಬಹು ವಿಹಿತವಾದ ಕ್ರಮವೆಂದು ಹೇಳಬಹುದು. ಆದರೆ ಈ ಠೇವಣಾತಿ ಪ್ರಮಾಣಗಳನ್ನು ನಿರ್ಧರಿಸಲು ಬೇರೆ ಅಂಶಗಳನ್ನು ತೆಗೆದುಕೊಳ್ಳಬೇಕೇ ಎನ್ನುವುದು ಚರ್ಚಾಸ್ಪದವಾದ ವಿಷಯ.

ವಿದೇಶಿವ್ಯಾಪಾರದಿಂದ ಉಂಟಾಗುವ ಲಾಭ ನಷ್ಟಗಳನ್ನು ಅಂದರೆಸಾಲಗಳನ್ನು ಪರಿಹರಿಸುವ ಸಂಬಂಧದಲ್ಲಿ ಉತ್ಪನ್ನವಾಗುವ ಸಿಲುಕನ್ನು, ಸದಸ್ಯರಾಷ್ಟ್ರಗಳು ಬ್ಯಾಂಕಾರ್ ಹಣದ ವರ್ಗಾವಣೆಯಿಂದ ಇತ್ಯರ್ಥಮಾಡಿಕೊಳ್ಳಬೇಕು. ಯಾವಸದಸ್ಯರಾಷ್ಟ್ರವಾದರೂ ಆಡಳಿತ ಸಮಿತಿಯ ಒಪ್ಪಿಗೆಯಿಲ್ಲದೆ ಒಂದುವರ್ಷದಲ್ಲಿ ನಷ್ಟಾಂಶದ ಪ್ರಮಾಣವನ್ನು ತನ್ನ ಠೇವಣಾತಿ ಪಾಲಿನ ಕಾಲುಭಾಗಕ್ಕಿಂತ ಹೆಚ್ಚು ಮಾಡಕೂಡದು. ರಾಷ್ಟ್ರದ ನಷ್ಟಾಂಶ ಸಿಲುಕು ಕಳೆದ ಎರಡುವರ್ಷಗಳ ಸರಾಸರಿ ಠೇವಣಾತಿ ಪಾಲಿನ ಕಾಲುಭಾಗಕ್ಕಿಂತ ಹೆಚ್ಚಾದರೆ, ಆ ರಾಷ್ಟ್ರವು ತನ್ನ ನಾಣ್ಯದ ವಿನಿಮಯ ಬೆಲೆಯನ್ನು ಆಡಳಿತ ಸಮಿತಿಯ ಒಪ್ಪಿಗೆಯಿಲ್ಲದೆ ನೇಕಡ ೫ ರಷ್ಟು ಇಳಿಸ ಬಹುದು. ಯಾವುದಾದರೂ ರಾಷ್ಟ್ರದ ನಷ್ಟಾಂಶದ ಸಿಲುಕು ಅದರ ಠೇವಣಾತಿಪಾಲನ ಅರ್ಧದಷ್ಟು ಆದರೆ, ಆಡಳಿತ ಸಮಿತಿಯು ಆರಾಷ್ಟ್ರದಿಂದ ಸೂಕ್ತವಾದ ಆಧಾರ ಅಂದರೆ ಚಿನ್ನ, ವಿದೇಶದ ನಾಣ್ಯ ಅಥವ ಆ ದೇಶದ ಹಣವನ್ನು ಅದರ ಶಕ್ತ್ಯನುಸಾರ ಪಡೆಯಬೇಕಾಗುತ್ತದೆ. ಈ ಸನ್ನಿವೇಶದಲ್ಲಿ, ಆದೇಶದ ಹಣದ ವಿನಿಮಯ ಬೆಲೆಯನ್ನು ಸೂಕ್ತವಾಗಿ ಇಳಿಸಬಹುದು. ಯಾವುದಾದರೂ

ರಾಷ್ಟ್ರವನಷ್ಟಾಂಶದ ಸಿಲುಕು ಒಂದು ವರ್ಷದ ಹಿಂದಿನ ಸರಾಸರಿಯ ಲೇವಣಾತಿ ಪಾಲಿನ ಮುಕ್ಕಾಲು ಭಾಗಕ್ಕಿಂತ ಹೆಚ್ಚಿದರೆ ಮತ್ತು ಆಡಳಿತ ಸಮಿತಿ ಈ ನಷ್ಟಾಂಶ ಅತಿಹೆಚ್ಚೆಂದು ಅಭಿಪ್ರಾಯ ಪಟ್ಟರೆ, ಆ ಪರಿಸ್ಥಿತಿಯನ್ನು ಸುಧಾರಿಸಲು ಸೂಕ್ತವಾದ ಕ್ರಮಗಳನ್ನು ಕೈಗೊಳ್ಳಲು ಸಮಿತಿಯು ಆ ರಾಷ್ಟ್ರವನ್ನು ಕೇಳಬೇಕಾಗುತ್ತದೆ. ಎರಡು ವರ್ಷದೊಳಗೆ ಈ ಪರಿಸ್ಥಿತಿ ಸುಧಾರಿಸದಿದ್ದರೆ, ಆ ರಾಷ್ಟ್ರವು ಸಮಿತಿಯ ಅಪ್ಪಣೆಯಿಲ್ಲದೆ, ಅದರ ಲೆಕ್ಕದ ಮೇಲೆ ಲೇವಾದೇವಿ ನಡಸಕೂಡದೆಂದು ಆಡಳಿತ ಸಮಿತಿಯು ಪ್ರಕಟಣೆ ಹೊರಡಿಸಬಹುದು. ಈ ರೀತಿಯಾಗಿ ಒಂದು ನಿರ್ದಿಷ್ಟವಾದ ಪ್ರಮಾಣದವರೆಗೆ ಸದಸ್ಯ ರಾಷ್ಟ್ರಗಳು ಅಂತರ ರಾಷ್ಟ್ರೀಯ ಲೇವಾದೇವಿಯ ಪರಿಹಾರಕ ಸಂಘದಿಂದ ಹಣವನ್ನು ತೆಗೆದು ಕೊಳ್ಳುವ ನಿಯಮದ ಪ್ರತಿಪಾಲನೆಯಿಂದ, ಎಲ್ಲಾ ಸದಸ್ಯ ರಾಷ್ಟ್ರಗಳೂ ತಮ್ಮ ನಿಧಿಗಳನ್ನು ಸುರಕ್ಷಿತವಾಗಿ ಕಾಪಾಡಲು ಅನುಕೂಲ ವಾಗುತ್ತದೆ. ಈ ಮಹೋನ್ನತ ಧ್ಯೇಯದಿಂದ ಜೆ. ಎಂ. ಕೇನ್ಸ್‌ರವರು ಈ ಯೋಜನೆಯನ್ನು ರೂಪುಗೊಳಿಸಿದರು. ಸದಸ್ಯರಾಷ್ಟ್ರಗಳು ನಿರ್ಧಾರವಾದ ಲೇವಣಾತಿ ಪಾಲಿನಂತೆ ಈ ಸಂಘದಿಂದ ಹಣವನ್ನು ಪಡೆಯುವ ಅಧಿಕಾರ ಕುಂಠಿತವಾಗಿದ್ದುದರಿಂದ, ಈ ನಿಧಿಗಳ ಹೆಚ್ಚುವರಿಗೆ ನಿರ್ದಿಷ್ಟವಾದ ಮಿತಿಇತ್ತು. ಕೇನ್ಸರ ಈ ಯೋಜನೆ ಹೊನ್ನಿನ ಹಣಪದ್ಧತಿಯ ಮತ್ತೊಂದು ರೂಪವಲ್ಲ. ಬ್ಯಾಂಕಾರಿನ ವಿನಿಮಯ ಬೆಲೆಯನ್ನು ಚಿನ್ನದಲ್ಲಿ ನಿರ್ಧರಿಸಬೇಕಾದರೂ, ಈ ಬೆಲೆ ಕೇವಲ ಅಚಲವಾದ ಬೆಲೆಯಲ್ಲ

ಅಂತರರಾಷ್ಟ್ರೀಯ ಆರ್ಥಿಕ ಸಹಕಾರದ ಸಂಬಂಧದಲ್ಲಿ ಲಾರ್ಡ್ ಕೇನ್ಸ್‌ರವರು ಈ ರೀತಿಯಾದ ಯೋಜನೆಯನ್ನು ಏಪ್ರಿಲ್ ೧೯೪೩ರಲ್ಲಿ ರೂಪಿಸಿದ ಮೇಲೆ, ಅಮೆರಿಕದಲ್ಲಿ ಅದೇ ತಿಂಗಳಲ್ಲಿ ಡಾಕ್ಟರ್ ಹ್ಯಾರಿ ವೈಟರವರು ಅಂತರರಾಷ್ಟ್ರೀಯ ಆರ್ಥಿಕ ಭದ್ರತೆಯ ನಿಧಿಯನ್ನು ಸ್ಥಾಪಿಸಬೇಕೆಂದು ಇನ್ನೊಂದು ಯೋಜನೆಯನ್ನು ರೂಪುಗೊಳಿಸಿದರು. ಎಲ್ಲಾ ಸದಸ್ಯ ರಾಷ್ಟ್ರಗಳೂ ಚಿನ್ನ ಮತ್ತು ತಮ್ಮ ನಾಣ್ಯಗಳ ಒಂದು ಪ್ರಮಾಣವನ್ನು ಈ ನಿಧಿಯಲ್ಲಿ ಹಾಕಬೇಕೆಂದೂ,

ನಿಧಿಯಲ್ಲಿ ಎಲ್ಲಾ ರಾಷ್ಟ್ರಗಳ ನಾಣ್ಯಗಳ ನಿಧಿಯೂ ಒಂದು
ಾಣದಲ್ಲಿರಬೇಕೆಂದೂ ಯೋಚಿಸಲಾಯಿತು. ಯಾವ ಸದಸ್ಯ
ಟ್ರವಾದರೂ ಈ ನಿಧಿಯಿಂದ ವಿದೇಶಿ ನಾಣ್ಯಗಳನ್ನು ವಿನಿಯೋಗಿ
ಬಾಧ್ಯತೆ ಇರುತ್ತದೆ. ಪ್ರತಿಯೊಂದು ಸದಸ್ಯ ರಾಷ್ಟ್ರವೂ ಒಂದು
ಷ್ಟವಾದ ಪ್ರಮಾಣದಲ್ಲಿ ಹಂಚಿಕೆಯಾದ ಭಾಗವನ್ನು ಚಿನ್ನದಲ್ಲೂ
ಹಣದಲ್ಲೂ ಈ ನಿಧಿಯಲ್ಲಿ ಠೇವಣಾತಿ ಇಡಬೇಕು. ಒಟ್ಟು ಹಣ
೦೦ ಮಿಲಿಯನ್ ಡಾಲರುಗಳಿರಬೇಕು. ಈ ಅಂತರ ರಾಷ್ಟ್ರೀಯ
ಯ ಹಣದ ಹೆಸರು ಯೂನಿಟಾಸ್ (unitas); ಇದರ ಬೆಲೆ
ಗ್ರೈನ್ಸ್ ಚೊಕ್ಕ ಚಿನ್ನ ಅಥವಾ ಹತ್ತು ಡಾಲರುಗಳು. ಸೇಕಡ
ಸದಸ್ಯರ ವೋಟುಗಳಿಲ್ಲದೆ ಈ ಹಣದ ವಿನಿಮಯ ಬೆಲೆಯಲ್ಲಿ
ವ ಬದಲಾವಣೆಯೂ ಆಗ ಕೂಡದು. ಸದಸ್ಯ ರಾಷ್ಟ್ರಗಳ ನಾಣ್ಯ
ವಿನಿಮಯ ಬೆಲೆಯನ್ನು ಈ ಯೂನಿಟಾಸ್ ಹಣದ ಸಂಬಂಧ
ನಿರ್ಧರಿಸಬೇಕು. ಯಾವುದಾದರೂ ಸದಸ್ಯರಾಷ್ಟ್ರದ ಹಣದ
ಮಯ ಬೆಲೆಯನ್ನು ಅಂತರರಾಷ್ಟ್ರೀಯ ವ್ಯಾಪಾರದ ಅತ್ಯಂತ
ರವಾದ ದುಃಸ್ಥಿತಿಯನ್ನು ನಿವಾರಿಸುವ ಸನ್ನಿವೇಶದಲ್ಲ ಮಾತ್ರ
ಕ್ಕಾಲು ಭಾಗ ಸದಸ್ಯರ ವೋಟುಗಳಿಂದ ಬದಲಾಯಿಸಲು ಸಾಧ್ಯ.
ಲಾರ್ಡ್ ಕೇನ್ಸರ ಅಂತರ ರಾಷ್ಟ್ರೀಯ ಲೇವಾದೇವಿಗಳ ಪರಿ
ರಕ ಸಂಘದ ಯೋಜನೆ ಮತ್ತು ಡಾ|| ವೈಟ್‌ರವರ ಅಂತರ
ಷ್ಟ್ರೀಯ ಆರ್ಥಿಕ ಭದ್ರತೆಯ ನಿಧಿಯ ಯೋಜನೆ ಇವೆರಡರ ಸಮ್ಮಿ
ವೇ ಅಮೆರಿಕದಲ್ಲಿ ಜುಲೈ ೧೯೪೪ ರಲ್ಲಿ ಬ್ರೆಟನ್‌ವುಡ್ಸ್ ಸಮ್ಮೇಳನ
ಅಂಗೀಕಾರವಾದ ಅಂತರ ರಾಷ್ಟ್ರೀಯ ಆರ್ಥಿಕ ಸಹಕಾರದ
ೀಜನೆ. ಈ ಅಂತರ ರಾಷ್ಟ್ರೀಯ ಸಮ್ಮೇಳನದ ಫಲವಾಗಿ ಎರಡು
ಳಿ ಜವಳಿ ಸಂಸ್ಥೆಗಳು ಜನಿಸಿದವು—ಅಂತರ ರಾಷ್ಟ್ರೀಯ ಆರ್ಥಿಕ
(The International Monetary Fund), ಅಂತರ
ಷ್ಟ್ರೀಯ ಅಭಿವೃದ್ಧಿ ಮತ್ತು ಪುನರ್ರಚನಾಬ್ಯಾಂಕ್ (The
ernational Bank for Reconstruction and
velopment). ವಿಶ್ವದ ಆರ್ಥಿಕ ತಳಹದಿಯನ್ನು ಸ್ಥಿರವಾಗಿ

ನಿರ್ಮಿಸಬಲ್ಲ ಮಹೋನ್ನತ ಯೋಜನೆಯ ಎರಡು ಕವಲುಗಳೇ ಈ ಎರಡು ಸಂಸ್ಥೆಗಳು. ಈ ಸಂದರ್ಭದಲ್ಲಿ ಅಂತರ ರಾಷ್ಟ್ರೀಯ ಆರ್ಥಿಕ ನಿಧಿಯ ರಚನೆಯನ್ನು ಧ್ಯೇಯಗಳನ್ನು ಪರಿಶೀಲಿಸುವುದು ಅತ್ಯಾವಶ್ಯಕವಾಗಿದೆ. ಮುಖ್ಯವಾಗಿ ಎರಡು ಮಹಾಯುದ್ಧಗಳ ನಡುವಿನ ಇಪ್ಪತ್ತು ವರ್ಷಗಳ ಆರ್ಥಿಕ ತೊಂದರೆಗಳು, ಎಡರುತೊಡರುಗಳು ಈ ಯೋಜನೆಯ ಕಾರಣಗಳೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಆರ್ಥಿಕ ತೊಂದರೆಗಳನ್ನು ಅತ್ಯಂತ ವಿಷಮವಾದ ಆರ್ಥಿಕ ದುಃಸ್ಥಿತಿಯ ಮತ್ತು ಅವ್ಯವಸ್ಥೆಯ ಚಿಹ್ನೆಗಳೆಂದು ಮಾತ್ರ ತಿಳಿಯಬೇಕು. ಪ್ರಾಣಿಜೀವನಕ್ಕೆ ನರಗಳ ರಚನೆ ಹೇಗೋ ಹಾಗೆ ಆರ್ಥಿಕ ಜೀವನಕ್ಕೆ ಹಣಕಾಸಿನ ವ್ಯವಸ್ಥೆ ಅತ್ಯಂತ ಪರಿಣಾಮಕಾರಿಯಾದುದು. ಸುವ್ಯವಸ್ಥಿತವಾದ ಹಣಕಾಸಿನ ಪದ್ಧತಿಯಿಂದ ಮಾತ್ರ ಆರ್ಥಿಕ ವಿದ್ಯಮಾನಗಳಿಗೆ ಸುಲಲಿತವಾದ ಸನ್ನಿವೇಶ ನಿರ್ಮಾಣವಾಗಬಲ್ಲದು. ಆದರೆ, ಅವ್ಯವಸ್ಥೆಯಾದ ಹಣಕಾಸಿನ ಪದ್ಧತಿಯ ದುಷ್ಪರಿಣಾಮಗಳನ್ನು ಹೇಳಬೇಕಾಗಿಲ್ಲ. ಹಣಕಾಸಿನ ಪದ್ಧತಿಯನ್ನು ಕ್ರಮಗೊಳಿಸದಿದ್ದರೆ, ಇತರ ಆರ್ಥಿಕ ರೋಗರುಜಿನಗಳನ್ನು ನಿವಾರಿಸಲು ಸಾಧ್ಯವಿಲ್ಲ.

ಅಂತರ ರಾಷ್ಟ್ರೀಯ ಆರ್ಥಿಕ ನಿಧಿಯು ಸದಸ್ಯ ರಾಷ್ಟ್ರಗಳ ಕೇಂದ್ರ ಬ್ಯಾಂಕುಗಳ ಪ್ರಧಾನ ಬ್ಯಾಂಕು. ಎಲ್ಲಾ ರಾಷ್ಟ್ರಗಳ ಸಹಕಾರವಿಲ್ಲದೆ ಅಂತರ ರಾಷ್ಟ್ರೀಯ ವ್ಯಾಪಾರ, ವಿನಿಮಯ ಸಾಧ್ಯವಿಲ್ಲ. ಈ ಸಂಸ್ಥೆಯ ಧ್ಯೇಯಗಳು ಗಮನಾರ್ಹವಾಗಿವೆ.

(೧) ಒಂದು ಸ್ಥಿರವಾದ ಸಂಸ್ಥೆಯ ಸ್ಥಾಪನೆಯಿಂದ ಅಂತರ ರಾಷ್ಟ್ರೀಯ ಆರ್ಥಿಕ ಸಹಕಾರವನ್ನು ವೃದ್ಧಿಗೊಳಿಸುವುದು.

(೨) ಅಂತರರಾಷ್ಟ್ರೀಯ ಅಭಿವೃದ್ಧಿಯಿಂದ, ವ್ಯವಸ್ಥೆಯಿಂದ ಉದ್ಯೋಗವನ್ನು ಹೆಚ್ಚಿಸುವುದು.

(೩) ನಾಣ್ಯಗಳ ವಿನಿಮಯ ಬೆಲೆಗಳ ದೃಢತೆಯನ್ನು ಸಾಧಿಸಿ, ಸದಸ್ಯ ರಾಷ್ಟ್ರಗಳ ಮಧ್ಯೆ ಕ್ರಮಬದ್ಧವಾದ ವಿನಿಮಯ ವ್ಯವಸ್ಥೆಯನ್ನು ಸ್ಥಾಪಿಸಿ, ಪೈಪೋಟಿಯ ವಿನಿಮಯ ಬೆಲೆ ಕುಗ್ಗುವಿಕೆಯನ್ನು ನಿವಾರಿಸುವುದು.

(೪) ಪ್ರಚಲಿತ ಅಂತರ ರಾಷ್ಟ್ರೀಯ ಲೇವಾದೇವಿಗಳ ಪರಿಹಾರಕ್ಕಾಗಿ ಬಹುಮುಖ್ಯವಾದ ವ್ಯವಸ್ಥೆಯನ್ನು ಸ್ಥಾಪಿಸಿ, ವಿದೇಶಿ ವ್ಯಾಪಾರಕ್ಕಿರುವ ಅಡ್ಡಿ ಆತಂಕಗಳನ್ನು ನಿವಾರಿಸುವುದು.

(೫) ಸದಸ್ಯ ರಾಷ್ಟ್ರಗಳಿಗೆ ಈ ನಿಧಿಯಿಂದ ಆವಶ್ಯಕವಾದ ಸಹಾಯ ಸೌಲಭ್ಯಗಳನ್ನು ಒದಗಿಸಿ, ರಾಷ್ಟ್ರದ ಅಥವಾ ವಿಶ್ವದ ಸುಖ ಶಾಂತಿಗಳಿಗೆ ತೊಂದರೆಯಾಗದಂತೆ, ಅಂತರ ರಾಷ್ಟ್ರೀಯ ಲೇವಾದೇವಿಗಳಲ್ಲಿ ಒದಗುವ ವಿರಿಳಿತಗಳನ್ನು ಸುಲಭವಾಗಿ ಪರಿಹಾರ ಮಾಡುವುದು.

(೬) ಮೇಲಿನ ಧ್ಯೇಯಗಳ ಸಾಧನೆಯಿಂದ, ಅಂತರ ರಾಷ್ಟ್ರೀಯ ಲೇವಾದೇವಿಗಳಲ್ಲಿ ಬರುವ ವಿಷಮತೆಯನ್ನು ಶೀಘ್ರವಾಗಿ ಪರಿಹರಿಸುವುದು.

ಈ ಅಂತರ ರಾಷ್ಟ್ರೀಯ ಆರ್ಥಿಕ ಸಂಸ್ಥೆಯ ನೀತಿನಿಯಮಗಳನ್ನು ಡಿಸೆಂಬರ್ ೨೭,೧೯೪೫ ರಲ್ಲಿ ವಾಷಿಂಗ್‌ಟನ್ನಿನಲ್ಲಿ ಸೇರಿದ್ದ ೩೦ ರಾಷ್ಟ್ರಗಳ ಪ್ರತಿನಿಧಿಗಳು ಒಪ್ಪಿಕೊಂಡು ಸಹಿಯನ್ನು ಹಾಕಿದರು. ಅಂದರೆ, ಈ ಮೂವತ್ತು ರಾಷ್ಟ್ರಗಳು * ಈ ಸಂಸ್ಥೆಯ ಸದಸ್ಯರಾಷ್ಟ್ರಗಳಾದವು. ಈ ಸಂಸ್ಥೆಯ ಗೌರ್ನರುಗಳ ಸಮಿತಿಯ ಮೊದಲನೆಯ ವಾರ್ಷಿಕ ಸಭೆ ಸೆಪ್ಟೆಂಬರ್ ೨೭, ೧೯೪೬ರಲ್ಲಿ ನಡೆಯಿತು. ಮಾರ್ಚಿ ೧, ೧೯೪೭ ರಲ್ಲಿ ಈ ಸಂಸ್ಥೆ ಕಾರ್ಯಕ್ಷೇತ್ರದಲ್ಲಿ ನಿರ್ದಿಷ್ಟವಾಗಿ ಕಾಲಿಟ್ಟಿತು.

---

* ಈಗ ಈ ಸಂಸ್ಥೆಯ ಸದಸ್ಯರಾಷ್ಟ್ರಗಳ ಸಂಖ್ಯೆ ೪೯—ಆಸ್ಟ್ರೇಲಿಯ, ಬೆಲ್ಜಿಯಂ, ಬೊಲಿವಿಯ, ಬ್ರೆಜಿಲ್, ಕೆನಡ, ಚಿಲಿ, ಚೈನ, ಕೊಲಂಬಿಯ, ಕೋಸ್ಟರಿಕ, ಕ್ಯೂಬ, ಜೆಕೊಸ್ಲೋವಾಕಿಯ, ಡೆನ್‌ಮಾರ್ಕ್, ಡೊಮಿನಿಕನ್ ರಿಪಬ್ಲಿಕ್, ಈಕ್ವಡಾರ್, ಈಜಿಪ್ಟ್, ಎಲ್‌ಸಾಲ್ವಡಾರ್, ಈಥಿಯೋಪಿಯ, ಫಿನ್ಲೆಂಡ್, ಫ್ರಾನ್ಸ್, ಗ್ರೀಸ್, ಗ್ವಾಟೆಮಾಲ, ಹಾಂಡುರಾಸ್, ಐಸ್‌ಲೆಂಡ್, ಇಂಡಿಯ, ಇರಾನ್, ಇರಾಕ್, ಇಟಲಿ, ಲೆಬನಾನ್, ಲಕ್ಸೆಂಬರ್ಗ್, ಮೆಕ್ಸಿಕೋ, ನೆದರ್ ಲೆಂಡ್ಸ್, ನಿಕರಾಗುವಾ, ನಾರ್ವೆ, ಪನಾಮ, ಪರಗ್ವೆ, ಫಿಲಿಪೈನ್‌ರಿಪಬ್ಲಿಕ್, ಪೋಲೆಂಡ್, ಟರ್ಕಿ, ದಕ್ಷಿಣಆಫ್ರಿಕ, ಬ್ರಿಟನ್, ಅಮೆರಿಕದ ಸಂಯುಕ್ತ ಸಂಸ್ಥಾನಗಳು, ಉರುಗ್ವೆ, ವೆನಿಸೂಲ, ಯುಗೋಸ್ಲಾವಿಯ, ಲೈಬಿರಿಯಾ(ಲೈಬಿರಿಯಾ ಸೇರಲು ಅಕ್ಟೋಬರ್

ಈ ಸಂಸ್ಥೆಯ ನಿಧಿ ಚಿನ್ನ ಮತ್ತು ಸದಸ್ಯ ರಾಷ್ಟ್ರಗಳ ನಾಣ್ಯಗಳು. ನಿರ್ದಿಷ್ಟವಾದ ಪ್ರಮಾಣದಲ್ಲಿ (Quota) ಪ್ರತಿಯೊಂದು ರಾಷ್ಟ್ರವೂ ಚಿನ್ನದಲ್ಲಿ ಮತ್ತು ತನ್ನ ಹಣದಲ್ಲಿ ಈ ಸಂಸ್ಥೆಯ ಕೇಂದ್ರ ನಿಧಿಗೆ ಹಣವನ್ನು ಹಾಕಬೇಕು. ಚಿನ್ನದ ಭಾಗ ಒಟ್ಟು ಪ್ರಮಾಣದ ಸೇಕಡ ೨೫ ರಷ್ಟು ಅಥವಾ ಆ ರಾಷ್ಟ್ರದ ಚಿನ್ನದ ಮತ್ತು ಡಾಲರುಗಳ ಸೇಕಡ ೧೦ ರಷ್ಟು (ಇವೆರಡರಲ್ಲಿ ಯಾವುದು ಕಡಮೆಯೋ ಅದು.) ಈ ಕ್ರಮದಿಂದ ಈ ಸಂಸ್ಥೆಯಲ್ಲಿ ಎಲ್ಲಾ ಸದಸ್ಯ ರಾಷ್ಟ್ರಗಳ ನಾಣ್ಯಗಳು ಇರುತ್ತವೆ. ಚಿನ್ನವು ಈ ಸಂಸ್ಥೆಯ ಸರ್ವಸಮ್ಮತವಾದ ಲೋಹ; ಇದರಿಂದ ಯಾವ ದೇಶದ ನಾಣ್ಯವನ್ನಾದರೂ ಕೊಂಡುಕೊಳ್ಳಬಹುದು. ಈ ಸಂಸ್ಥೆಯು ಎಲ್ಲಾ ಸದಸ್ಯರಾಷ್ಟ್ರಗಳ ಭಂಡಾರ. ಸದಸ್ಯ ರಾಷ್ಟ್ರವು ತನ್ನ ಹಣವನ್ನು ಕೊಟ್ಟು ಯಾವ ರಾಷ್ಟ್ರದ ಹಣವನ್ನಾದರೂ ತೆಗೆದುಕೊಳ್ಳಲು ಅವಕಾಶವಿದೆ.

ಸದಸ್ಯ ರಾಷ್ಟ್ರಗಳು ವಿದೇಶಿ ನಾಣ್ಯಗಳನ್ನು ಕೊಳ್ಳುವ ಹಕ್ಕಿಗೆ ಕ್ರಮಬದ್ಧವಾದ ಮಿತಿ ಇದೆ. ಉದಾಹರಣೆಗಾಗಿ, ಒಂದು ರಾಷ್ಟ್ರ ೧೦೦ ಮಿಲಿಯನ್ ಡಾಲರುಗಳ ಬೆಲೆಯುಳ್ಳ ಹಣವನ್ನು ಅಂತರ ರಾಷ್ಟ್ರೀಯ ಸಂಸ್ಥೆಯಲ್ಲಿ ಹಾಕಿದೆಯೆಂದು ಭಾವಿಸೋಣ. ಇದರಲ್ಲಿ ೭೫ ಮಿಲಿಯನ್ ಡಾಲರುಗಳ ಬೆಲೆ ಆ ರಾಷ್ಟ್ರದ ಹಣದಲ್ಲಿ, ೨೫ ಮಿಲಿಯನ್ ಡಾಲರುಗಳ ಬೆಲೆ ಚಿನ್ನದಲ್ಲಿ ಎಂದು ತಿಳಿಯೋಣ. ಈ ಸನ್ನಿವೇಶದಲ್ಲಿ ಈ ಸಂಸ್ಥೆ ಆ ರಾಷ್ಟ್ರಕ್ಕೆ ಪ್ರತಿ ವರ್ಷ ೨೫ ಮಿಲಿಯನ್ ಡಾಲರುಗಳ ಬೆಲೆಯುಳ್ಳ ವಿದೇಶಿ ನಾಣ್ಯವನ್ನು ಮಾರಬಹುದು. ಈ ರೀತಿಯಾಗಿ, ಆ ರಾಷ್ಟ್ರದ ಹಣವು ಸೇಕಡ ೭೫ ರಿಂದ ೨೦೦ ಕ್ಕೆ ಏರಲು ಐದು ವರ್ಷಗಳಾಗುತ್ತವೆ. ಆ ರಾಷ್ಟ್ರದ ಹಣದ ಸೇಕಡ ೨೦೦ ರಷ್ಟು ಆ ಸಂಸ್ಥೆಯಲ್ಲಿ ಸೇರಿದಾಗ, ಆ ರಾಷ್ಟ್ರವು ತನ್ನ ಕೊಳ್ಳುವಿಕೆಯ ಹಕ್ಕನ್ನು ಮುಕ್ತಾಯಗೊಳಿಸುತ್ತದೆ. ಈ ರೀತಿಯಾಗಿ, ಈ ರಾಷ್ಟ್ರವು ಕೇವಲ ೨೫ ಮಿಲಿಯನ್ ಡಾಲರುಗಳ ಬೆಲೆಯ ಚಿನ್ನದಿಂದ ೧೨೫

---

೩೯, ೧೯೪೮ ರಲ್ಲಿ ಸೇರಲು ಅನುಮತಿ ದೊರೆಯಿತು.)

ಮಿಲಿಯನ್ ಡಾಲರುಗಳ ಬೆಲೆಯ ವಿದೇಶಿ ಹಣವನ್ನು ಕೊಳ್ಳುವ ಸೌಲಭ್ಯವನ್ನು ಪಡೆಯುತ್ತದೆ.

ಸಾಲಗಾರ ರಾಷ್ಟ್ರಗಳ ಹಣವು ಈ ಸಂಸ್ಥೆಯಲ್ಲಿ ಶೇಖರಣೆಯಾದ ಹಾಗೆಲ್ಲಾ ಇತರ ಉಳಿತಾಯ ರಾಷ್ಟ್ರಗಳ ಹಣವು ಕ್ಷೀಣವಾಗುತ್ತದೆ. ಯಾವುದಾದರೂ ಸದಸ್ಯ ರಾಷ್ಟ್ರದ ಹಣದ ಪ್ರಮಾಣ ಕ್ಷೀಣವಾದರೆ ಆಗ ಸಂಸ್ಥೆಯು ಚಿನ್ನಕ್ಕೆ ಬದಲಾಗಿ ಆ ರಾಷ್ಟ್ರದ ಹಣವನ್ನು ಕೊಳ್ಳಬಹುದು : ಆ ರಾಷ್ಟ್ರದಿಂದ ಸಾಲವನ್ನು ಪಡೆಯಬಹುದು ; ಆ ರಾಷ್ಟ್ರದ ಹಣವನ್ನು ದುರ್ಲಭ ಹಣವೆಂದು ಘೋಷಿಸಿ, ಇರುವ ಮತ್ತು ಮುಂದೆ ಬರಬಹುದಾದ ಆ ಹಣದ ಸರಬರಾಯಿಯನ್ನು ನೋಡಿಕೊಂಡು ಇತರ ರಾಷ್ಟ್ರಗಳ ಆವಶ್ಯಕತೆಗಳಿಗನುಸಾರವಾಗಿ ಆ ಹಣವನ್ನು ಹಂಚಬೇಕಾಗುತ್ತದೆ.

ಈ ಸಂಸ್ಥೆಗೆ ಹಣವನ್ನು ನಿರ್ಮಿಸುವ ಶಕ್ತಿ ಇಲ್ಲ. ಸದಸ್ಯ ರಾಷ್ಟ್ರಗಳಿಂದ ಸೇರಿದ ಹಣ ಒಂದು ಮಿತಿಯಾದ ಪ್ರಮಾಣದಲ್ಲಿರುತ್ತದೆ. ದುರ್ಲಭ ನಾಣ್ಯಗಳನ್ನು ಒಂದು ಪಡಿತರದಲ್ಲಿ ಹಂಚುವ ವಿಧಾನ ಆವಶ್ಯಕವಾಗುತ್ತದೆ. ದುರ್ಲಭ ನಾಣ್ಯಗಳನ್ನು ಅಪರಮಿತ ಪ್ರಮಾಣದಲ್ಲಿ ಪಡೆಯಲು ಶಕ್ತಿ ಇಲ್ಲದಿದ್ದರೆ, ಈ ಪಡಿತರ ಅತ್ಯಾವಶ್ಯಕ. ಯಾವ ಶ್ರೀಮಂತ ರಾಷ್ಟ್ರವೂ ತನ್ನ ಹಣವನ್ನು ಬೇರೆ ರಾಷ್ಟ್ರಗಳ ಸಹಾಯಕ್ಕಾಗಿ ಒದಗಿಸಿ, ಪ್ರತಿಫಲಾಪೇಕ್ಷೆ ಯಿಲ್ಲದೆ ವರ್ತಿಸುವುದು ರಾಜಕೀಯ ಕ್ಷೇತ್ರದಲ್ಲಿ ಅಸಾಧ್ಯ.

ಈ ಸಂಸ್ಥೆಗೆ ಸೇರುವ ಮುನ್ನ ರಾಷ್ಟ್ರಗಳು ತಮ್ಮ ನಾಣ್ಯಗಳ ವಿನಿಮಯದ ಸಮಬೆಲೆಯನ್ನು ಚಿನ್ನದಲ್ಲಾಗಲೀ ಅಥವಾ ಜುಲೈ ೧, ೧೯೪೪ ರಲ್ಲಿದ್ದ ಅಮೆರಿಕನ್ ಡಾಲರಿನ ತೂಕ ಮತ್ತು ಪರಿಶುಷ್ಟತೆಯ ಪ್ರಮಾಣದ ಆಧಾರದ ಮೇಲೆ ಡಾಲರುಗಳಲ್ಲಾಗಲಿ ಸೂಚಿಸಬೇಕಾಗಿ ಈ ಸಂಸ್ಥೆ ಕೇಳಿತು. ಹೀಗೆ ಸೂಚಿತವಾದ ಬೆಲೆ ಸರಿಯಾಗಿಲ್ಲದ ಪಕ್ಷದಲ್ಲಿ, ಡಿಸಂಬರ್ ೧೨, ೧೯೪೬ ರ ಒಳಗೆ ಸರಿಪಡಿಸುವ ಅವಕಾಶ ಆಯಾ ದೇಶದ ಸರಕಾರಕ್ಕೂ ಮತ್ತು ಅಂತರರಾಷ್ಟ್ರೀಯ ಆರ್ಥಿಕ ಸಂಸ್ಥೆಗೂ ಇತ್ತು. ಈ ರೀತಿಯಾಗಿ ನಾಣ್ಯಗಳ ವಿನಿಮಯದ

ಮೂಲ ಬೆಲೆಯನ್ನು ಸದಸ್ಯ ರಾಷ್ಟ್ರಗಳೇ ನಿರ್ಧರಿಸುವ ಸ್ವಾತಂತ್ರ್ಯ ಬಂದಿತು. ಆದರೆ. ನೈಜವಾದ ಹಾಗೂ ಸ್ವಾಭಾವಿಕವಾದ ವಿನಿಮಯ ದರಗಳನ್ನು ನಿರ್ಧರಿಸಲು ಸಾಧ್ಯವಾಗಲಿಲ್ಲ. ಅಂತರ ರಾಷ್ಟ್ರೀಯ ಆರ್ಥಿಕಸಂಸ್ಥೆಯು ಸದಸ್ಯ ರಾಷ್ಟ್ರಗಳ ನಾಣ್ಯಗಳ ಮೂಲ ವಿನಿಮಯ ಸಮ ಬೆಲೆಗಳನ್ನು ನಿರ್ಧರಿಸಿದ್ದರಿಂದ, ೧೯೩೦ ರ ದಶಕದಲ್ಲಾದಂತೆ ಅಕ್ರಮವಾದ ಹಾಗೂ ನಾಗಾಲೋಟದ ಬಂಡವಾಳದ ಚಲನ ವಲನಗಳಿಗೆ ಅವಕಾಶ ತಪ್ಪಿಹೋಯಿತು. ಆದರೆ, ಈ ವಿನಿಮಯ ಬೆಲೆಗಳಿಂದುಂಟಾದ ಅಂತರ ರಾಷ್ಟ್ರೀಯ ಸಾಲಸೋಲಗಳ ಸಿಲುಕಿನ ಅಂತರವನ್ನು ಮುಚ್ಚಲು ಸಾಲಗಳ ರೂಪದಲ್ಲಿ, ಉದಾರತೆಯ ರೂಪದಲ್ಲಿ ಅನೇಕ ದೇಶಗಳಿಗೆ ಕ್ರಮಬದ್ಧವಾದ ಬಂಡವಾಳದ ಚಲನ ವಲನಗಳ ಸಮಸ್ಯೆ ಉತ್ಪನ್ನವಾಯಿತು. ಇದು ಆರ್ಥಿಕ ಕ್ಷೇತ್ರದಲ್ಲಿ ಅಗ್ರಸ್ಥಾನವನ್ನು ಪಡೆದಿದ್ದ ಅಮೆರಿಕ ಮಾತ್ರ ನಿರ್ವಹಿಸಬಲ್ಲ ಗಹನವಾದ ಸಮಸ್ಯೆ ಯಾಯಿತು. ಯುದ್ಧ ಮುಗಿದ ಪ್ರಾರಂಭದಲ್ಲಿ ನಾಣ್ಯಗಳ ವಿನಿಮಯದ ಸಮ ಬೆಲೆ ಕೇವಲ ಅಸ್ವಾಭಾವಿಕವಾದುದೆಂದೂ, ಬೆಲೆಯ ಹತೋಟಿಗಳ ಪರಿಣಾಮದಿಂದುಂಟಾದುವೆಂದೂ ತಿಳಿದು ಬಂದು, ಈ ಸಮ ಬೆಲೆಗಳನ್ನು ಸ್ಥಿರವಾಗಿ ಒಂದೇ ಮಟ್ಟದಲ್ಲಿರಿಸಲು ಸಾಧ್ಯವಿಲ್ಲವೆಂದು ತೋರಿತು. ಇದರಿಂದ, ಈ ಸಮಬೆಲೆಗಳಲ್ಲಿ ಕೆಲವು ಬದಲಾವಣೆಗಳು ಅತ್ಯಾವಶ್ಯಕವಾದವು. ಆದರೆ, ಪ್ರಾರಂಭದಲ್ಲಿ ನಿರ್ಣಯಿಸಿದ ಸಮ ಬೆಲೆಗಳನ್ನು ಸ್ವೇಚ್ಛೆಯಾಗಿ ಬದಲಾಯಿಸಲು ಅವಕಾಶವಿರಲಿಲ್ಲ. ಆವಶ್ಯಕತೆ ಇದ್ದಲ್ಲಿ ಮೂಲ ಬೆಲೆಯಲ್ಲಿ ನೂರಕ್ಕೆ ಹತ್ತರಷ್ಟು ಬದಲಾಯಿಸಲು ಸದಸ್ಯ ರಾಷ್ಟ್ರಗಳಿಗೆ ಸ್ವಾತಂತ್ರ್ಯವಿದೆ. ಇದಕ್ಕೂ ಹೆಚ್ಚಿನ ಆವಶ್ಯಕತೆ ಇದ್ದಾಗ ಆರ್ಥಿಕ ಸಂಸ್ಥೆಯ ಒಪ್ಪಿಗೆಯನ್ನು ಮೂರುದಿನಗಳೊಳಗಾಗಿ ಪಡೆದು ನೂರಕ್ಕೆ ಹತ್ತರಷ್ಟು ಪ್ರಮಾಣವಿಾರದಂತೆ ಬೆಲೆಯನ್ನು ಇನ್ನೂ ಬದಲಾಯಿಸ ಬಹುದು. ಇದರ ಮೇಲೆ ಸದಸ್ಯ ರಾಷ್ಟ್ರಗಳು ಸಾಮಾಜಿಕ ಹಾಗೂ ರಾಜಕೀಯ ನೀತಿಗನಸಾರವಾಗಿ ಅತ್ಯಂತ ಉಗ್ರವಾದ ಆರ್ಥಿಕ ಪರಿಸ್ಥಿತಿಯನ್ನು ನಿವಾರಿಸಲು, ಇನ್ನೂ ಹೆಚ್ಚಿನ ಬದಲಾವಣೆಯನ್ನು ಸೂಚಿಸಿದಾಗ, ಈ

ಸಂಸ್ಥೆ ತನ್ನ ಒಪ್ಪಿಗೆಯನ್ನು ಕೊಡಬೇಕೆಂದು ತೀರ್ಮಾನವಾಗಿದೆ. ಇದರಿಂದ, ನಾಣ್ಯಗಳ ವಿನಿಮಯ ಬೆಲೆಗಳು ಸ್ವಚ್ಛಂದವಾಗಿ ಬದಲಾವಣೆಯಾಗಲು ಅವಕಾಶವಿಲ್ಲದೆ, ಯಾವುದಾದರೂ ಒಂದು ಸದಸ್ಯರಾಷ್ಟ್ರದ ಹಣದುಬ್ಬರವನ್ನು ಹಣದ ಬೆಲೆಯ ಕುಗ್ಗುವಿಕೆಯ(Inflation and Depreciation of Money) ನಿವಾರಿಸಿ, ಅತ್ಯಂತ ಬಿರುಸಿನ ಪೈಪೋಟಿಯಿಂದಾಗುವ ಮೌಲ್ಯಗಳ ಇಳಿವರಿಯನ್ನು ತಡೆಗಟ್ಟಲು ಅವಕಾಶ ವಾಗಿದೆ. ಎರಡು ಮಹಾಯುದ್ಧಗಳ ನಡುವಿನ ಕಾಲದ ಅನಿಶ್ಚಿತ ಆರ್ಥಿಕ ವಾತಾರಣಕ್ಕಿಂತ, ಎರಡನೆಯ ಯುದ್ಧಾ ನಂತರ ಆರ್ಥಿಕ ವಾತಾವರಣ ಎಷ್ಟೋ ವಿಧದಲ್ಲಿ ಉತ್ತಮವಾಗಿದೆ ಎಂದು ಧಾರಾಳವಾಗಿ ಹೇಳಬಹುದು. ಮೊದಲನೆಯ ಮಹಾಯುದ್ಧಾ ನಂತರ, ಕೇವಲ ರಾಷ್ಟ್ರಗಳ ಪ್ರತ್ಯೇಕವಾದ ಸಂಕುಚಿತ ಆರ್ಥಿಕನೀತಿಯ ಆಧಾರದ ಮೇಲೆ ನಾಣ್ಯಗಳ ವಿನಿಮಯ ಬೆಲೆಗಳು ನಿರ್ಧರ ವಾಗುತ್ತಿದ್ದವು; ಕ್ರಮವಿಲ್ಲದ ವಿವಿಧರೀತಿಯ ವಿನಿಮಯದ ಇಳಿವರಿಗಳಿಂದ ಆರ್ಥಿಕರಥವು ಕೀಲುತಪ್ಪಿ ಹಣದ ಪದ್ಧತಿಯಲ್ಲಿ ದೊಡ್ಡ ಆಂದೋಲನವೇ ಆಯಿತು. ಎರಡನೆಯ ಯುದ್ಧಾನಂತರ ನಿಮಿತವಾದ ಆರ್ಥಿಕಸಂಸ್ಥೆ ಅಂತರ ರಾಷ್ಟ್ರೀಯ ಆರ್ಥಿಕ ಕ್ಷೇತ್ರವನ್ನು ಸ್ವಚ್ಛವಾಡಿತು ಎಂದು ಹೇಳಬಹುದು.

ಅಂತರ ರಾಷ್ಟ್ರೀಯ ಆರ್ಥಿಕನಿಧಿಯು ಸದಸ್ಯರಾಷ್ಟ್ರಗಳ ನಾಣ್ಯ ವಿನಿಮಯ ಸಮ ಬೆಲೆಯನ್ನು ಅಂತರ ರಾಷ್ಟ್ರೀಯ ಆರ್ಥಿಕ ಸಹಕಾರ ನೀತಿಯ ಅಡಿಗಲ್ಲಿನ ಮೇಲೆ ರೂಪಗೊಳಿಸಿದ್ದು ಸೂಕ್ತವಾಗಿದೆ ಎನ್ನುವುದರಲ್ಲಿ ಯಾವ ಸಂದೇಹವೂ ಇಲ್ಲ. ಆದರೆ, ಈ ಸನ್ನಿವೇಶದಲ್ಲಿ ಕೆಲವು ಪ್ರಶ್ನೆಗಳನ್ನು ಸ್ವಾಭಾವಿಕವಾಗಿ ಕೇಳಬೇಕಾಗುತ್ತದೆ. ಒಂದು ದೇಶದ ನಾಣ್ಯಕ್ಕೆ ವಿಹಿತವಾದ ವಿನಿಮಯ ಬೆಲೆಯೇನು? ಅದನ್ನು ಯಾವರೀತಿ ನಿರ್ಧರಿಸಬೇಕು? ಅಥವಾ ನಾಣ್ಯಗಳ ಸಮಬೆಲೆಯನ್ನು ನಿರ್ಣಯಿಸುವ ಆರ್ಥಿಕ ನಿಯಮಗಳಾವುವು? ಸರಿಯಾದ ವಿನಿಮಯ ಬೆಲೆಯು ನಿರ್ಧಾರವಾದಮೇಲೆ ಅದನ್ನು ಸ್ಥಿರವಾಗಿರಿಸುವುದು ಹೇಗೆ? ಈ ಸನ್ನಿವೇಶದಲ್ಲಿ ಸಮತೂಕದ ವಿನಿಮಯದರವನ್ನು (The

Eqilibrium Rate of Exchange) ಪರಿಶೀಲಿಸುವುದು ಉಚಿತವಾಗಿದೆ. ದೇಶದ ಅಂತರ ರಾಷ್ಟ್ರೀಯ ಹಣದ ನಿಧಿಯಲ್ಲಿ ಯಾವನಿವ್ವಳ ಬದಲಾವಣೆಯೂ ಇಲ್ಲದೆ, ಆದೇಶದ ಸಾಲ ಸೋಲಗಳನ್ನು ಸಮದೂಗಿಸುವ ವಿನಿಮಯದರವನ್ನು ಸಮತೂಕದವಿನಿಮಯದರವೆಂದು ಕರೆಯಬಹುದು. ಆದರೆ, ಅಂತರ ರಾಷ್ಟ್ರೀಯ ವ್ಯಾಪಾರದ ಸಾಲಸೋಲಗಳ ಸಮತೂಕ, ವಿನಿಮಯದರದ ನೈಜತೆಯನ್ನು ವ್ಯಕ್ತಪಡಿಸುವ ಒಂದು ಪ್ರಮಾಣವಲ್ಲ. ೧೯೨೫-೩೦ ರಲ್ಲಿ ಬ್ರಿಟನ್ನಿನ ಪೌಂಡಿನ ವಿನಿಮಯದರ ಮೇಲ್ಮಟ್ಟದಲ್ಲಿತ್ತು. ಆದರೆ ಅದರಲ್ಲಿ ಬ್ರಿಟನ್ನಿನ ಸಾಲ ಸೋಲಗಳ ಸಿಲುಕಿನ ವಿಷಮತೆಯ ಚಿಹ್ನೆಯಾವುದೂ ಇರಲಿಲ್ಲ. ಅಂದರೆ ಬ್ರಿಟನ್ನಿನ ಸಾಲಸೋಲಗಳ ಸಮತೂಕವನ್ನು ರಾಷ್ಟ್ರದಾಯದ ಮತ್ತು ಗಿರಾಕಿಯ ಸಂಕೋಚನದಿಂದ ಸಾಗಿಸಲಾಯಿತು. ವೇತನಗಳ ಮತ್ತು ಸಾಮಾನುಗಳ ಬೆಲೆಗಳ ಬಿಗಿಯಿಂದ, ಈ ಸಂಕೋಚನವು ಅತಿ ಹೆಚ್ಚಿನ ಪ್ರಮಾಣದ ನಿರುದ್ಯೋಗವನ್ನು ಉತ್ಪನ್ನ ಮಾಡಿತು. ಇದರಿಂದ ಮಹತ್ತರವಾದ, ಪ್ರಳಯಕಾರಕವಾದ ಆರ್ಥಿಕ ದುಃಸ್ಥಿತಿಯೂ ತಲೆದೋರಿತು. ಆದ್ದರಿಂದ, ವಿನಿಮಯದರವು ಅಂತರ ರಾಷ್ಟ್ರೀಯ ಲೇವಾದೇವಿಗಳನ್ನು ಸಮದೂಗಿಸುವುದಲ್ಲದೆ, ದೇಶದಲ್ಲಿ ಪೂರ್ಣ ಉದ್ಯೋಗವನ್ನು ಕಲ್ಪಿಸಬೇಕು. ಈ ದರವನ್ನು ಸಮತೂಕದ ವಿನಿಮಯದರವೆಂದು ಕರೆಯಬಹುದು.

ವಿನಿಮಯದ ಸಮಬೆಲೆಯನ್ನು ನಿರ್ಧರಿಸುವ ಆರ್ಥಿಕ ನಿಯಮಗಳ ವಿಷಯದಲ್ಲಿ ಆರ್ಥಿಕ ಸಂಸ್ಥೆಯು ನಿರ್ದಿಷ್ಟವಾದ, ಖಚಿತವಾದ ಉತ್ತರವನ್ನು ಕೊಟ್ಟಿಲ್ಲ. ಬಹುಶಃ ನೀತಿನಿಯಮಗಳನ್ನು ಪ್ರತಿಪಾದಿಸದಿರುವುದೇ ಒಂದು ವಿಧವಾದ ಚಾಣಾಕ್ಷ್ಯವೆಂದು ತೋರುತ್ತದೆ. ಆರ್ಥಿಕ ಸಂಸ್ಥೆಯ ಕಾರ್ಯಕ್ಷೇತ್ರದ ವ್ಯವಸಾಯದಿಂದ ಮತ್ತು ನಾಣ್ಯಗಳ ವಿನಿಮಯ ಬೆಲೆಯನ್ನು ನಿರ್ಧರಿಸುವ ನೀತಿಯ ಪರಿಶೀಲನೆಯಿಂದ, ನಿರ್ದಿಷ್ಟವಾದ, ನಿರ್ವಿವಾದವಾದ ಅಂಶಗಳಾವುವೂ ಹೊರ ಬೀಳುವುದಿಲ್ಲ. ಮೊದಲಿನಿಂದಲೂ ಆರ್ಥಿಕ ಸಂಸ್ಥೆಯ ಮೇಲೆ ಅಮೆರಿಕಾದ

ಮಹತ್ತರವಾದ ಪ್ರಭಾವ ವಿಶೇಷದಿಂದ, ನೀತಿ ನಿಯಮಗಳು, ನಿರ್ಧಾರಗಳು, ತತ್ವಗಳು, ಕಾರ್ಯಕ್ಷೇತ್ರದ ಆಗ ಹೋಗಗಳು ಅಮೆರಿಕದ ಸಾರ್ವಜನಿಕ ಅಭಿಪ್ರಾಯದ ಕಾರ್ಮೋಡದಲ್ಲಿ ಸಿಲುಕಿ ರೂಪುಗೊಂಡು, ನ್ಯಾಯವಾಗಿ ಪ್ರಭಾವವನ್ನು ಬೀರುವ ಯಾವ ಅಂಶಗಳೂ ಮಹತ್ವವನ್ನು ಪಡೆದಿಲ್ಲ.

೧೯೪೬ನೆಯ ಇಸವಿಯ ಕೊನೆಯಲ್ಲಿ ಆರ್ಥಿಕ ಸಂಸ್ಥೆ ಸದಸ್ಯ ರಾಷ್ಟ್ರಗಳ ನಾಣ್ಯಗಳ ಮೂಲವಿನಿಮಯದ ಸಮ ಬೆಲೆಗಳನ್ನು ನಿರ್ಧರಿಸಿ, ಪ್ರಚಾರಪಡಿಸಿ ಕಾರ್ಯಕ್ಷೇತ್ರದಲ್ಲಿ ಕಾಲಿಟ್ಟಿತು. ಈ ಸಂಸ್ಥೆ ಕೇವಲ ತನ್ನ ಸೌಕರ್ಯಗಳಿಗನುಸಾರವಾಗಿ ವರ್ತಿಸಿತೇ ಹೊರತು, ಯಾವನಿರ್ದಿಷ್ಟವಾದ ತತ್ವಗಳ ಮೇಲೂ ಕೆಲಸಮಾಡಿಲ್ಲವೆಂದು ತೋರುತ್ತದೆ. ಅಂತರರಾಷ್ಟ್ರೀಯ ವ್ಯಾಪಾರವನ್ನು ಸುಗಮವಾಗಿ ಮಾಡಿ, ಅಂತರರಾಷ್ಟ್ರೀಯ ಆರ್ಥಿಕಸಂಬಂಧವನ್ನು ಚಿರಕಾಲ ಸ್ಥಾಪಿಸಲು ಸ್ಥಿರವಾದ ವಿನಿಮಯ ಬೆಲೆಗಳು ಅತ್ಯಾವಶ್ಯಕ. ಆದರೆ, ಡಿಸೆಂಬರ್ ೧೯೪೬ರಲ್ಲಿ ಆರ್ಥಿಕ ಸಂಸ್ಥೆಯು ಪ್ರಚುರಪಡಿಸಿದ ವಿನಿಮಯ ಬೆಲೆಗಳು ಅಷ್ಟು ಮಹತ್ವ ಪೂರಿತವಾಗಿರಲಿಲ್ಲ. ಅವುಗಳನ್ನು ಆಯಾ ರಾಷ್ಟ್ರದ ಸಗುಟು ವ್ಯಾಪಾರದ ಬೆಲೆಗಳಿಗಾಗಲೀ ಅಥವಾ ಜೀವನದ ವೆಚ್ಚಕ್ಕಾಗಲೀ ಹೋಲಿಸಿದರೆ, ಕೇವಲ ಕೃತ್ರಿಮವಾಗಿ ಕಾಣುತ್ತವೆ. ಇದಲ್ಲದೆ, ಈ ಬೆಲೆಗಳಿಂದ ಸದಸ್ಯ ರಾಷ್ಟ್ರಗಳ ಅಂತರ ರಾಷ್ಟ್ರೀಯ ವ್ಯಾಪಾರದಿಂದಾಗುವ ಸಾಲಸೋಲಗಳನ್ನು ಸಮದೂಗಿಸಲು ಸಾಧ್ಯವಿಲ್ಲ.

ಯುದ್ಧಾನಂತರ, ಪ್ರಪಂಚದಲ್ಲಿ ಅನೇಕ ಸಾಮಾನುಗಳ ಅಭಾವ ವಿದ್ದುದರಿಂದ, ಸಾಮಾನುಗಳ ರಫ್ತಿಗಾಗಿ ಸರಿಹೋಗುವ ಯಾವ ವಿನಿಮಯ ಬೆಲೆಗಳಾದರೂ ಸರಿಹೋಗುತ್ತವೆಂದು ಯೋಚಿಸಲಾಗಿತ್ತು. ಆದರೆ, ಕ್ರಮೇಣ ಉತ್ಪತ್ತಿ ಹೆಚ್ಚಾಗುತ್ತಾ, ಅನೇಕ ರಾಷ್ಟ್ರಗಳು ತಯಾರಾದ ಸಾಮಾನುಗಳನ್ನು ಇತರ ದೇಶಗಳಿಗೆ ರಫ್ತು ಮಾಡಿ ಇತರದೇಶಗಳ ಹಣವನ್ನು ಸಂಪಾದಿಸಿ, ಆದೇಶಗಳಿಂದ ಆಮದಾದ ಸಾಮಾನುಗಳಿಗೆ ಆಯಾದೇಶಗಳ ನಾಣ್ಯಗಳನ್ನು ಕೊಡಲು

ಕಷ್ಟವಾಯಿತು. ಇದರಲ್ಲಿ, ಮುಖ್ಯವಾಗಿ, ಡಾಲರು ಪ್ರದೇಶದಿಂದ ಅಂದರೆ ಅಮೆರಿಕಾದಿಂದ ಸಾಮಾನುಗಳ ರಫ್ತುಹೆಚ್ಚಾಗಿ, ಇತರ ರಾಷ್ಟ್ರಗಳು ಅಮೆರಿಕಾಕ್ಕೆ ಪ್ರತಿಯಾಗಿ ಸಾಮಾನನ್ನು ಕಳುಹಿಸಲು ಸಾಧ್ಯವಾಗಲಿಲ್ಲ. ಸ್ಟರ್ಲಿಂಗ್ ಪ್ರದೇಶದ ರಾಷ್ಟ್ರಗಳ ಸಾಮಾನುಗಳ ಮಾರಾಟ ಮಾಡುವ ಬೆಲೆ ಹೆಚ್ಚಾಗಿ, ಈ ರಾಷ್ಟ್ರಗಳಿಂದ ಅಮೆರಿಕ ಏನನ್ನೂ ಕೊಳ್ಳಲು ಇಚ್ಛೆಪಡಲಿಲ್ಲ. ಇದರಿಂದ, ಸ್ವಾಭಾವಿಕವಾಗಿ ಆರ್ಥಿಕ ಕ್ಷೇತ್ರದಲ್ಲಿ ಅಮೆರಿಕಾಕ್ಕೆ ಅಗ್ರಸ್ಥಾನ ಬಂದಿತು. ಅಂತರ ರಾಷ್ಟ್ರೀಯ ವ್ಯಾಪಾರದಲ್ಲಿ ಆಮದು ರಫ್ತಿಗೆ ಸಮತೂಕ ವಿಲ್ಲದೆ ಉಗ್ರ ವಿಷಮತೆ ಉಂಟಾಯಿತು. ಅನೇಕ ದೇಶಗಳಿಗೆ ಡಾಲರುಗಳ ಆವಶ್ಯ ಕತೆ ಅತಿಹೆಚ್ಚಾಗಿ, ಪ್ರಪಂಚದಲ್ಲೆಲ್ಲಾ ಡಾಲರುಗಳ ಕ್ಷಾಮ ಅರ್ಥಿಕ ಕ್ಷೇತ್ರದಲ್ಲಿ ತಲೆದೋರಿತು. ಇವರ ಫಲಿತಾಂಶವಾಗಿ, ಅಮೆರಿಕದ ಡಾಲರು ದುರ್ಲಭ ನಾಣ್ಯವಾಗಿ (Hard currency) ಅಮೆರಿಕ ದುರ್ಲಭ ನಾಣ್ಯದ (Hard curency Area) ಪ್ರದೇಶವಾಯಿತು. ದುರ್ಲಭ ನಾಣ್ಯ ವೆಂದರೇನು? ಯಾವುದಾದರೂ ದೇಶದ ಹಣಕ್ಕೆ ಇತರ ದೇಶಗಳಲ್ಲಿ ಹೆಚ್ಚು ಗಿರಾಕಿ ಇದ್ದು, ಆ ಹಣವನ್ನು ಸಂಪಾದಿಸಲು ಕಷ್ಟವಾದರೆ, ಅಂಥ ಹಣ ದುರ್ಲಭ ನಾಣ್ಯ ವಾಗುತ್ತದೆ. ಈಗ ಡಾಲರು ದುರ್ಲಭ ನಾಣ್ಯವಾಗಿ ಪ್ರಪಂಚದಲ್ಲಿ ಅತ್ಯಂತ ಬೆಲೆಯುಳ್ಳ, ಅಮೂಲ್ಯವಾದ ಮತ್ತು ಶ್ರೇಷ್ಠವಾದ ನಾಣ್ಯವಾಗಿದೆ. ಡಿಸೆಂಬರ್, ೧೯೪೬ ರಲ್ಲಿ ನಿಶ್ಚಿತವಾದ ಸಮಬೆಲೆಗಳೇ ಈ ಪರಿಸ್ಥಿತಿಯ ಮೂಲ ಕಾರಣಗಳು. ಆರ್ಥಿಕ ಸಂಸ್ಥೆಯ ಅನೇಕ ಸದಸ್ಯ ರಾಷ್ಟ್ರಗಳಲ್ಲಿ ನಾಣ್ಯ ಗಳ ವಿನಿಮಯದ ಸಮ ಬೆಲೆಗಳು ಡಾಲರ್ ಸಂಬಂಧದಲ್ಲಿ ಅತ್ಯಂತ ಹೆಚ್ಚಾದುದರಿಂದ ಅಂತರ ರಾಷ್ಟ್ರೀಯ ಆರ್ಥಿಕ ಕ್ಷೇತ್ರದಲ್ಲಿ ಏರುಪೇರು ಗಳಿಗೆ ಅವಕಾಶವಾಯಿತು. ಆದುದರಿಂದ, ಅನೇಕ ಸದಸ್ಯ ರಾಷ್ಟ್ರಗಳ ನಾಣ್ಯಗಳ ಮೌಲ್ಯದ ಇಳಿತಾಯ ಅತ್ಯವಶ್ಯವೆಂದು ತೋರಿತು.

ಡಿಸೆಂಬರ್, ೧೯೪೬ ರಲ್ಲಿ ನಿಶ್ಚಿತವಾದ ಮೂಲ ವಿನಿಮಯ ಬೆಲೆ ಗಳು ಕೇವಲ ಕ್ಷಣಿಕವಾದುವೆಂಬುದು ನಿರ್ವಿವಾದವಾದ ವಿಷಯ. ಆರ್ಥಿಕ ಸಂಸ್ಥೆ ಈ ವಿಷಯವನ್ನು ಮೊದಲು ಒಪ್ಪಿಕೊಳ್ಳಲಿಲ್ಲ. ಯಾವು

ದಾದರೂ ಸದಸ್ಯ ರಾಷ್ಟ್ರದ ನಾಣ್ಯ ವಿನಿಮಯದ ಸಮಬೆಲೆ ಆ ದೇಶದ ರಫ್ತುವ್ಯಾಪಾರಕ್ಕೆ ಆತಂಕವಾಗದೇ ಇರುವವರೆಗೂ, ಪ್ರಂಪಚದ ಈಗಿನ ನಾಣ್ಯಗಳ ವಿನಿಮಯದರಗಳನ್ನು ಬದಲಾಯಿಸುವ ಆವಶ್ಯಕತೆ ಇಲ್ಲ ವೆಂದು ಈ ಸಂಸ್ಥೆಯ ಅಭಿಪ್ರಾಯವಿದ್ದಿತು. ಆರ್ಥಿಕ ಸಂಸ್ಥೆಯ ಈ ನೀತಿಯಿಂದ, ಕೆಲವು ರಾಷ್ಟ್ರಗಳಲ್ಲಿ ಮೇಲ್ಕಟ್ಟಿದ ನಾಣ್ಯ ವಿನಿಮಯದ ದರಗಳಿಂದ ರಫ್ತು ವ್ಯಾಪಾರಕ್ಕೆ ಮಹತ್ತರವಾದ ಅಡಚಣೆಯಾಗಿ, ಆ ರಾಷ್ಟ್ರಗಳಿಗೆ ದುರ್ಲಭವಾದ ನಾಣ್ಯಗಳನ್ನು, ಅಂದರೆ ಡಾಲರು ಗಳನ್ನು ಸಂಪಾದಿಸಲು ಕಷ್ಟವಾಯಿತು. ಅಂತರ ರಾಷ್ಟ್ರೀಯ ಆರ್ಥಿಕ ಅಸಮಾನತೆಗೆ ಹಣದುಬ್ಬರವೇ ಕಾರಣ ; ಆದುದರಿಂದ ಹಣದುಬ್ಬರ ವನ್ನು ತಡೆಗಟ್ಟದೆ, ನಾಣ್ಯಗಳ ವಿನಿಮಯ ದರಗಳನ್ನು ಪುನರ್ವಿಮ ರ್ಶಿಸುವುದು ಕೇವಲ ಅಕಾಲಿಕವೆಂದು ಆರ್ಥಿಕ ಸಂಸ್ಥೆಯು ಕಳೆದವರ್ಷ ಅಭಿಪ್ರಾಯ ಪಟ್ಟಿತ್ತು. ಆದರೆ ಈ ವರ್ಷದಲ್ಲಿ ಸಾಮಾನುಗಳ ಬೆಲೆ ಗಳ ಮಹತ್ತರ ಏರಿಳಿತಗಳಿಂದ ಆರ್ಥಿಕ ಸಂಸ್ಥೆಯ ನೀತಿಯಲ್ಲಿ ಬದ ಲಾವಣೆಗಳಾಗಿವೆ. ಡಾಲರು ಪ್ರದೇಶದ ರಾಷ್ಟ್ರಗಳ ಸಾಮಾನುಗಳ ಬೆಲೆ ಗಳು ಇಳಮುಖವಾಗಿ, ಡಾಲರು ಪ್ರದೇಶಕ್ಕೂ ಇತರ ಪ್ರದೇಶಗಳಿಗೂ ಸಾಮಾನುಗಳ ಮಾರಾಟದ ಬೆಲೆಗಳಲ್ಲಿ, ಉತ್ಪತ್ತಿಯ ಪಕ್ಷದಲ್ಲಿ ಅತಿ ಹೆಚ್ಚಾದ ವ್ಯತ್ಯಾಸಗಳಿದ್ದುದನ್ನು, ಆರ್ಥಿಕ ಸಂಸ್ಥೆಯು ಏಪ್ರಿಲ್ ೩೦,೧೯೪೯ ಕ್ಕೆ ಕೊನೆಯಾದ ವರ್ಷದ ವರದಿಯಲ್ಲಿ ಈ ವಿಷಯವನ್ನು ಗಮನಿಸಿ ಗಾಬರಿಪಟ್ಟಿದೆ. " ಪ್ರಪಂಚವು ಕೇವಲ ಕಾಗದದ ಹಣವಲ್ಲಿ ವ್ಯವಹಾರ ನಡೆಸುತ್ತಿರುವ ಹೆಚ್ಚು ಬೆಲೆ ಪ್ರದೇಶಗಳಾಗಿ ವಿಭಜನೆಯಾ ಗುತ್ತಿದೆ. ಈ ಬೆಲೆಗಳಲ್ಲಿ ವ್ಯತಾಸಗಳಿರುವವರೆಗೂ, ಡಾಲರುಗಳ ಅಭಾವ, ಅವುಗಳಿಗಾಗಿ ಅತಿಹೆಚ್ಚಿನ ಆಸಕ್ತಿ ಗಿರಾಕಿ ಇದ್ದೇ ಇರುತ್ತವೆ. ಆರ್ಥಿಕ ಕಟ್ಟುಗಳಿಂದ ಮತ್ತು ಭೇದಗಳಿಂದ ಪ್ರಪಂಚದ ಆರ್ಥಿಕ ನೀತಿಯು ಅನೇಕ ಆರ್ಥಿಕ ಕ್ಷೇತ್ರಗಳಾಗಿ ವಿಭಾಗವಾಗಿ, ಪ್ರತಿಯೊಂದು ಆರ್ಥಿಕ ಕ್ಷೇತ್ರವೂ ತನ್ನದೇ ಆದ ಬೆಲೆಗಳ ರಚನೆಯನ್ನು ನಿರ್ಮಿಸಿ, ಇತರ ಕ್ಷೇತ್ರಗಳಿಂದ ಪ್ರತ್ಯೇಕವಾಗಲು ಪ್ರಯತ್ನಿಸುತ್ತಿದೆ. ಈ ಪ್ರತ್ಯೇಕ ಮನೋಭಾವನೆಯಿಂದ ತನ್ನ ಕಾಗದದ ಹಣವನ್ನು

ವ್ಯಾಪಾರ ನಿಬಂಧನೆಗಳಿಂದಲೂ ಮತ್ತು ವಿನಿಮಯ ಹತೋಟಿಗಳಿಂದಲೂ ರಕ್ಷಣೆಮಾಡಲು ಸತತ ಪ್ರಯತ್ನ ಮಾಡುತ್ತಿದೆ.'' ಈ ಅಂಶವನ್ನು ಆರ್ಥಿಕ ಸಂಸ್ಥೆಯ ಆಡಳಿತವ ಡೈರೆಕ್ಟರಾದ ಕಾಮಿಲಿ ಗಟ್ಟರವರು ಸೆಪ್ಟೆಂಬರ್ ೨೨, ೧೯೪೯ರಲ್ಲಿ ಪತ್ರಿಕಾ ಸಮ್ಮೇಳನದಲ್ಲಿ ಪುನಃ ಒತ್ತಿಹೇಳಿದ್ದಾರೆ. ಆದ್ದರಿಂದ, ಸಾಮಾನುಗಳ ಬೆಲೆ ಹೆಚ್ಚಾಗಿದ್ದ ರಾಷ್ಟ್ರಗಳಲ್ಲಿ ನಾಣ್ಯ ಮೌಲ್ಯದ ಇಳಿವರಿ ಅತ್ಯಾವಶ್ಯಕವಾಯಿತು.

# ೩. ಬ್ರಿಟನ್ನಿನ ಪೌಂಡ್ ಸ್ಟರ್ಲಿಂಗ್

ಬ್ರಿಟನ್ನಿನ ಆರ್ಥಿಕ ಸಚಿವ ಸರ್ ಸ್ಟ್ಯಾಫರ್ಡ್ ಕ್ರಿಪ್ಸರು, ಕೆನಡ, ಅಮೆರಿಕ, ಬ್ರಿಟನ್ನು—ಈ ಮೂರು ರಾಷ್ಟ್ರಗಳ ಆರ್ಥಿಕ ಸಚಿವರ ವಾಷಿಂಗ್‌ಟನ್ ಸಮ್ಮೇಳನದಲ್ಲಿ ಭಾಗವಹಿಸಿ, ಇಂಗ್ಲೆಂಡಿಗೆ ಹಿಂದಿರುಗಿದ ಮೇಲೆ ಸ್ಟರ್ಲಿಂಗ್ ಮೌಲ್ಯದ ಇಳಿವರಿಯನ್ನು, ೧೯೪೯ರ ಸೆಪ್ಟೆಂಬರ್ ೧೮ನೇ ತಾರೀಖು ಭಾನುವಾರ ರಾತ್ರಿ ರೇಡಿಯೋ ಭಾಷಣದಲ್ಲಿ ಪ್ರಕಟಪಡಿಸಿದರು. ಸ್ಟರ್ಲಿಂಗ್ ಮೌಲ್ಯದ ಇಳಿತಾಯ ಸೆಪ್ಟೆಂಬರ್ ೧೯ನೇ ತಾರೀಖಿನಿಂದ ಕಾರ್ಯರೂಪಕ್ಕೆ ಬಂದಿದೆ. ಸ್ಟರ್ಲಿಂಗಿನ ಡಾಲರು ವಿನಿಮಯ ದರ ೪·೦೩ ಡಾಲರುಗಳಿಂದ, ೨·೮೦ ಡಾಲರುಗಳಿಗೆ ಇಳಿದಿದೆ. ಅಂದರೆ, ಪೌಂಡ್ ಸ್ಟರ್ಲಿಂಗಿನ ಮೌಲ್ಯ ಸೇಕಡ ೩೦½ ಯಷ್ಟು ಇಳಿತಾಯವಾಗಿದೆ. ಸ್ಟರ್ಲಿಂಗ್ ಮೌಲ್ಯದ ಇಳಿತಾಯದ ನಿರ್ಧಾರ ಅತ್ಯಂತ ಮಹತ್ವಪೂರಿತವಾದ ವಿಷಯ. ಇದೇ ರೀತಿ ಸೆಪ್ಟೆಂಬರ್ ೨೧ನೇ ತಾರೀಖು, ೧೯೩೧ರಲ್ಲಿ ಬ್ರಿಟನ್ನು ಹೊನ್ನಿನ ಹಣಪದ್ಧತಿಯನ್ನು ತ್ಯಜಿಸುವ ನಿರ್ಧಾರ ಇಡೀ ವಿಶ್ವದಲ್ಲೇ ಒಂದು ಮಹತ್ವವಾದ ಆರ್ಥಿಕ ವಿಷಯವೆಂದು ಪರಿಗಣಿಸಲಾಗಿತ್ತು. ಸ್ಟರ್ಲಿಂಗ್ ಮೌಲ್ಯದ ಇಳಿತಾಯ ಅನಿವಾರ್ಯವೆಂದು ಆರ್ಥಿಕ ಸಚಿವರ ಅಭಿಪ್ರಾಯ. ಇದು ಹೇಗೆ ಅನಿವಾರ್ಯವೆಂಬುದನ್ನು ಆಮೂಲಾಗ್ರವಾಗಿ ಪರಿಶೀಲಿಸುವುದು ಅತ್ಯಗತ್ಯ.

ಯುದ್ಧಾನಂತರ ಬ್ರಿಟನ್ನಿನ ಆರ್ಥಿಕ ಸ್ಥಿತಿ ತಲೆಕೆಳಗಾಗಿ, ಬ್ರಿಟನ್ನು ಅಮೆರಿಕಕ್ಕೆ ಏನನ್ನೂ ರಫ್ತುಮಾಡಲು ಸಾಧ್ಯವಾಗಲಿಲ್ಲ. ಯುದ್ಧಕಾಲದಲ್ಲಿ, ಮನುಷ್ಯಶಕ್ತಿಯನ್ನೂ ದೇಶದ ಸ್ವಾಭಾವಿಕ ಸಂಪತ್ತನ್ನೂ ಯುದ್ಧಯಂತ್ರದ ಬಲಕ್ಕಾಗಿ ಕೇಂದ್ರೀಕರಿಸಿದ್ದರಿಂದ ಬ್ರಿಟನ್ನಿನ ರಫ್ತುವ್ಯಾಪಾರದ ಪ್ರಮಾಣವು ೧೯೩೮ನೆಯ ಇಸವಿಯ ಪ್ರಮಾಣದ ಮೂರನೆಯ ಒಂದು ಭಾಗಕ್ಕಿಂತ ಕಡಮೆಯಾಯಿತು. ಬ್ರಿಟನ್ನು ನೂರಾರು ವರ್ಷಗಳಿಂದ ಸಂಪಾದಿಸಿದ್ದ ವಿದೇಶೀ ಬಂಡ

ವಾಳ ಪತ್ರಗಳನ್ನು ಮಾರಬೇಕಾಯಿತು; ಮಿತ್ರರಾಷ್ಟ್ರಗಳಿಂದ ಮತ್ತು ಇತರ ದೇಶಗಳಿಂದ ಅಮಿತ ಪ್ರಮಾಣದಲ್ಲಿ ಬ್ರಿಟನ್ನು ಸಾಲ ತೆಗೆದು ಕೊಂಡಿತು. ಆರು ವರ್ಷಗಳ ಯುದ್ಧದ ಆಂದೋಲನದಲ್ಲಿ ಬ್ರಿಟನ್ನಿನ ಆರ್ಥಿಕ ಯಂತ್ರ ಶಿಥಿಲವಾಯಿತು. ಉತ್ಪತ್ತಿ ವಿಧಾನಗಳಲ್ಲಿ ಅತ್ಯಂತ ತ್ವರಿತವಾದ ಅಭಿವೃದ್ಧಿ ಅಮೆರಿಕದ ಸಹಾಯದಿಂದ ಮಾತ್ರ ಸಾಧ್ಯ ವಾಗುತ್ತಿತ್ತು. ಆದ್ದರಿಂದ ಯುದ್ಧಕಾಲದಲ್ಲಿ ಅಮೆರಿಕ ಲೆಂಡ್-ಲೀಸ್ ಯೋಜನೆಯಲ್ಲಿ ಡಾಲರುಗಳ ಸಹಾಯವನ್ನು ಒದಗಿಸಿದ ಹಾಗೆ, ಯುದ್ಧಾನಂತರ ಪುನರ್ರಚನೆಗೆ ಅಮೆರಿಕದಿಂದ ಬ್ರಿಟನ್ನು ಡಾಲರುಗಳ ಸಾಲವನ್ನು ಪಡೆಯುವುದು ಅತ್ಯವಶ್ಯವಾಯಿತು. ಡಿಸೆಂಬರ್ ೧೯೪೫ರಲ್ಲಿ ಬ್ರಿಟನ್ನು ಅಮೆರಿಕದ ಹಣಕಾಸಿನ ಒಪ್ಪಂದ ವಾಗಿ, ಅಮೆರಿಕವು ಬ್ರಿಟನ್ನಿಗೆ ಸಾಲಕೊಡುವ ವಿಷಯದಲ್ಲಿ ವಾಯಿದೆ ಷರತ್ತುಗಳ ನೀತಿ ಪ್ರತಿಪಾದಿತವಾಯಿತು. ಇದರಿಂದ, ಅಮೆರಿಕ ಬ್ರಿಟನ್ನಿಗೆ ೩,೭೫೦ ಮಿಲಿಯನ್ ಡಾಲರುಗಳ ಸಾಲವನ್ನು ಕೊಟ್ಟಿತು. ಬ್ರಿಟನ್ನು ಅಮೆರಿಕದಿಂದ ಸಾಮಾನುಗಳನ್ನೂ, ಸಾಧನಗಳನ್ನೂ ತರಿಸಿಕೊಳ್ಳಲು ಈ ಸಾಲ ಸಾಧಕವಾಗುವುದಲ್ಲದೆ, ಬ್ರಿಟನ್ನಿನ ಯುದ್ಧಾನಂತರದ ಪ್ರಚಲಿತ ಲೇವಾದೇವಿಗಳ ಸಿಲುಕನ್ನು ಪರಿಹರಿ ಸುವುದೆಂದು ಯೋಚಿಸಲಾಯಿತು. ೧೯೪೫-೪೬ರಲ್ಲಿ ಉತ್ಪತ್ತಿಯನ್ನು ಚೇತನಗೊಳಿಸಿ, ರಫ್ತುವ್ಯಾಪಾರವನ್ನು ಹೆಚ್ಚುಮಾಡಲು ಅತ್ಯಂತ ತ್ವರಿತವಾದ ಕ್ರಮಗಳನ್ನು ಕೈಗೊಳ್ಳಲಾಯಿತು. ಆದರೆ, ೧೯೪೭ರಲ್ಲಿ ಆಹಾರ ಧಾನ್ಯಗಳ ಬೆಳೆಯು ಕ್ಷೀಣಗೊಂಡುದರಿಂದ ವಿಶ್ವದಾದ್ಯಂತ ಡಾಲರುಗಳ ಅಭಾವವುಂಟಾಯಿತು. ಕಲ್ಲಿದ್ದಲಿನ ದುಃಸ್ಥಿತಿ ಮತ್ತು ಇತರ ಸಾಮಾನುಗಳ ಉತ್ಪತ್ತಿಯ ಸಂಕೋಚನ—ಇವುಗಳಿಂದಲೂ ಪರಿಸ್ಥಿತಿ ವಿಷಮಗೊಂಡಿತು. ಸಾಲಸೋಲಗಳ ಸಿಲುಕಿನಲ್ಲಿ ಉಂಟಾದ ನಿವ್ವಳ ಪ್ರತಿಕೂಲ ಪರಿಸ್ಥಿತಿಯು, ಪ್ರಚಲಿತ ಲೆಕ್ಕದಲ್ಲಿ ೧೯೪೫ರಲ್ಲಿ ೮೭೫ ಮಿಲಿಯನ್ ಪೌಂಡುಗಳಿಂದ ೧೯೪೬ರಲ್ಲಿ ೩೮೦ ಮಿಲಿಯನ್ ಪೌಂಡುಗಳಿಗೆ ಇಳಿದು ೧೯೪೭ರಲ್ಲಿ ತಕ್ಷಣವೇ ೬೩೦ ಮಿಲಿಯನ್ ಪೌಂಡುಗಳಿಗೆ ಏರಿತು. ಡಾಲರ್ ಕ್ಷಾಮದ ಅತ್ಯಂತ ವಿಷಮ

ವರ್ಷವಾದ ೧೯೪೭ರಲ್ಲಿ ಒಟ್ಟು ಸ್ಟರ್ಲಿಂಗ್ ಕ್ಷೇತ್ರದ ಡಾಲರು ನಷ್ಟಾಂಶ ೧,೦೩೪ ಮಿಲಿಯನ್ ಪೌಂಡುಗಳೆಂದು ಅಂದಾಜುಮಾಡಲಾಗಿದೆ. ಈ ಪರಿಸ್ಥಿತಿಯನ್ನು ಲೆಕ್ಕಿಸದೆ, ಬ್ರಿಟನ್ನು ಅಂತರ ರಾಷ್ಟ್ರೀಯ ವ್ಯಾಪಾರದ ಸಾಲಸೋಲಗಳಲ್ಲಿ ಸಮತೂಕವನ್ನುಂಟುಮಾಡಲು ಸತತ ಪ್ರಯತ್ನಗಳಿಂದ ಅಮಿತವಾಗಿ ಶ್ರಮಿಸುತ್ತಿದೆ. ಆರ್ಥಿಕ ಯೋಜನೆಯಿಂದ, ಉತ್ಪತ್ತಿಯು ಯುದ್ಧಕ್ಕಿಂತ ಹಿಂದಿನ ಪ್ರಮಾಣಕ್ಕಿಂತಲೂ ಹೆಚ್ಚಿದೆ; ಆಮದು ವ್ಯಾಪಾರದ ಹತೋಟಿ ಯೋಜನೆಯಿಂದ ಡಾಲರ್ ನಷ್ಟಾಂಶ ಕಡಮೆಯಾಗಿದೆ. ೧೯೪೭ರ ಪ್ರಚಲಿತ ಲೆಕ್ಕದಲ್ಲಿ ಬ್ರಿಟನ್ನಿನ ಸಾಲಸೋಲಗಳ ಸಿಲುಕು ಪಶ್ಚಿಮಾರ್ಧಗೋಳದೊಂದಿಗೆ ೬೫೫ ಮಿಲಿಯನ್ ಪೌಂಡುಗಳಷ್ಟಿತ್ತು. ೧೯೪೮ರಲ್ಲಿ ಇದು ೩೪೦ ಮಿಲಿಯನ್ ಪೌಂಡುಗಳಿಗೆ ಇಳಿಯಿತು. ಡಾಲರು ವೆಚ್ಚದಲ್ಲಿ ಅತಿ ಹೆಚ್ಚಿನ ಉಳಿತಾಯದಿಂದ ಮತ್ತು ಇತರ ಅಂಶಗಳಿಂದ ಸ್ಟರ್ಲಿಂಗ್ ಕ್ಷೇತ್ರದ ಡಾಲರು ನಷ್ಟಾಂಶ ೧೯೪೮ರಲ್ಲಿ ೪೨೩ ಮಿಲಿಯನ್ ಪೌಂಡುಗಳಿಗೆ ಇಳಿಯಿತು. ಡಾಲರುಗಳ ಅಭಾವದ ಸಮಸ್ಯೆಯಲ್ಲಿ ಅನುಕೂಲ ಪರಿಸ್ಥಿತಿ ೧೯೪೯ರಲ್ಲಿ ಮುಂದುವರಿಯಿತು. ಸರಕಾರದ "ಆರ್ಥಿಕ ನೋಟದ'' ಅಂದಾಜಿನಂತೆ ಜನವರಿ-ಜೂನ್ ೧೯೪೯ರಲ್ಲಿ ಬ್ರಿಟನ್ನಿನ ಡಾಲರುಗಳ ನಷ್ಟಾಂಶ ೧೧೫ ಮಿಲಿಯನ್ ಪೌಂಡುಗಳು. ಆದರೆ, ಸ್ಟರ್ಲಿಂಗ್ ಕ್ಷೇತ್ರದ ಡಾಲರುಗಳ ಪರಿಸ್ಥಿತಿ ೧೯೪೯ರಲ್ಲಿ ಮೊದಲನೆ ಮೂರು ತಿಂಗಳುಗಳಲ್ಲಿ ಅನುಕೂಲವಾಗಿದ್ದರೂ, ಅನಂತರ ಪ್ರತಿಕೂಲವಾಯಿತು. ಬ್ರಿಟನ್ನಿನ ಡಾಲರುಗಳ ಸಮಸ್ಯೆ ಪರಿಹಾರವಾಗಲಿಲ್ಲ. ಆಹಾರ, ಕಚ್ಚಾಮಾಲುಗಳು, ಪೆಟ್ರೋಲಿಯಂ ಮತ್ತು ಯಂತ್ರೋಪಕರಣಗಳ ಸರಬರಾಜಿನಲ್ಲಿ ಬ್ರಿಟನ್ನು ಡಾಲರು ಪ್ರದೇಶಕ್ಕೆ ಅಧೀನವಾಗಿರುವುದರಿಂದಲೂ, ಬ್ರಿಟನ್ನಿನ ತಯಾರಿಕಾ ವೆಚ್ಚದ ಆಧಿಕ್ಯದಿಂದಲೂ ಅಲ್ಲಿನ ಕೈಗಾರಿಕಾ ಸಾಧನಗಳು ಡಾಲರು ಪ್ರದೇಶದ ಯಂತ್ರೋಪಕರಣಗಳಿಗಿಂತ ಕೀಳಾದುವರಿಂದಲೂ, ಆ ದೇಶದ ಪೈಪೋಟಿ ಶಕ್ತಿ ಕುಗ್ಗಿತು; ಆದ್ದರಿಂದ ಬ್ರಿಟನ್ನಿನ ಡಾಲರುಗಳ ಅಭಾವ ನಿವಾರಣೆಯಾಗಲಿಲ್ಲ. ಬ್ರಿಟನ್ನಿನ ಸಾಲಸೋಲಗಳ ಸಿಲುಕನ್ನು ಪರಿ

ಹರಿಸುವುದರಲ್ಲೇ ಅಮೆರಿಕದ ಸಾಲದ ಹಣ ವಿನಿಯೋಗವಾಯಿತು.

ಬ್ರಿಟನ್ನು ಕೈಗಾರಿಕಾ ಯಂತ್ರವನ್ನು ಪುನರ್ರಚಿಸಲು ಇನ್ನೊಂದು ಅವಕಾಶ ೧೯೪೮ರಲ್ಲಿ ಅಮೆರಿಕದ ಮಾರ್ಷಲ್ ಯೋಜನೆಯಿಂದ ಒದಗಿತು.* ಈ ಯೋಜನೆಯಿಂದ ಕೋಟ್ಯಂತರ ಡಾಲರುಗಳ ಸೌಲಭ್ಯ ಬ್ರಿಟನ್ನಿಗೆ ದೊರಕಿದ್ದರೂ, ಈ ರಾಷ್ಟ್ರದ ಆರ್ಥಿಕ ಸ್ಥಿತಿ ಸರಿಹೋಗಿಲ್ಲ; ಆರ್ಥಿಕ ಜೀವನ ಚೇತರಿಸಿಕೊಂಡಿಲ್ಲ.

ಇದುವರೆವಿಗೂ ಬ್ರಿಟನ್ನು, ಅಮೆರಿಕದ ಮತ್ತು ಕೆನಡಾದ ಆರ್ಥಿಕ ಸಹಾಯದಿಂದ ಡಾಲರು ನಷ್ಟಾಂಶವನ್ನು ತಾತ್ಕಾಲಿಕವಾಗಿ ಪರಿಹಾರ ಮಾಡಲು ಪ್ರಯತ್ನಪಟ್ಟು ಯಶಸ್ವಿಯಾಗಿಲ್ಲ. ಬ್ರಿಟನ್ನಿನ ದೀರ್ಘಕಾಲದ ಡಾಲರು ಸಮಸ್ಯೆಯು ಐದು ವಿಧವಾದ ನಿರ್ದಿಷ್ಟ ಆರ್ಥಿಕ ನೀತಿಯಲ್ಲಡಕವಾಗಿದೆ ಎಂದು ೧೯೪೯ ನೆಯ ಇಸವಿಯ

---

* ಅಮೆರಿಕ ಆಡಳಿತ ಕಾರ್ಯದರ್ಶಿ ಜಾರ್ಜ್ ಮಾರ್ಷಲರು ಪಶ್ಚಿಮ ಯೂರೋಪಿನ ರಾಷ್ಟ್ರಗಳ ಆರ್ಥಿಕ ಪುನರ್ರಚನೆಗಾಗಿ ಒಂದು ಯೋಜನೆಯನ್ನು ೧೯೪೭ರಲ್ಲಿ ರೂಪಿಸಿದರು. ಈ ಯೋಜನೆಯು ಅವರು ಹಾರ್ವರ್ಡಿನಲ್ಲಿ ಮಾಡಿದ ಮಹತ್ವಪೂರಿತವಾದ ಭಾಷಣದಿಂದ ನಿರ್ಮಾಣವಾದುದು. ಏಪ್ರಿಲ್ ೩, ೧೯೪೮ರಲ್ಲಿ ಮಾರ್ಷಲ್‌ಯೋಜನೆ ಅಂಗೀಕಾರವಾಯಿತು. ಈ ಯೋಜನೆಗೆ ಒಪ್ಪಿದ ಪಶ್ಚಿಮ ಯೂರೋಪಿನ ೧೬ ರಾಷ್ಟ್ರಗಳಿಗೆ ಡಾಲರು ಸೌಲಭ್ಯವನ್ನು ಜೂನ್ ೩೦, ೧೯೫೨ರ ವರೆಗೆ ಒದಗಿಸಲಾಗುವುದು. ಈ ಯೋಜನೆಯಿಂದ ಸಹಾಯ ಪಡೆಯುತ್ತಿರುವ ಮುಖ್ಯ ರಾಷ್ಟ್ರಗಳು, ಬ್ರಿಟನ್ನು, ಫ್ರಾನ್ಸ್, ಇಟಲಿ, ನೆದರ್‌ಲೆಂಡ್ಸ್, ಸ್ವೀಡನ್, ಟರ್ಕಿ, ಸ್ವಿಟ್ಜರ್ಲೆಂಡ್, ಬೆಲ್ಜಿಯಂ, ಹಾಲೆಂಡ್. ಈಗ ೧೯ ಪಶ್ಚಿಮ ಯೂರೋಪಿನ ರಾಷ್ಟ್ರಗಳು ಈ ಯೋಜನೆಯ ಸಹಾಯವನ್ನು ಪಡೆಯುತ್ತಿವೆ. ಮೊದಲನೆಯ ವರ್ಷ ೧೨ ಅಥವಾ ೧೫ ತಿಂಗಳುಗಳಿಗೆ ೫,೩೦೫ ಮಿಲಿಯನ್ ಡಾಲರುಗಳನ್ನು ಇದಕ್ಕಾಗಿ ಮೀಸಲಾಗಿಡಲಾಯಿತು. ಈ ವರ್ಷ ಬ್ರಿಟನ್ನಿಗೆ ಈ ಯೋಜನೆಯ ಡಾಲರುಗಳ ಸಾಲದಲ್ಲಿ ೯೩೦ ಮಿಲಿಯನ್ ಡಾಲರುಗಳ ಸಹಾಯ ದೊರಕಿದೆ. ಈ ಮಾರ್ಷಲ್ ಯೋಜನೆಯ ಡಾಲರುಗಳ ವಿನಿಯೋಗದ ಮುಖ್ಯಾಧಿಕಾರಿ ಪಾಲ್ ಹಾಫ್‌ಮನ್.

ಆರ್ಥಿಕ ನೋಟದ ವರದಿಯಲ್ಲಿ ಹೇಳಲಾಗಿದೆ. ಇವು ಯಾವುವೆಂದರೆ, ಯುಕ್ತವಾದ ಉತ್ಪತ್ತಿಕ್ಷೇತ್ರಗಳಲ್ಲಿ ಮುಖ್ಯವಾಗಿ ವ್ಯವಸಾಯದ ಮತ್ತು ರಸಾಯನಿಕ ಪದಾರ್ಥಗಳ ಉತ್ಪತ್ತಿಯನ್ನು ಹೆಚ್ಚಿಸುವುದು ; ರಫ್ತುವ್ಯಾಪಾರದ ಹೆಚ್ಚುವರಿ; ಚಿನ್ನ ಮತ್ತು ಡಾಲರುಗಳನ್ನು ಕೊಡಬೇಕಾಗಿರುವ ಪ್ರದೇಶಗಳನ್ನು ಬಿಟ್ಟು, ಬೇರೆ ಪ್ರದೇಶಗಳಿಂದ ಸಾಮಾನುಗಳನ್ನು ಆಮದುಮಾಡಿಕೊಳ್ಳುವುದು; ಬ್ರಿಟನ್ನಿನ ಕಾಲೊನಿಗಳು ಡಾಲರುಗಳನ್ನು ಹೆಚ್ಚಾಗಿ ಸಂಪಾದಿಸಲು ಸಾಧಕವಾಗುವಂತೆ, ಅವುಗಳನ್ನು ಅಭಿವೃದ್ಧಿಗೊಳಿಸುವುದು ಮತ್ತು ಸ್ಟರ್ಲಿಂಗ್ ಪ್ರದೇಶದ ದೇಶಗಳು ಡಾಲರು ಪ್ರದೇಶದಿಂದ ಆಮದನ್ನು ಕಡಮೆಮಾಡಿ, ಆ ಪ್ರದೇಶಕ್ಕೆ ರಫ್ತುಪ್ರಮಾಣವನ್ನು ಹೆಚ್ಚಿಸಲು ಸಹಾಯವಾಗುವಂತೆ ಸೌಲಭ್ಯಗಳನ್ನು ಕಲ್ಪಿಸುವುದು. ಈ ಯೋಜನೆಗಳಿಂದ ಮತ್ತು ಆಮದು ಹತೋಟಿಗಳಿಂದ ಯಶಸ್ವಿಯಾಗಿ ಡಾಲರು ಸಮಸ್ಯೆಯನ್ನು ಪರಿಹರಿಸಬೇಕಾದರೆ, ಬ್ರಿಟನ್ನಿನ ಉತ್ಪತ್ತಿ ವೆಚ್ಚದ ರಚನೆಯಲ್ಲಿ ಬದಲಾವಣೆ ಅತ್ಯಾವಶ್ಯಕ. ಬೇರೆ ಮಾತಿನಲ್ಲಿ ಹೇಳುವುದಾದರೆ, ಪೌಂಡಿನ ಸಮಬೆಲೆ ಬಹು ಮೇಲ್ಮಟ್ಟದಲ್ಲಿತ್ತು. ಕಾರ್ಮಿಕ ವೇತನಗಳ ಇಳಿವರಿಯನ್ನು ಯೋಚಿಸುವ ಹಾಗಿರಲಿಲ್ಲ. ಅಮೆರಿಕ ಮತ್ತು ಕೆನಡಾದ ಸಹಾಯವಿಲ್ಲದೆ ಬ್ರಿಟನ್ನಿನಲ್ಲಿ ಹೆಚ್ಚು ಉತ್ಪತ್ತಿ ಸಾಧ್ಯವಿರಲಿಲ್ಲ. ಆದರೆ, ಈ ಸಹಾಯ ಮುಕ್ತಾಯವಾಗುವ ಪರಿಸ್ಥಿತಿ ಸನ್ನಿಹಿತವಾದ್ದರಿಂದ ಬೇರೆ ಆರ್ಥಿಕ ವಿಧಾನಗಳ ಆವಶ್ಯಕತೆ ಅನಿವಾರ್ಯವಾಯಿತು. ಉಳಿದ ಇನ್ನೊಂದೇ ಮಾರ್ಗ ಪೌಂಡಿನ ಮೌಲ್ಯದ ಇಳಿವರಿ. ಆದರೆ, ಈ ಮಾರ್ಗ ಬ್ರಿಟನ್ನಿನ ಗೌರವಕ್ಕೆ ಚ್ಯುತಿ ಎಂದು ಸರಕಾರದ ಅಭಿಪ್ರಾಯವಾಗಿತ್ತು. ಈ ಮನೋಭಾವನೆಯಲ್ಲೇ ಬ್ರಿಟನ್ನು ೧೯೩೫ ರಿಂದ ೧೯೩೧ ರ ವರೆಗೆ ಕಷ್ಟ ನಷ್ಟಗಳಿಗೆ ಸಿಕ್ಕಿದ್ದು, ಅನುಕೂಲ ಪರಿಸ್ಥಿತಿ ಬಂದಿದ್ದು ಸೆಪ್ಟೆಂಬರ್ ೧೯೩೧ ರ ಮೇಲೆ. ಪೌಂಡಿನ ಅಪ್ರತ್ಯಕ್ಷ ಇಳಿವರಿಯಿಂದ ಸೆಪ್ಟೆಂಬರ್ ೧೯೪೯ ರಲ್ಲಿಯ ಇದೇ ಸನ್ನಿವೇಶದಲ್ಲಿ, ಪ್ರತ್ಯಕ್ಷವಾದ ಮೌಲ್ಯದ ಇಳಿವರಿಯಿಂದ ಬ್ರಿಟನ್ನಿನ ವಿಷಮ ಆರ್ಥಿಕ ವಾತಾವರಣ ಸುಗಮವಾಗಬೇಕು.

ಸ್ಟರ್ಲಿಂಗ್ ಮೌಲ್ಯದ ಇಳಿವರಿಯ ಪ್ರಥಮ ಧ್ಯೇಯ ಡಾಲರುಗಳ ವಿಷಮ ಸಮಸ್ಯೆಯನ್ನು ಪರಿಹಾರ ಮಾಡುವುದು. ಬ್ರಿಟನ್ನಿನ ಆರ್ಥಿಕ ದುಃಸ್ಥಿತಿಯನ್ನು ನಿವಾರಿಸಲು ಸ್ಟರ್ಲಿಂಗ್ ಮೌಲ್ಯದ ಇಳಿವರಿ ಅನಿವಾರ್ಯವಾಯಿತು. ಸ್ಟರ್ಲಿಂಗ್ ಪ್ರದೇಶದ ಡಾಲರುಗಳ ಸಮಸ್ಯೆ, ಆ ಕ್ಷೇತ್ರದ ಮಹತ್ತರವಾದ ಆರ್ಥಿಕ ದುಃಸ್ಥಿತಿಯನ್ನು ವ್ಯಕ್ತಪಡಿಸುತ್ತದೆ. ಈ ದುಃಸ್ಥಿತಿಗೆ ಕೇವಲ ಈ ಪ್ರದೇಶದ ರಾಷ್ಟ್ರಗಳು ಮಾತ್ರ ಹೊಣೆಯಲ್ಲ. ಇದು ವಿಶ್ವದ ವಿವಿಧಮುಖಗಳ ಆರ್ಥಿಕ ಸಮಸ್ಯೆಯ ಒಂದು ಮುಖ ಮಾತ್ರ. ವಿಶ್ವವು ಎರಡು ವಿರುದ್ಧ ಆರ್ಥಿಕ ಕ್ಷೇತ್ರಗಳಾಗಿ ವಿಭಜನೆಯಾಗಿರುವವರೆಗೂ ಈ ಸಮಸ್ಯೆ ಪರಿಹಾರವಾಗಲಾರದು. ಡಾಲರು ಪ್ರದೇಶದ, ಸ್ಟರ್ಲಿಂಗ್ ಕ್ಷೇತ್ರದ ನಡುವೆ ಇರುವ ಅಂತರವನ್ನು ನಿವಾರಿಸುವ ಕೆಲಸ ಅಷ್ಟು ಅಸಾದಾಯಕವಾಗಿಲ್ಲ. ಆದ್ದರಿಂದ, ಸ್ಟರ್ಲಿಂಗ್ ಪ್ರದೇಶದ ಡಾಲರ್ ಸಮಸ್ಯೆ ಪರಿಹಾರವಾಗಿಲ್ಲ. ಸ್ಟರ್ಲಿಂಗ್ ಕ್ಷೇತ್ರದ ದೇಶಗಳ ಆರ್ಥಿಕ ದುಃಸ್ಥಿತಿಗೆ ವಿಶ್ವದ ಅತ್ಯಂತ ಬಲಯುತವಾದ ಅಮೆರಿಕದ ಆರ್ಥಿಕ ನೀತಿಯೂ ಕಾರಣವಾಗಿದೆ. ಪ್ರಪಂಚದಲ್ಲೆಲ್ಲಾ ಶ್ರೀಮಂತ ರಾಷ್ಟ್ರವಾದ ಅಮೆರಿಕದ ಆರ್ಥಿಕ ನೀತಿಯಲ್ಲಿ ಒಂದು ಕ್ರಮವಿದ್ದಿದ್ದರೆ, ಸ್ಟರ್ಲಿಂಗ್ ಕ್ಷೇತ್ರದ ಆರ್ಥಿಕ ಸ್ಥಿತಿಯಲ್ಲಿ ಪ್ರಳಯಕಾರಕವಾದ ವಿಷಮತೆ ಬರಲು ಕಾರಣವಿರಲಿಲ್ಲ. ಆದ್ದರಿಂದ, ಅಮೆರಿಕವನ್ನು ಪೂರ್ವಾಪರ ವಿರುದ್ಧವಾದ ಶ್ರೀಮಂತ ರಾಷ್ಟ್ರವೆಂದು (Inconsistent Creditor) ಕರೆಯಬೇಕಾಗಿದೆ. ಅಮೆರಿಕದ ಆರ್ಥಿಕನೀತಿಯು ಉದಾರತೆ ಘನವಾದುದು; ಅದರಲ್ಲಿ ವಿಲಕ್ಷಣವಾದ ನೀತಿಯೂ ಸೇರಿದೆ. ಈ ರಾಷ್ಟ್ರವು ಬೇರೆ ದೇಶಗಳಿಗೆ ಸ್ವೇಚ್ಛೆಯಾಗಿ ಅಮಿತಪ್ರಮಾಣದಲ್ಲಿ ಸಾಮಾನುಗಳನ್ನು ರಫ್ತು ಮಾಡುತ್ತದೆ; ಆದರೆ, ಬೇರೆ ದೇಶಗಳಿಂದ ಹೆಚ್ಚಾಗಿ ಸಾಮಾನುಗಳನ್ನು ಆಮದು ಮಾಡಿಕೊಳ್ಳುವುದಿಲ್ಲ; ಹೆಚ್ಚಾಗಿ ಬಂಡವಾಳ ಸೌಲಭ್ಯಗಳನ್ನು ಒದಗಿಸುವುದಿಲ್ಲ. ಇದೆಲ್ಲಕ್ಕಿಂತ ಮುಖ್ಯವಾಗಿ ಅತ್ಯಂತ ಹೆಚ್ಚಿನ ಪ್ರಮಾಣದ ಸುಂಕಗಳಿಂದ ಇತರ ರಾಷ್ಟ್ರಗಳ ಸ್ಪರ್ಧೆಯನ್ನು ತಡೆಗಟ್ಟುತ್ತದೆ.

ವಿಶ್ವದ ಆರ್ಥಿಕ ಯಾಜಮಾನ್ಯವನ್ನು ವಹಿಸಿಕೊಂಡಿರುವ ಅಂತರ ರಾಷ್ಟ್ರೀಯ ಆರ್ಥಿಕಸಂಸ್ಥೆಯೂ ಸಹಾ ಈ ಅಂಶವನ್ನು ತಿಳಿದು ಕೊಂಡಿದೆ. ಈ ವರ್ಷದ ವಾರ್ಷಿಕವರದಿಯಲ್ಲಿ ಶ್ರೀಮಂತ ಮತ್ತು ಸಾಲಗಾರರಾಷ್ಟ್ರಗಳ ಪರಸ್ಪರ ಕರ್ತವ್ಯಗಳನ್ನು ನಿರೂಪಿಸಿದೆ. ಹೆಚ್ಚು ಡಾಲರು ನಷ್ಟಾಂಶವಿರುವ ರಾಷ್ಟ್ರಗಳು ನಾಣ್ಯಗಳ ವಿನಿಮಯ ಬೆಲೆ ಗಳ ಬದಲಾವಣೆಯಿಂದ ಪರಿಸ್ಥಿತಿಯನ್ನು ಸುಧಾರಿಸಬೇಕು; ಇತರ ಕ್ರಮಗಳು ಅಂದರೆ ಹಣದ ಸಂಕೋಚನ ಅಥವಾ ಆಮದು ಸುಂಕ ಗಳು–ಅತಿ ಅಪಾಯಕರವೆಂದು, ಆರ್ಥಿಕಸಂಸ್ಥೆ ಹೇಳಿದೆ. ಈ ಮಾರ್ಗ ವನ್ನೇ ಬ್ರಿಟನ್ನು ಅನುಸರಿಸಿರುವುದು. ಶ್ರೀಮಂತರಾಷ್ಟ್ರಗಳು ರಾಷ್ಟ್ರಾ ದಾಯವನ್ನು ಹೆಚ್ಚಿಸಿ, ವ್ಯಾಪಾರದ ಅಡ್ಡಿ ಆತಂಕಗಳನ್ನು ತೆಗೆದುಹಾಕಿ ತಮ್ಮ ಬಂಡವಾಳವನ್ನು ಬಡರಾಷ್ಟ್ರಗಳ ಆರ್ಥಿಕ ಪುನರ್ರಚನೆಗಾಗಿ ಕೊಡಬೇಕೆಂದು, ಆರ್ಥಿಕಸಂಸ್ಥೆ ಸೂಚಿಸಿದೆ. ಪ್ರಪಂಚದ ಅತ್ಯಂತ ದೊಡ್ಡ ಬಂಡವಾಳ ರಾಷ್ಟ್ರವಾದ ಅಮೆರಿಕ ಈ ಸಲಹೆಯನ್ನು ಇನ್ನೂ ಕಾರ್ಯರೂಪಕ್ಕೆ ತರಲಿದೆ. ಅಮೆರಿಕದ ಪ್ರೆಸಿಡೆಂಟ್ ಟ್ರೂಮನ್ ಜನವರಿ ೨೦, ೧೯೪೯ರಲ್ಲಿ ಉದ್ಘಾಟನಾ ಸಮಾರಂಭದ ಭಾಷಣದಲ್ಲಿ ಅಮೆರಿಕದ ವಿದೇಶಾಂಗ ನೀತಿಯ ಅಂಗವಾಗಿ, ನಾಲ್ಕನೇ ಮುಖ್ಯ ಅಂಶವನ್ನು ಹಿಂದುಳಿದಿರುವ ದೇಶಗಳ ಅಭಿವೃದ್ಧಿಗಾಗಿ ನಿರೂಪಿಸಿ ದ್ದನ್ನು ಈ ಸಂದರ್ಭದಲ್ಲಿ ಗಮನಿಸಬೇಕಾಗಿದೆ. ಇದು ಪಾಯಿಂಟ್–೪ (The Point-iv) ಎಂದು ಪ್ರಸಿದ್ಧಿಯಾಗಿದೆ. ಆದರೆ, ಕೇವಲ ಭಾಷಣಗಳಿಂದ, ನೀತಿಪ್ರತಿಪಾದನೆಯಿಂದ ಏನೂ ಪ್ರಯೋಜನವಿಲ್ಲ. ಬ್ರಿಟನ್ನಿನ ಸ್ಟರ್ಲಿಂಗ್ ಮೌಲ್ಯದ ಇಳಿತಾಯದಿಂದ ಏನಾದರೂ ಪ್ರಯೋಜನವಾಗಬೇಕಾದರೆ, ಅಮೆರಿಕ ಕೂಡಲೇ ಸುಂಕದ ಪ್ರಮಾಣ ವನ್ನು ಕಡಮೆ ಮಾಡಿ, ಬೇರೆ ದೇಶಗಳಿಗೆ ಬಂಡವಾಳ ಸೌಲಭ್ಯಗಳು ಹೆಚ್ಚಾಗಿ ಸಿಗಲು ಸರಿಯಾದ ವಾತಾವರಣವನ್ನು ಕಲ್ಪಿಸಬೇಕು. ಸ್ಟರ್ಲಿಂಗ್ ಮೌಲ್ಯದ ಇಳಿವರಿಯಿಂದ ಬ್ರಿಟನ್ನಿನ ವ್ಯಾಪಾರಗಾರರು, ಕೈಗಾರಿಕೋದ್ಯಮಿಗಳು ಇತರ ದುರ್ಲಭ ನಾಣ್ಯಗಳ ಪ್ರದೇಶದಲ್ಲಿ ಯಶಸ್ವಿಯಾಗಿ ಪೈಪೋಟಿ ನಡೆಸಬಹುದು; ಆದರೆ, ಅಮೆರಿಕದ ಅಡ್ಡಿ

ತೀಯ ಶಕ್ತಿವಿಶೇಷಗಳನ್ನೂ, ಬ್ರಿಟನ್ನಿನ ಉತ್ಪತ್ತಿ ಶಕ್ತಿಯನ್ನೂ ಹೋಲಿಸಿದರೆ, ಈ ಅನುಕೂಲ ನೀರಿನ ಮೇಲಿನ ಗುಳ್ಳೆಯಾಗುತ್ತದೆ. ಇದಲ್ಲದೆ, ಅಮೆರಿಕದ ಸುಂಕದ ಪೌಳಿ ಸೇಕಡ ೩೦ರಿಂದ ೪೦ರ ವರೆಗಿರುವುದರಿಂದ, ಪೌಂಡಿನ ಮೌಲ್ಯದ ಇಳಿತಾಯದ ಪ್ರಮಾಣಕ್ಕಿಂತಲೂ ಹೆಚ್ಚಾಯಿತು. ಡಾಲರುಗಳ ಕ್ಷಾಮವನ್ನು ಪರಿಹರಿಸಲು ಬ್ರಿಟನ್ನಿನ ಸಾಮಾನುಗಳು ಅಮೆರಿಕಕ್ಕೆ ಹೆಚ್ಚಾಗಿ ರಫ್ತಾಗಬೇಕಾಗಿರುವುದರಿಂದ, ಅಮೆರಿಕದ ಆಮದು ಸುಂಕಗಳನ್ನು ಪೌಂಡಿನ ಮೌಲ್ಯದ ಇಳಿವರಿಗಿಂತ ಮೊದಲೇ ಕಡಮೆ ಮಾಡುವ ವ್ಯವಸ್ಥೆ ಬಹು ಉಪಯೋಗಕರವಾಗುತ್ತಿತ್ತು. ಅಮೆರಿಕದಲ್ಲಿ ಕಾಂಗ್ರೆಸ್ಸಿನ ಒಪ್ಪಿಗೆಯನ್ನು ಪಡೆದು ಸುಂಕಗಳನ್ನು ಕಡಮೆ ಮಾಡಬೇಕಾಗಿರುವುದರಿಂದ ಇದು ದೀರ್ಘಕಾಲದ ಸಮಸ್ಯೆಯೆಂದು ಹೇಳಲಾಗಿದೆ. ಇದನ್ನು ನಂಬಲು ಸಾಧ್ಯವಿಲ್ಲ. ಅಮೆರಿಕನರಿಗೆ ಬೇಕಾದರೆ, ಕಾಂಗ್ರೆಸ್ಸನ್ನು ಒಪ್ಪಿಸುವುದು ಏನೂ ಮಹತ್ತರವಾದ ಸಮಸ್ಯೆಯಲ್ಲ.

ಬ್ರಿಟನ್ನು ಪೌಂಡಿನ ಮೌಲ್ಯವನ್ನು ಇಳಿಸಿದ್ದು ಕೇವಲ ಕೊನೆಯ ಕ್ರಮ. ಬ್ರಿಟನ್ನು ಈಗ ಕೆಲವು ತಿಂಗಳ ಕೆಳಗೇ ಈ ಕ್ರಮವನ್ನು ಅನುಸರಿಸಬೇಕಾಗಿತ್ತೆಂದು ಲಂಡನ್ನಿನ ಎಕಾನಿಮಿಸ್ಟ್ (೨೪ನೇ ಸೆಪ್ಟೆಂಬರ್ ೧೯೪೯) ವಾರಪತ್ರಿಕೆಯು ಅಭಿಪ್ರಾಯಪಟ್ಟಿದೆ. ಕಾಲವಿಳಂಬದಿಂದ ಈ ರಾಷ್ಟ್ರಕ್ಕೆ ಇನ್ನೂ ಹೆಚ್ಚಿನ ನಷ್ಟವಾಗಿದೆ. ಅಮೆರಿಕ ಸಹ ಬ್ರಿಟನ್ನನ್ನು ಈ ವಿಷಯದಲ್ಲಿ ಒತ್ತಾಯಪಡಿಸುತ್ತಾ ಬಂದಿತು. ಆದರೆ ಬ್ರಿಟಿಷ್ ಸರಕಾರವು ಇದನ್ನು ತಡೆಯಲು ಸರ್ವಪ್ರಯತ್ನ ಮಾಡಿತು. ಈಗ ಕೆಲವು ತಿಂಗಳ ಹಿಂದೆ ಬ್ರಿಟನ್ನು ತನ್ನ ಆದಾಯಕ್ಕಿಂತ ಹೆಚ್ಚಾಗುತ್ತಿದ್ದ ಉತ್ಪತ್ತಿ ವೆಚ್ಚವನ್ನೂ ಮತ್ತು ಸಾಮಾಜಿಕ ಯೋಜನೆಗಳ ಅಪಾರ ವೆಚ್ಚವನ್ನೂ ಕಡಮೆ ಮಾಡಿದ್ದರೆ, ಪೌಂಡಿನ ಮೌಲ್ಯದ ಇಳಿತವನ್ನು ತಪ್ಪಿಸಲು ಸಾಧ್ಯವಾಗುತ್ತಿತ್ತು. ಬ್ರಿಟನ್ನಿನಲ್ಲಿ ಸಾಮಾನುಗಳ ಬೆಲೆ ನಾಗಾಲೋಟದಿಂದ ಏರಿ, ಅಲ್ಲಿಂದ ಅಮೆರಿಕಕ್ಕೆ ಯಾವ ಸಾಮಾನುಗಳನ್ನು ಕಳುಹಿಸಲೂ ಸಾಧ್ಯವಾಗದೆ, ಅಮೆರಿಕದಿಂದ ಆಮದಾಗುವ ಸಾಮಾನುಗಳು ಮಾತ್ರ ಹೆಚ್ಚಾಗುತ್ತಾ ಬಂದಿವೆ. ಬ್ರಿಟ

ನ್ನಿನ ರಫ್ತು ವ್ಯಾಪಾರದ ಕ್ಷೀಣತೆಯಿಂದ ಡಾಲರುಗಳ ಸಂಪಾದನೆ ಕಡಮೆಯಾದ ಸಮಯದಲ್ಲಿ, ಅಮೆರಿಕದಿಂದ ಬರುವ ಆಮದು ಪ್ರಮಾಣ ಹೆಚ್ಚಾಗಿ, ಡಾಲರುಗಳ ಆವಶ್ಯಕತೆ ಹೆಚ್ಚಿನ ಪ್ರಮಾಣದಲ್ಲಿ ಉಂಟಾಯಿತು. ಬ್ರಿಟನ್ನು ಮಿತಿಮೀರಿದ ಪ್ರಮಾಣದಲ್ಲಿ ಏರುತ್ತಿದ್ದ ಉತ್ಪತ್ತಿ ವೆಚ್ಚಗಳನ್ನು ಕಡಮೆಮಾಡಲು ಯಾವ ಪ್ರಯತ್ನವನ್ನೂ ಮಾಡದೇ, ಕೈಗಾರಿಕಾ ಮತ್ತು ಇತರ ಉದ್ಯಮಗಳನ್ನು ರಾಷ್ಟ್ರೀಕರಣ ಗೊಳಿಸಲು ಕೈಗೊಂಡ ಆರ್ಥಿಕ ಕ್ರಮಗಳಿಂದ, ಪೌಂಡ್ ಸ್ಟರ್ಲಿಂಗಿನ ಬೆಲೆಯ ದೃಢತೆಯಲ್ಲಿ ಅವಿಶ್ವಾಸವುಂಟಾಯಿತು. ಲೇಬರ್ ಸರಕಾರದ ಈ ರೀತಿಯಾದ ರಾಷ್ಟ್ರೀಕರಣ ನೀತಿಯಿಂದ ಪೌಂಡಿನ ಮೌಲ್ಯದ ಇಳಿ ವರಿ ಅನಿವಾರ್ಯವಾಗುತ್ತದೆಂದು ಅನೇಕರು ನಿರೀಕ್ಷಿಸಿದ್ದರು. ಈ ಸನ್ನಿ ವೇಶದಲ್ಲಿ ಪೌಂಡಿನ ಭವಿಷ್ಯದ ವಿಷಯದಲ್ಲಿ ಅನೇಕ ಊಹಾಪೋಹ ಗಳು ಸ್ವಾಭಾವಿಕವಾದವು. ಈ ರೀತಿಯಾಗಿ ಸ್ಟರ್ಲಿಂಗಿನಲ್ಲಿದ್ದ ವಿಶ್ವಾಸ ಕ್ಷೀಣವಾಗುತ್ತಾ ಬಂದು, ಯೂರೋಪಿನಲ್ಲಿ ಹಾಗೂ ಅಮೆರಿಕದಲ್ಲಿ ಸಾರ್ವಜನಿಕ ಅಭಿಪ್ರಾಯದ ಪ್ರಕಾರ ಪೌಂಡಿನ ಮೌಲ್ಯದ ಇಳಿವರಿ ಯನ್ನು ತಪ್ಪಿಸಲು ಸಾಧ್ಯವಿಲ್ಲವೆಂದು ತೋರಿತು. ಇದರಿಂದ ಹೊರ ದೇಶಗಳ ಬಂಡವಾಳ ಬ್ರಿಟನ್ನಿಗೆ ಬರುವುದು ಕಡಮೆಯಾಗಿದ್ದಲ್ಲದೆ, ಇತರ ದೇಶಗಳು ಬ್ರಿಟನ್ನಿನಿಂದ ಸಾಮಾನುಗಳನ್ನು ಆಮದು ಮಾಡಿ ಕೊಳ್ಳುವುದನ್ನು ನಿಲ್ಲಿಸಿದವು. ೧೯೪೯ನೇ ಇಸವಿಯ ಸೆಪ್ಟಂಬರಿನಲ್ಲಿ ಆದ ಅನುಭವಗಳು ಸನ್ನಿಹಿತವಾದವು. ಬ್ರಿಟನ್ನಿನ ರಫ್ತು ವ್ಯಾಪಾರ ದಿಂದ, ಆಮದು ವ್ಯಾಪಾರದ ಬೆಲೆಯನ್ನು ಕೊಡಲು ಸಾಧ್ಯವಾಗಲಿಲ್ಲ. ಬ್ರಿಟನ್ನಿನಲ್ಲಿ ತಯಾರಾದ ಸಾಮಾನುಗಳನ್ನು ಡಾಲರ್ ಪ್ರದೇಶದಲ್ಲಿ ಮಾರಲು ಅಸಾಧ್ಯವಾಯಿತು. ಇತರ ಸ್ಟರ್ಲಿಂಗ್ ರಾಷ್ಟ್ರಗಳಲ್ಲೂ ಸಹಾ ಅಮೆರಿಕದ ಸಾಮಾನುಗಳು ಅಗ್ಗವಾಗಿ ಸಿಗುವ ಸಮಯದಲ್ಲಿ ಹೆಚ್ಚಿನ ಬೆಲೆಯಲ್ಲಿ ಇಂಗ್ಲೆಂಡಿನ ಸಾಮಾನುಗಳನ್ನು ಕೊಳ್ಳುವ ಗಿರಾಕಿ ಇಳಿಮುಖವಾಯಿತು, ಕುಗ್ಗಿತು. ಆರ್ಥಿಕಕ್ಷೇತ್ರದಲ್ಲಿ ಬ್ರಿಟನ್ನು ಯಾವಾ ಗಲೂ ಸ್ವಪರಿಪೂರ್ಣತೆಯನ್ನು ಪಡೆದಿಲ್ಲ. ಆಹಾರ ಮತ್ತು ಕಚ್ಚಾ ಮಾಲುಗಳ ಆಮದಿನಿಂದ, ತಯಾರಾದ ಸಾಮಾನುಗಳ ರಫ್ತಿನಿಂದ

ಮಾತ್ರ ಬ್ರಿಟನ್ ತನ್ನ ಆರ್ಥಿಕಶಕ್ತಿಯನ್ನು ಉಳಿಸಿಕೊಳ್ಳಬಲ್ಲದು. ಉತ್ಪತ್ತಿಯನ್ನು ಮಹತ್ತರವಾಗಿ ಹೆಚ್ಚಿಸಿ, ಆರ್ಥಿಕಯಂತ್ರವನ್ನು ಸರಿಪಡಿಸಲು ಬ್ರಿಟನ್ನು ಸತತ ಪ್ರಯತ್ನ ಮಾಡಿದರೂ, ನಿರೀಕ್ಷಿಸಿದ ಪ್ರಮಾಣದಲ್ಲಿ ಸಾಮಾನುಗಳನ್ನು ರಫ್ತು ಮಾಡಲಾಗಲಿಲ್ಲ. ಇದರಿಂದ ವ್ಯಾಪಾರಕ್ಷೇತ್ರದಲ್ಲಿ ಆಮದು ರಫ್ತುಗಳಿಗೆ ಸಮತೂಕವಿಲ್ಲದೆ, ಬ್ರಿಟನ್ನಿಗೆ ಪ್ರತಿಕೂಲವಾಗಿ, ಇದ್ದ ಚಿನ್ನದ ನಿಧಿಯೆಲ್ಲಾ ಹೊರದೇಶಗಳಿಗೆ, ಮುಖ್ಯವಾಗಿ ಅಮೆರಿಕಕ್ಕೆ ಸಾಗಿತು.

ಈ ಪರಿಸ್ಥಿತಿಯಲ್ಲಿ ಬ್ರಿಟನ್ನು ಆರ್ಥಿಕ ನೀತಿಯನ್ನು ಸ್ವೇಚ್ಛಾ ಪ್ರವರ್ತನೆಗೆ ಬಿಡಲಿಲ್ಲ. ಹಾಗೆ ಮಾಡಿದ್ದರೆ, ಸ್ಟರ್ಲಿಂಗ್ ಕ್ಷೇತ್ರದ ಚಿನ್ನ ಮತ್ತು ಡಾಲರುಗಳ ನಿಧಿ ಪೂರ್ಣವಾಗಿ ವೆಚ್ಚವಾಗುತ್ತಿತ್ತು. ಆದ್ದರಿಂದ, ಸ್ಟರ್ಲಿಂಗಿನ ಮೌಲ್ಯವನ್ನು ನಿರ್ದಿಷ್ಟ ಪ್ರಮಾಣದಲ್ಲಿ ಇಳಿಸುವುದು ಅತ್ಯಗತ್ಯವಾಯಿತು. ಸರ್ ಸ್ಟ್ಯಾಫರ್ಡ್ ಕ್ರಿಪ್ಸರು ೧೮ನೇ ತಾರೀಖು ಸೆಪ್ಟೆಂಬರ್ ೧೯೪೯ರಲ್ಲಿ ಪ್ರಕಟಿಸಿದ ಪೌಂಡ್ ಮೌಲ್ಯದ ಇಳಿವರಿಯಿಂದ ಲೇಬರ್ ಸರಕಾರದ ಬಲಹೀನತೆಯು ಖಚಿತವಾಗಿ ವ್ಯಕ್ತವಾಗುತ್ತದೆ. ಬ್ರಿಟಿಷ್ ಸರಕಾರವು ಈ ನಿರ್ಧಾರದಿಂದ ಅನಿವಾರ್ಯವಾದ ಆರ್ಥಿಕ ನೀತಿಗೆ ತಲೆಬಾಗಿದೆ. ಜನಜೀವನದ ಮಟ್ಟವನ್ನು ಹೆಚ್ಚಿಸುವುದು ಲೇಬರ್ ಸರ್ಕಾರದ ಆದ್ಯ ನೀತಿಯಾಗಿದೆ. ಈ ನೀತಿಯಲ್ಲಿ ಸರಕಾರ ಯಶಸ್ವಿಯಾಗಿಲ್ಲವೆಂಬುದು ಸ್ಟರ್ಲಿಂಗ್ ಮೌಲ್ಯದ ಇಳಿತಾಯದಿಂದ ಸ್ಪಷ್ಟವಾಗಿದೆ. ಮೌಲ್ಯದ ಇಳಿವರಿಯಿಂದ ಜೀವನದ ಮಟ್ಟವು ಕಡಮೆಯಾಗುತ್ತದೆ ಅಥವಾ ಹೆಚ್ಚು ಶ್ರಮ ಆವಶ್ಯಕವಾಗುತ್ತದೆ. ಇದಲ್ಲದೆ ಕಾರ್ಮಿಕರ ವೇತನಗಳಲ್ಲಿ ಅಪ್ರತ್ಯಕ್ಷವಾದ ಇಳಿವರಿಯಾಗುತ್ತದೆ. ಬ್ರಿಟನ್ನಿನ ಕಾರ್ಮಿಕವರ್ಗದವರು ಕಡಮೆ ವೇತನಗಳನ್ನು ಒಪ್ಪಿಕೊಳ್ಳಲು ನಿರಾಕರಿಸಿದ್ದರು; ಹೆಚ್ಚು ಶ್ರಮದಿಂದ ಉತ್ಪತ್ತಿಯನ್ನು ಏರಿಸಲು ನಿರಾಕರಿಸಿದ್ದರು. ಪ್ರತ್ಯಕ್ಷವಾಗಿ ಒಪ್ಪಿಕೊಳ್ಳಲು ನಿರಾಕರಿಸಿದ್ದ ಕಾರ್ಮಿಕರು ಈಗ ಅಪ್ರತ್ಯಕ್ಷವಾಗಿ ಆರ್ಥಿಕ ನೀತಿಗೆ ಶರಣುಹೋಗಬೇಕಾಗಿದೆ. ಅವರ ಜೀವನದ ವೆಚ್ಚ ಹೆಚ್ಚಾಗುತ್ತದೆ. ಬ್ರೆಡ್ಡಿನ ಬೆಲೆ ಸೇ. 33⅓ರಷ್ಟು ಹೆಚ್ಚಾಗುತ್ತದೆಂಬುದನ್ನು

ಸ್ಟ್ಯಾಫರ್ಡ್ ಕ್ರಿಪ್ಸರು ಒಪ್ಪಿಕೊಂಡಿದ್ದಾರೆ. ಯಾವ ರಾಷ್ಟ್ರವೂ ಜನಗಳ ಸಹಕಾರವಿಲ್ಲದೆ ಪ್ರಗತಿ ಪಥದಲ್ಲಿ ಹೆಜ್ಜೆಯಿಡಲಾರದೆಂಬುದಕ್ಕೆ ಬ್ರಿಟನ್ನಿನ ಈ ಅನುಭವಗಳೇ ಸಾಕ್ಷಿ. ಅಂದರೆ, ಪ್ರಗತಿಯ ಮಾರ್ಗ ನೀಳವಾದುದು, ಸಂಕುಚಿತವಲ್ಲ. ಜನಜೀವನದ ಮಟ್ಟವನ್ನು ಹೆಚ್ಚಿಸಿ, ಸ್ವರ್ಗ ಸುಖವನ್ನು ಸಾಧಿಸುತ್ತೇವೆಂದು ಹೊರಟಿರುವ ಎಲ್ಲಾ ರಾಷ್ಟ್ರಗಳ ಸರಕಾರಗಳೂ ಈ ಅನುಭವಗಳನ್ನು ಜ್ಞಾಪಕದಲ್ಲಿಡಲಿ.

ಪೌಂಡಿನ ವಿನಿಮಯ ಬೆಲೆಯನ್ನು ಸೂಕ್ತವಾಗಿ ಮಾರ್ಪಾಟು ಮಾಡುವುದು ಸ್ವಾಭಾವಿಕವೆಂದು ಇತರ ದೇಶಗಳಿಗೆ ವ್ಯಕ್ತವಾಗಿತ್ತು. ಬ್ರಿಟನ್ನಿನಲ್ಲಿಯೂ ಸಹ ಶೀಘ್ರದಲ್ಲೇ ಈ ಕ್ರಮ ಕಾರ್ಯರೂಪಕ್ಕೆ ಬರುವುದೆಂದು ಅನೇಕರಿಗೆ ತಿಳಿದಿತ್ತು. ಆದರೆ, ಸಚಿವರು ಮತ್ತು ಅವರ ಸಲಹೆಗಾರರು ಮಾತ್ರ ಅಸ್ವಾಭಾವಿಕವಾದ, ವಿಲಕ್ಷಣವಾದ ರೀತಿಯಲ್ಲಿ ವರ್ತಿಸುತ್ತಾ ನಿಜವಾದ ವಿಷಯಗಳನ್ನು ಒಪ್ಪಿಕೊಳ್ಳಲು ಹಿಂಜರಿಯುತ್ತಿದ್ದರು. ಆಡಳಿತದ ಚಾಕಚಕ್ಯತೆಯಿಂದ ನೀರನ್ನು ಬೆಟ್ಟದ ಮೇಲಿನ ಮಾರ್ಗದಲ್ಲಿ ಪ್ರವಹಿಸಬಹುದೆಂಬುದಾಗಿ ಸಾಮ್ಯವಾದದ ರಾಜಕೀಯ ವಿಶಾರದರು ದೃಢವಾಗಿ ನಂಬಿದ್ದರು; ಟ್ರೆಜರಿಯ ಹಾಗೂ ಇಂಗ್ಲೆಂಡಿನ ಕೇಂದ್ರ ಬ್ಯಾಂಕಿನ ಅಧಿಕಾರವರ್ಗದವರು ವಿನಿಮಯ ಬೆಲೆಗಳ ಹತೋಟಿಯಲ್ಲಿ ಅಮಿತ ಆಕ್ಕರೆಯಿಂದ, ಆರ್ಥಿಕ ಪ್ರವಾಹಗಳನ್ನು ಎಷ್ಟು ಕಾಲವಾದರೂ ಒಂದು ಕಡೆ ಅಣೆಕಟ್ಟು ಹಾಕಿ ನಿಲ್ಲಿಸಬಹುದೆಂದು ಧೈರ್ಯವಾಗಿ ಯೋಚಿಸಿದ್ದರು. ಇವುಗಳ ಮಧ್ಯೆ, ಬ್ರಿಟನ್ನಿನ ಆರ್ಥಿಕ ಸ್ಥಿತಿಯು ಅಭದ್ರವಾದ ತಳಹದಿಯಮೇಲೆ ನಿರ್ಮಾಣವಾಯಿತು.

ಲೇಬರ್ ಸರಕಾರವು ಯಾರನ್ನೂ ದೂರುವಹಾಗಿಲ್ಲ. ಬ್ರಿಟನ್ನಿನ ಸರಕಾರದ, ಟ್ರೆಜರಿಯ, ಕೇಂದ್ರ ಬ್ಯಾಂಕಿನ ನೀತಿಯನ್ನು ಸೋಲಿಸಿದ್ದು ತಡೆಯಲಸಾಧ್ಯವಾದ, ಅಪ್ರತಿಮವಾದ ಆರ್ಥಿಕಕ್ಷೇತ್ರದ ಸ್ವಚ್ಛಂದ ಶಕ್ತಿ ವಿಶೇಷಗಳು. ಇದರಿಂದ, ಆರ್ಥಿಕ ಸಚಿವರು ತಮ್ಮ ಹಿಂದಿನ ಅನೇಕ ವಾದ ವಿವಾದಗಳನ್ನು, ಹೇಳಿಕೆಗಳನ್ನು ನುಂಗಿಕೊಳ್ಳ ಬೇಕಾಗಿದೆ, ಜೀರ್ಣಿಸಿಕೊಳ್ಳುವುದೂ ಆವಶ್ಯಕ.

ವಿಶ್ವದ ಆರ್ಥಿಕ ಹಾಗೂ ರಾಜಕೀಯ ಆಗುಹೋಗುಗಳಲ್ಲಿ ಭಾನುವಾರ ಬಹು ಮಹತ್ವಪೂರಿತವಾದ ದಿನವಾಗಿದೆ. ಅದರಲ್ಲೂ ಸೆಪ್ಟೆಂಬರ್ ತಿಂಗಳ ಭಾನುವಾರ ಅಂತರರಾಷ್ಟ್ರೀಯ ಆರ್ಥಿಕ ಮತ್ತು ರಾಜಕೀಯ ವಿದ್ಯಮಾನಗಳಲ್ಲಿ ಅರ್ಥಗರ್ಭಿತವಾಗಿರುವುದಲ್ಲದೆ, ಅಪಾಯಕರವಾದುದೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಸೆಪ್ಟೆಂಬರ್ ೨೦ನೇ ತಾರೀಖು ಭಾನುವಾರ ೧೯೩೧ರಲ್ಲಿ ಬ್ರಿಟನ್ನು ಹೊನ್ನಿನ ಹಣ ಪದ್ಧತಿಯನ್ನು ತ್ಯಜಿಸಲು ನಿರ್ಧರಿಸಿ, ಸಂಪೂರ್ಣವಾದ ಕಾಗದದ ಹಣ ಪದ್ಧತಿಯನ್ನು ಅಂಗೀಕರಿಸಿತು. ಅನಂತರ ಸೆಪ್ಟೆಂಬರ್ ೩ನೇ ತಾರೀಖು ಭಾನುವಾರ ೧೯೩೯ರಲ್ಲಿ ಎರಡನೆಯ ಮಹಾಯುದ್ಧ ಪ್ರಾರಂಭವಾಯಿತು. ಈ ಯುದ್ಧದಿಂದಾದ ಅತಿ ಭಯಂಕರ ಪ್ರಳಯವನ್ನೂ, ಸಾವುನೋವುಗಳನ್ನೂ, ಕಷ್ಟನಷ್ಟಗಳನ್ನೂ ಮಾನವವರ್ಗದ ಅವನತಿ, ಅನಂತವಾದ ಎಡರುತೊಡರುಗಳನ್ನೂ, ವಿಷಮ ಸಮಸ್ಯೆಗಳನ್ನೂ, ವರ್ಣಿಸುವುದು ಅನಾವಶ್ಯಕ. ಈ ಯುದ್ಧದಿಂದ, ಇಡೀ ವಿಶ್ವದ ಆರ್ಥಿಕ ರಚನೆಯಲ್ಲಿ ವರ್ಣಿಸಲಸಾಧ್ಯವಾದ ಕ್ರಾಂತಿದಾಯಕ ಮಾರ್ಪಾಡುಗಳಾಗಿವೆ. ಪುನಃ ಸೆಪ್ಟೆಂಬರ್ ೧೮ನೆಯ ತಾರೀಖು ಭಾನುವಾರ ೧೯೪೯ರಲ್ಲಿ ಬ್ರಿಟನ್ನಿನ ಆರ್ಥಿಕ ಸಚಿವರು ಪೌಂಡ್ ಸ್ಟರ್ಲಿಂಗಿನ ಮೌಲ್ಯದ ಇಳಿಪರಿಯನ್ನು ಪ್ರಕಟಿಸಿದರು. ಈ ರೀತಿಯಾಗಿ ಸೆಪ್ಟೆಂಬರ್ ತಿಂಗಳ ಭಾನುವಾರ ವಿಶ್ವದ ಚರಿತ್ರೆಯಲ್ಲಿ ಅಮರವಾಗಿ ಉಳಿಯಬಲ್ಲ ಮಹತ್ವಪೂರಿತವಾದ ದಿನ.

ಸರ್ ಸ್ಟಾಫರ್ಡ್ ಕ್ರಿಪ್ಸರ ರೇಡಿಯೋ ಭಾಷಣದ ಕೆಲವು ವಿವರಗಳನ್ನು ಉಲ್ಲೇಖಿಸುವುದು ಉಚಿತವಾಗಿದೆ.

ಬ್ರಿಟನ್ನು ಮತ್ತು ಕಾಮನ್‌ವೆಲ್ತಿನ, ಅಂದರೆ, ಇಂಡಿಯಾ, ಆಸ್ಟ್ರೇಲಿಯ—ಇವೇ ಮೊದಲಾದ ಇತರ ಸ್ಟರ್ಲಿಂಗ್ ರಾಷ್ಟ್ರಗಳು ಡಾಲರು ಪ್ರದೇಶದೊಂದಿಗೆ ವ್ಯಾಪಾರವನ್ನು ನಡೆಸಿ, ಸಂಪಾದಿಸಿದ ಡಾಲರುಗಳನ್ನು ಒಂದು ಕಡೆ ಶೇಖರಿಸುತ್ತಿದ್ದೇವೆ. ಸ್ಟರ್ಲಿಂಗ್ ಕ್ಷೇತ್ರದ ಮುಖ್ಯ ರಾಷ್ಟ್ರವಾದ ಬ್ರಿಟನ್ನಿಗೆ ಈ ಸಮಸ್ಯೆ ಅತ್ಯಂತ ಮುಖ್ಯವಾದುದಾದರೂ, ಇದು ಸ್ಲರ್ಲಿಂಗ್ ಪ್ರದೇಶದ ಎಲ್ಲಾ ರಾಷ್ಟ್ರಗಳಿಗೂ,

ಡಾಲರು ಪ್ರದೇಶಕ್ಕೆ ಸೇರದ ಇತರ ರಾಷ್ಟ್ರಗಳಿಗೂ ಮಹತ್ವಪೂರಿತ ವಾದ ಸಮಸ್ಯೆಯೆಂದೇ ಹೇಳಬೇಕು. ಡಾಲರು ಪ್ರದೇಶದ ರಾಷ್ಟ್ರ ಗಳು ಇತರ ದೇಶಗಳೊಂದಿಗೆ ಸಹಕರಿಸಿ, ಅವು ಹೆಚ್ಚಾಗಿ ಡಾಲರು ಗಳನ್ನು ಸಂಪಾದಿಸಲು ಸೌಲಭ್ಯಗಳನ್ನು ಕಲ್ಪಿಸಬೇಕು. ಕಾಮನ್ ವೆಲ್ತ್ ರಾಷ್ಟ್ರಗಳ ಮತ್ತು ಪಶ್ಚಿಮ ಯೂರೋಪಿನ ರಾಷ್ಟ್ರಗಳ ಸಹಾಯ ಸಹಕಾರ, ಸೌಹಾರ್ದಗಳಿಂದ ಸ್ಟರ್ಲಿಂಗಿನ ಮೌಲ್ಯದ ಇಳಿತವನ್ನು ಕಾರ್ಯರೂಪಕ್ಕೆ ತರುವ ಮಹತ್ತರ ನಿರ್ಧಾರವನ್ನು ಮಾಡಲಾಯಿತು. ಮುಖ್ಯವಾಗಿ, ನಾವು ಡಾಲರುಗಳ ಸಂಪಾದನೆಯ ಶಕ್ತಿಯನ್ನು ಹೆಚ್ಚಿಸ ಬೇಕು, ಡಾಲರುಗಳ ಹೆಚ್ಚುವರಿ ಸಂಪಾದನೆಯೇ ನಮ್ಮ ಕಷ್ಟಗಳನ್ನು ಪರಿಹಾರ ಮಾಡಬಲ್ಲ ಶಕ್ತಿ. ನಾವು ಹೆಚ್ಚು ಡಾಲರುಗಳನ್ನು ಸಂಪಾ ದಿಸಬೇಕು; ಇಲ್ಲವಾದಲ್ಲಿ ಡಾಲರುಗಳ ವೆಚ್ಚವನ್ನು ಕಡಮೆ ಮಾಡ ಬೇಕು. ಡಾಲರುಗಳ ಸಂಪಾದನೆಯನ್ನು ಹೆಚ್ಚುಮಾಡದೆ, ಕೇವಲ ವೆಚ್ಚವನ್ನು ಕಡಮೆ ಮಾಡುವುದು ನಿರಾಶೆಯ ನೀತಿ; ಇದು ಸಾಧು ವಾದ ಮಾರ್ಗವಲ್ಲ. ಈ ನೀತಿಯಿಂದ ಆಹಾರ ಮತ್ತು ಕಚ್ಚಾ ಮಾಲುಗಳ ಆಮದು ಕಡಮೆಯಾಗಿ, ನಮ್ಮ ಜೀವನದ ಮಟ್ಟ ಇಳಿಯು ತ್ತದೆ. ಮಾರ್ಷಲ್ ಯೋಜನೆ ೧೯೫೨ಕ್ಕೆ ಮುಕ್ತಾಯವಾಗುವುದ ರಿಂದ, ಈ ಕಾಲಕ್ಕೆ ಬ್ರಿಟನ್ ಡಾಲರುಗಳ ಸರಬರಾಜಿನಲ್ಲಿ ಸ್ವಪರಿ ಪೂರ್ಣತೆಯನ್ನು ಹೊಂದುವುದು ಅತ್ಯಾವಶ್ಯಕ. ಇಲ್ಲದಿದ್ದರೆ, ನಿರು ದ್ಯೋಗ ತಾನೇತಾನಾಗಿ ತಾಂಡವವಾಡುತ್ತಾ ಜೀವನದ ಮಟ್ಟವು ಬಹುಮಟ್ಟಿಗೆ ಕಡಮೆಯಾಗುತ್ತದೆ.

ಎರಡು ಮಹಾಯುದ್ಧಗಳ ನಡುವಿನ ಕಾಲದಲ್ಲಿ ನಿರುದ್ಯೋಗದ ಪ್ರಳಯದಿಂದ ಅನೇಕರು ನಾಶವಾದ ಅನುಭವವನ್ನು ಅರಿತು ಯುದ್ಧಾ ನಂತರದ ನಿರುದ್ಯೋಗವನ್ನು ತಡೆಗಟ್ಟಲು ಸತತ ಪ್ರಯತ್ನ ಮಾಡಿ ದ್ದೇವೆ. ನಾಗಾಲೋಟದ ನಿರುದ್ಯೋಗವನ್ನು ನಿವಾರಿಸಲು ಮತ್ತು ಅದರಿಂದ ಉತ್ಪನ್ನವಾಗುವ ಕಷ್ಟನಷ್ಟಗಳನ್ನು ನಿವಾರಿಸಲು ಅನಂತ ಪ್ರಯತ್ನ ಮಾಡಿದ್ದೇವೆ. ಸ್ಟರ್ಲಿಂಗ್ ರಾಷ್ಟ್ರಗಳು ಡಾಲರುಗಳನ್ನು ಸಂಪಾದಿಸಲು ಅವಕಾಶವಾಗುವಂತೆ ಉತ್ತಮ ಅಂತರರಾಷ್ಟ್ರೀಯ

ವಾತಾವರಣ ರೂಪುಗೊಳ್ಳಬೇಕು. ನಾಣ್ಯಗಳ ವಿನಿಮಯ ಬೆಲೆಯಲ್ಲಿ ಆಗಿರುವ ಇಳಿವರಿ ಈ ಉತ್ತಮ ವಾತಾವರಣದ ನಿರ್ಮಾಣಕ್ಕೆ ಅತ್ಯುತ್ತಮವಾದ ಮಾರ್ಗ. ಹೆಚ್ಚು ಡಾಲರುಗಳನ್ನು ಸಂಪಾದಿಸಲು ನಮ್ಮ ಕೈಗಾರಿಕೆಗಳಿಗೆ ಅನೇಕ ವಿಧದಲ್ಲಿ ಪ್ರೋತ್ಸಾಹವನ್ನು ಕೊಟ್ಟಿದ್ದೇವೆ.

ಡಾಲರುಗಳ ಸಂಪಾದನೆಗೂ ಡಾಲರುಗಳ ವೆಚ್ಚಕ್ಕೂ ಇರುವ ಅಂತರವನ್ನು ಮುಚ್ಚಲು ಪ್ರಯತ್ನಮಾಡಿ ಯಶಸ್ವಿಗಳಾಗಿದ್ದರೂ, ಇತ್ತೀಚೆಗೆ ವಾತಾವರಣ ಬದಲಾಯಿಸಿದೆ. ಸ್ಟರ್ಲಿಂಗ್ ಪ್ರದೇಶದಲ್ಲಿ ತಯಾರಾದ ಸಾಮಾನುಗಳ ಬೆಲೆಗಳು ಡಾಲರು ಪ್ರದೇಶದಲ್ಲಿ ಅತಿ ಹೆಚ್ಚಾಗಿ ಕಾಣುವುದರಿಂದ, ಅಲ್ಲಿ ನಮ್ಮ ಸಾಮಾನುಗಳಿಗೆ ಗಿರಾಕಿ ಕಡಮೆಯಾಗಿ, ವ್ಯಾಪಾರಗಾರರಿಗೆ ಮತ್ತು ಕೈಗಾರಿಕೋದ್ಯಮಿಗಳಿಗೆ ಸರಿಯಾದ ಉತ್ತೇಜನವಿಲ್ಲ. ಕಳೆದ ಎರಡು ವರ್ಷಗಳಿಂದ ಅತಿ ವೇಗವಾಗಿ ಉತ್ಪತ್ತಿ ಹೆಚ್ಚುಮಾಡಿ ಸಾಮಾನುಗಳು ತಯಾರಾಗುವ ವೆಚ್ಚವನ್ನು ಹಾಗೂ ಮಾರುವ ಬೆಲೆಯನ್ನು ಕಡಮೆಮಾಡಲು ಸರ್ವ ಪ್ರಯತ್ನ ಮಾಡಿದೆ. ಆದರೆ, ಫಲಿತಾಂಶಗಳು ಆಶಾದಾಯಕವಾಗಿಲ್ಲ. ಕಳೆದ ಕೆಲವು ತಿಂಗಳುಗಳ ಅನುಭವದ ಬಿಸಿಯಲ್ಲಿ, ಸ್ಟರ್ಲಿಂಗ್ ಮೌಲ್ಯದ ಇಳಿತಾಯವೊಂದೇ ಉತ್ತಮ ಮಾರ್ಗವೆಂದು ವೇದ್ಯವಾಗಿದೆ. ಇಲ್ಲವಾದಲ್ಲಿ, ನಮ್ಮ ಜೀವನದ ಮಟ್ಟವನ್ನು, ಉತ್ಪತ್ತಿಯನ್ನು ಉಳಿಸಿಕೊಳ್ಳಲು ಸಾಕಾದಷ್ಟು ಡಾಲರುಗಳ ಸಂಪಾದನೆಯಾಗುವುದಿಲ್ಲ.

ಎಲ್ಲರ ಅದ್ವಿತೀಯವಾದ ಶಕ್ತಿ ವಿಶೇಷಗಳನ್ನು, ಸುಪ್ತ ಉತ್ಪತ್ತಿ ಶಕ್ತಿಯನ್ನು ಪೂರ್ಣವಾಗಿ ಉಪಯೋಗಿಸಿ, ಸಂಪತ್ತಿನ ಮಧ್ಯದಲ್ಲಿ ಬಡತನ ತಾಂಡವವಾಡುವುದನ್ನು ನಿಲ್ಲಿಸುವುದೇ ನನ್ನ ಪ್ರಥಮ ಧ್ಯೇಯ. ಹೆಚ್ಚು ಉತ್ಪತ್ತಿಯನ್ನು ಸಾಧಿಸಿ, ಪೌಂಡಿನ ಇಳಿವರಿಯನ್ನು ತಪ್ಪಿಸಲು ಮಾಡಿದ ಪ್ರಯತ್ನಗಳು ಫಲಿಸಲಿಲ್ಲ.

ಪೌಂಡಿನ ಒಳ ಬೆಲೆಯಲ್ಲಿ ಯಾವ ಏರಿಳಿತಗಳೂ ಅಗುವುದಿಲ್ಲವೆಂದು ಕ್ರಿಪ್ಸರು ಭರವಸೆ ಕೊಟ್ಟಿದ್ದಾರೆ. ಡಾಲರುಗಳಿಗಾಗಿ ಹೆಚ್ಚು ಪೌಂಡುಗಳನ್ನು ಕೊಡಬೇಕಾದರೂ, ಜೀವನದ ವೆಚ್ಚದಲ್ಲಿ ಹೆಚ್ಚಾ

ಗುವ ಅಂಶ ಬ್ರೆಡ್ಡಿನ ಬೆಲೆ ಮಾತ್ರ. ಗೋಧಿ ಮತ್ತು ಗೋಧಿ ಹಿಟ್ಟನ್ನು ಉತ್ತರ ಅಮೆರಿಕದಿಂದ ಆಮದುಮಾಡಿಕೊಳ್ಳಬೇಕಾಗಿರುವುದರಿಂದ ಬ್ರೆಡ್ಡಿನ ಬೆಲೆ ೪|| ಪೆನ್ನಿಗಳಿಂದ ೬ ಪೆನ್ನುಗಳಿಗೆ ಏರುತ್ತದೆ. ಜೀವನದ ವೆಚ್ಚವು ಈ ಅಂಶದಿಂದ ಒಂದು ಪಾಯಿಂಟಿನಷ್ಟು ಹೆಚ್ಚಾಗುತ್ತದೆ. ಇತರ ಸಾಮಾನುಗಳ ಬೆಲೆ ಹೆಚ್ಚಾಗುವುದಿಲ್ಲ. ಡಾಲರು ಪ್ರದೇಶದಿಂದ ಆಮದಾಗುವ ಕೆಲವು ಸಾಮಾನುಗಳ ಬೆಲೆ ಹೆಚ್ಚಾಗಬಹುದು. ಆದರೆ, ಕೂಡಲೇ ಸಾಮಾನುಗಳ ಬೆಲೆ ಹೆಚ್ಚಾಗುವ ಸಂಭವವಿಲ್ಲ. ವ್ಯಾಪಾರಗಾರರು ಅತಿ ಲಾಭದ ಆಶೆಯಿಂದ ವರ್ತಿಸಿದರೆ ಅವರು ಶಿಕ್ಷಾರ್ಹರು. ಡಾಲರು ಪ್ರದೇಶದೊಂದಿಗೆ ವ್ಯಾಪಾರವನ್ನು ಸಮದೂಗಿಸಲು ಜೀವನದ ವೆಚ್ಚದಲ್ಲಿ ಆಗುವ ಹೆಚ್ಚುವರಿ ರಾಷ್ಟ್ರದ ಸಂಪತ್ತಿನ ದೃಷ್ಟಿಯಿಂದ ಏನೂ ಹೆಚ್ಚಲ್ಲ.

ಕೈಗಾರಿಕೋದ್ಯಮಿಗಳು ಮತ್ತು ವ್ಯಾಪಾರಗಾರರು ಹೆಚ್ಚು ಆಸಕ್ತಿಯಿಂದ ಉತ್ಪತ್ತಿ ಹೆಚ್ಚುಮಾಡಿ ಡಾಲರು ಪ್ರದೇಶಕ್ಕೆ ಹೆಚ್ಚು ಸಾಮಾನುಗಳನ್ನು ರಫ್ತುಮಾಡಬೇಕೆಂದು ಕ್ರಿಪ್ಸರು ಮನವಿಮಾಡಿಕೊಂಡಿದ್ದಾರೆ. ಸರಿಯಾದ ಕ್ರಮದಲ್ಲಿ ಸಾಮಾನುಗಳನ್ನು ಮಾರಾಟಮಾಡಿದರೆ ನಮ್ಮ ಡಾಲರುಗಳ ಸಮಸ್ಯೆ ಪರಿಹಾರವಾಗುವುದರಲ್ಲಿ ಏನೂ ಸಂದೇಹವಿಲ್ಲ. ಆದರೆ, ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ಸಾಮಾನುಗಳು ರಫ್ತಾದರೆ, ನಮ್ಮ ಬೆಲೆಗಳು ಹೆಚ್ಚಿ ಹಣದುಬ್ಬರವಾಗಬಹುದು. ಇದರಿಂದ ನಮ್ಮ ಜೀವನದ ಮಟ್ಟಕ್ಕೂ, ಡಾಲರುಗಳ ಸಂಪಾದನೆಗೂ ಮಹತ್ತರವಾದ ತೊಂದರೆಯಾಗುತ್ತದೆ. ಇದನ್ನು ನಾವು ತಡೆಗಟ್ಟಲೇ ಬೇಕು. ನಮ್ಮ ಶಕ್ತಿಮೀರಿ ರಫ್ತುಮಾಡುವುದು ನಮಗೇ ಅಪಾಯಕರ. ನಮ್ಮ ಶಕ್ತಿಗನುಸಾರವಾಗಿ, ಸಾಮಾಜಿಕ ಉದ್ಯಮಗಳನ್ನು ಮತ್ತು ನಮ್ಮ ಆದಾಯವನ್ನು ಹೆಚ್ಚುಮಾಡಲು, ಡಾಲರು ಪ್ರದೇಶಕ್ಕೆ ಹೆಚ್ಚು ಸಾಮಾನುಗಳನ್ನು ರಫ್ತುಮಾಡಬೇಕು.

ಅಮೆರಿಕದ ಮತ್ತು ಕೆನಡಾದ ವಿಶೇಷ ಸಹಾಯ ಕಡಮೆಯಾಗುತ್ತಿರುವುದರಿಂದ, ನಾವು ಅತಿ ಶೀಘ್ರವಾಗಿ ಸ್ವಯಂಪೂರ್ಣತೆಯನ್ನು ಸಾಧಿಸಬೇಕು. ಸಾರ್ವಜನಿಕ ವೆಚ್ಚವನ್ನು ಕಡಮೆಮಾಡಿ,

ಸಾರ್ವಜನಿಕ ಉದ್ಯಮಗಳನ್ನು ನಿಧಾನಗೊಳಿಸಿ, ಸರಕಾರದ ವೆಚ್ಚ ದಲ್ಲಿ ಮಿತವ್ಯಯವನ್ನು ಸಾಧಿಸಬೇಕು. ಸ್ಟರ್ಲಿಂಗ್ ಮೌಲ್ಯದ ಇಳಿವರಿ ಹೆಚ್ಚೆಂದು ತೋರಿದರೂ ಡಾಲರ್ ಸಮಸ್ಯೆಯನ್ನು ಪರಿಹರಿಸಲು ಇದೊಂದೇ ಮಾರ್ಗ. ಇದರೊಂದಿಗೆ ವಾಷಿಂಗ್‌ಟನ್ ಸಮ್ಮೇಳನದಿಂದ ರೂಪುಗೊಂಡ ಹತ್ತು—ಅಂಶಗಳ ಯೋಜನೆಯನ್ನು ಸೇರಿಸಲಾಗುವುದು. ನಮ್ಮ ಅಮೆರಿಕದ ಮತ್ತು ಕೆನಡಾದ ಸ್ನೇಹಿತರು ನಮಗೆ ಸಹಾಯ ಮಾಡಲು ಒಪ್ಪಿಕೊಂಡಿದ್ದಾರೆ. ಅಂತರರಾಷ್ಟ್ರೀಯ ವ್ಯಾಪಾರದಲ್ಲಿ ಮುಖ್ಯವಾದ ಸ್ಟರ್ಲಿಂಗನ್ನು ಬಲ ಪಡಿಸಿ ಅದರ ಬೆಲೆಯನ್ನು ಸ್ಥಿರಗೊಳಿಸಲು ಅವರು ನಮ್ಮೊಂದಿಗೆ ಸಹಕರಿಸಲು ಒಪ್ಪಿದ್ದಾರೆ. ಸ್ಟರ್ಲಿಂಗ್ ಪ್ರದೇಶಕ್ಕೂ, ಡಾಲರು ಪ್ರದೇಶಕ್ಕೂ ವ್ಯಾಪಾರವನ್ನು ಸುಗಮವಾಗಿ ಮಾಡಿ, ಸ್ಟರ್ಲಿಂಗ್ ಪ್ರದೇಶವು ಹೆಚ್ಚು ಡಾಲರುಗಳನ್ನು ಸಂಪಾದಿಸಲು ಅವರು ಸಹಾಯಕರಾಗಲು ಮನಸ್ಸುಮಾಡಿದ್ದಾರೆ ನಮಗೂ ಮತ್ತು ಇತರ ಸ್ವಾತಂತ್ರ್ಯ ಪ್ರಜಾ ಪ್ರಭುತ್ವ ರಾಷ್ಟ್ರಗಳಿಗೂ ಇದು ಮಹೋನ್ನತವಾದ ಪ್ರೋತ್ಸಾಹವೆಂದೇ ಹೇಳಬೇಕು. ಯುದ್ಧಾನಂತರದ ಆರ್ಥಿಕ ಕಷ್ಟನಷ್ಟಗಳಿಂದ ಸುರಕ್ಷಿತ ವಾಗಿ ಪಾರಾಗಲು ದೃಢವಾದ ಆಶೆಯನ್ನು, ಈಗ ನಡೆದಿರುವ ವಿದ್ಯಮಾನಗಳು ಪೋಷಿಸಿವೆ.

ಈ ರೀತಿಯಾಗಿ ಕ್ರಿಪ್ಸರು ಸ್ಟರ್ಲಿಂಗ್ ಮೌಲ್ಯದ ಇಳಿತಾಯವನ್ನು ವಿವರಿಸಿದ್ದಾರೆ. ಮೊದಲನೆಯ ಯುದ್ಧದ ಪ್ರಾರಂಭದಿಂದ ಬ್ರಿಟನ್ನಿನ ಆರ್ಥಿಕ ಚರಿತ್ರೆಯನ್ನು ಪರಿಶೀಲಿಸಿದವರೆಲ್ಲರಿಗೂ, ಪೌಂಡಿನ ಮೌಲ್ಯದ ಇಳಿತ ಅನಿವಾರ್ಯವಾಯಿತೆಂದೂ, ಬ್ರಿಟಿಷ್ ಸರಕಾರದ ಅಥವಾ ಟ್ರೆಜರಿಯ ಇಷ್ಟಾನುಸಾರ ನಡೆದಿಲ್ಲವೆಂದೂ ವ್ಯಕ್ತವಾಗುತ್ತದೆ. ಬ್ರಿಟನ್ನು ಪ್ರಪಂಚದ ವ್ಯಾಪಾರ ಕೇಂದ್ರದ ಮತ್ತು ವ್ಯಾಪಾರದ ಯಾಜಮಾನ್ಯದ ಪರಮೋನ್ನತ ಸ್ಥಾನಮಾನಗಳನ್ನು ಕಳೆದುಕೊಂಡು, ಶ್ರೀಮಂತರಾಷ್ಟ್ರದ ಘನತೆಯಿಂದ, ಸಾಲಗಾರ ರಾಷ್ಟ್ರದ ಆರ್ಥಿಕ ದುಃಸ್ಥಿತಿಗೆ ಎರಡನೆಯ ಮಹಾಯುದ್ಧದ ಕೊನೆಯೊಳಗೆ ಈಡಾಗಬೇಕಾಯಿತು ಯುದ್ಧ ಮುಗಿಯುವುದರೊಳಗೆ ಬ್ರಿಟ

ನ್ನಿನ ಹೊರದೇಶಗಳಲ್ಲಿದ್ದ ಚಿನ್ನ ಕರಗಿ ಹೋಯಿತು. ಅಮೆರಿಕದಿಂದ ಮತ್ತು ಕೆನಡಾದಿಂದ ಯುದ್ಧ ಕಾಲದಲ್ಲಿ ಒದಗಿದ ಸಹಾಯವಲ್ಲದೆ, ಬ್ರಿಟನ್ನಿಗೆ ಸುಮಾರು ೪,೭೫೦ ಮಿಲಿಯನ್ ಪೌಂಡುಗಳಷ್ಟು ನಷ್ಟ ವಾಯಿತು. ಯುದ್ಧಾನಂತರ ಬ್ರಿಟನ್ನಿನ ಕಾಲೊನಿಗಳು ಕೈಬಿಟ್ಟು ಹೋಗಿದ್ದು ; ಆರ್ಥಿಕ ಪುನರ್ರಚನೆಗಾಗಿ ಮಾಡಿದ ಸರ್ವ ಪ್ರಯತ್ನ ಗಳಿಂದಲೂ ನಿವಾರಣೆಯಾಗದೆ ಉಳಿದ ಆರ್ಥಿಕ ತೊಂದರೆಗಳು, ಅಮೆ ರಿಕದ ಕೈಗಾರಿಕೆಗಳ ಹೆಚ್ಚು ಉತ್ಪತ್ತಿ, ಅಮೆರಿಕದ ಸಾಲ—ಕೆನಡಾದ ಸಹಾಯ—ಇವು ಬಹು ವೇಗವಾಗಿ ವೆಚ್ಚವಾಗಿದ್ದು—ಇವೆಲ್ಲವೂ ಸೇರಿ ಬ್ರಿಟನ್ನಿನ ಆರ್ಥಿಕ ರಚನೆಯನ್ನು ಸಂಪೂರ್ಣವಾಗಿ ಶಿಥಿಲಗೊಳಿಸಿ ದವು; ಸಾಲಸೋಲಗಳ ಸಮತೂಕ ಅಸಾಧ್ಯವಾಯಿತು. ಬ್ರಿಟಿಷ್ ಟ್ರೆಜರಿಯಿಂದ ಪ್ರಕಟಿತವಾದ ಇತ್ತೀಚಿನ, The Budget and your pocket ಎಂಬುದು ಬ್ರಿಟನ್ನಿನ ಆರ್ಥಿಕ ಸ್ಥಿತಿಯನ್ನು ಹೃದ ಯಂಗಮವಾಗಿ ವಿವರಿಸಿದೆ. ಬ್ರಿಟನ್ನು ಎಂಟು ದಿನಗಳಲ್ಲಿ ಒಂದು ದಿನ ಇತರರ ದಾನದಿಂದ ಜೀವಿಸಬೇಕಾಗಿದೆ.

ನಾಣ್ಯ ಮೌಲ್ಯದ ಇಳಿವರಿಯು ಅನೇಕ ವಾದ ವಿವಾದಗಳಿಗೆ ಎಡೆಗೊಟ್ಟಿದೆ ಇದರಲ್ಲಿ ಯಕ್ಷಿಣಿ ಏನೂ ಇಲ್ಲ; ವಿಚಿತ್ರವೇನೂ ಇಲ್ಲ; ಹಾವಾಡಿಗನ ಪುಂಗಿಯ ಆಕರ್ಷಣಶಕ್ತಿಯಿಲ್ಲ. ಇದರ ಅರ್ಥ ಬಹು ಸರಳವಾಗಿದೆ. ಈ ಸರಳವಾದ ಅರ್ಥವನ್ನು ತಿಳಿದುಕೊಳ್ಳದೆ, ಅನೇಕರು ಗೊಡ್ಡು ವಾದಗಳಲ್ಲಿ ನಿರತರಾಗಿದ್ದಾರೆ. ಯಾವುದಾದರೂ ರಾಷ್ಟ್ರದ ಹಣದ ವಿನಿಮಯದ ಹೊರಬೆಲೆಯನ್ನು ಒಂದು ನಿರ್ದಿಷ್ಟವಾದ ಪ್ರಮಾಣದಲ್ಲಿಳಿಸುವುದೇ ನಾಣ್ಯ ಮೌಲ್ಯದ ಇಳಿವರಿಯ ಅರ್ಥ. ಈ ಬೆಲೆಯನ್ನು ಆ ಹಣದ ಸಮಬೆಲೆಯಲ್ಲಿ ಅಳೆಯಲಾಗುತ್ತದೆ, ಅಥವಾ ಇತರ ದೇಶಗಳ ನಾಣ್ಯಗಳೊಂದಿಗೆ ವಿನಿಮಯವಾಗುವ ದರದಲ್ಲಿ ಅಳೆಯ ಲಾಗುತ್ತದೆ. ನಾಣ್ಯ ವಿನಿಮಯದ ಬೆಲೆ ಅನೇಕ ನಾಣ್ಯಗಳ ಸಂಬಂಧ ದಲ್ಲಿ ನಿಶ್ಚಿತವಾಗುತ್ತದೆ. ನಾಣ್ಯ ವಿನಿಮಯದ ಬೆಲೆಯನ್ನು ಒಂದು ಅಂತರ ರಾಷ್ಟ್ರೀಯ ಸಂಸ್ಥೆಯೇ ನಿರ್ಧರಿಸಬೇಕಾಗುತ್ತದೆ. ಯಾವುದಾ ದರೂ ದೇಶದ ಹಣವು ಚಿನ್ನಕ್ಕೆ ಸಂಬಂಧಿಸಿದರೆ, ಅದರ ವಿನಿಮಯ ಬೆಲೆ

ಯಲ್ಲಿ ಯಾವ ಬದಲಾವಣೆಗಳೂ ಆಗುವುದಿಲ್ಲವೆಂಬುದು ಕೇವಲ ಭ್ರಾಂತಿ. ವಿಶ್ವದ ರಾಷ್ಟ್ರಗಳು ಚಿನ್ನದ ಮೂಲಕ ಒಂದಕ್ಕೊಂದು ಸಂಬಂಧಿಸಿವೆ ಎಂಬ ಅಂಶವನ್ನು ತಿಳಿಯದಿರಲಾರದಿರುವುದೇ ಪ್ರಪಂಚದ ಅನೇಕ ಆರ್ಥಿಕ ತೊಂದರೆಗಳಿಗೆ ಕಾರಣವಾಗಿದೆ. ಈ ಮನೋಭಾವನೆ ಬದಲಾಯಿಸಬೇಕು. ಎಲ್ಲಾ ರಾಷ್ಟ್ರಗಳ ನಾಣ್ಯ ವಿನಿಮಯ ಸಮಸ್ಯೆಗಳು ಚಿನ್ನದ ಅಡಿಗಲ್ಲಿನ ಮೇಲೆ ಪರಿಹಾರವಾಗಿ, ಅಂತರರಾಷ್ಟ್ರೀಯ ಆರ್ಥಿಕ ಸಹಕಾರ ವೃದ್ಧಿಯಾಗಬೇಕು. ಸರ್ವ ಸಮ್ಮತವಾದ ಅಂತರರಾಷ್ಟ್ರೀಯ ವಿನಿಮಯ ಪ್ರಮಾಣವಾದ ಚಿನ್ನದ ಸಂಬಂಧದಲ್ಲಿ ಅಥವಾ ಅತ್ಯುತ್ತಮ ನಾಣ್ಯವಾದ ಡಾಲರಿನ ಸಂಬಂಧದಲ್ಲಿ ಯಾವುದಾದರೂ ರಾಷ್ಟ್ರದ ಹಣದ ಹೊರಗಿನ ಕೊಳ್ಳುವ ಶಕ್ತಿಯು, ನಾಣ್ಯ ಮೌಲ್ಯದ ಇಳಿವರಿಯಿಂದ ಕಡಮೆಯಾದರೆ, ಆ ನಾಣ್ಯದ ಒಳಬೆಲೆಯು ಸ್ವಲ್ಪ ಕಾಲವಾದರೂ ಸ್ಥಿರವಾಗಿರುವ ಸಂಭವವಿರುವುದರಿಂದ, ನಾಣ್ಯದ ಮೌಲ್ಯದ ಆನುಕೂಲ್ಯಗಳು ನಿಜವಾದುವೆನಿಸುತ್ತದೆ. ಒಳಗಿನ ಉತ್ಪತ್ತಿ ವೆಚ್ಚಗಳು, ಬೆಲೆಗಳು ಸ್ಥಿರವಾಗಿದ್ದರೆ, ನಾಣ್ಯ ಮೌಲ್ಯದ ಇಳಿವರಿಯು ರಫ್ತಿಗೆ ಸಾಧಕವಾಗಿಯೂ, ಆಮದಿಗೆ ಸುಂಕವಾಗಿಯೂ ಪರಿಣಮಿಸುವುದು. ಹಣದ ಮೌಲ್ಯದಲ್ಲಿ ಇಳಿವರಿಯಾದ ದೇಶದ ರಫ್ತುಸಾಮಾನುಗಳು ಇತರ ದೇಶಗಳಿಗೆ ಅಗ್ಗವಾಗಿ ಕಾಣುತ್ತವೆ. ವಿದೇಶಿ ಹಣದ ಕೊಳ್ಳುವ ಶಕ್ತಿಯು ನಾಣ್ಯಮೌಲ್ಯದ ಇಳಿವರಿಯಾದ ದೇಶದಲ್ಲಿ ಹೆಚ್ಚಾಗುವುದರಿಂದ, ಇದು ಸ್ವಾಭಾವಿಕ. ಇದೇ ಕಾರಣದಿಂದ, ಆಮದು ಸಾಮಾನುಗಳಿಗೆ ಪ್ರೋತ್ಸಾಹ ಕ್ಷೀಣವಾಗುತ್ತದೆ. ಆದ್ದರಿಂದಲೇ ೧೯೩೦ನೆಯ ದಶಕದಲ್ಲಿ ಅನೇಕ ರಾಷ್ಟ್ರಗಳು ನಾಣ್ಯ ಮೌಲ್ಯದ ಇಳಿವರಿಯನ್ನು ಅಂಗೀಕರಿಸಿದ್ದು.

ಈಗ ಬ್ರಿಟನ್ನಿನ ಪೌಂಡಿಗೆ ಕಡಿಮೆ ಡಾಲರುಗಳು ಬರುತ್ತವೆ. ಅಂದರೆ ಒಂದು ಪೌಂಡಿಗೆ ಕೇವಲ ೨·೮೦ ಡಾಲರುಗಳು ಮಾತ್ರ, ಮೊದಲಿನಂತೆ ೪·೦೩ ಡಾಲರುಗಳು ಬರುವುದಿಲ್ಲ. ನಮ್ಮ ರೂಪಾಯಿಯ ಮೌಲ್ಯ ಸಹಾ ಇದೇ ಪ್ರಮಾಣದಲ್ಲಿ ಇಳಿದಿರುವುದರಿಂದ, ಈಗ ಡಾಲರುಗಳನ್ನು ಕೊಳ್ಳಲು ಹೆಚ್ಚು ರೂಪಾಯಿಗಳು ಬೇಕಾಗು

ತ್ತವೆ. ಮೊದಲು ೩೩೩ ರೂಪಾಯಿಗಳಿಗೆ ೧೦೦ ಡಾಲರುಗಳು ಬರುತ್ತಿದ್ದುವು; ಈಗ ೧೦೦ ಡಾಲರುಗಳಿಗೆ ೪೭೬ ರೂಪಾಯಿ ಕೊಡಬೇಕಾಗಿದೆ. ಈ ಅಂಶಗಳಲ್ಲಿ ಯಾವ ಯಕ್ಷಿಣಿಯೂ, ವಿಚಿತ್ರವೂ, ರಹಸ್ಯವೂ, ಮಂತ್ರವೂ ಇಲ್ಲ. ಅಮೆರಿಕದ ಸಾಮಾನುಗಳ ಬೆಲೆ ಪೌಂಡಿನಲ್ಲಿ ಅಥವಾ ರೂಪಾಯಿನಲ್ಲಿ ಹೆಚ್ಚಾಗುತ್ತದೆ. ಇದರಂತೆ, ನಮ್ಮ ಸಾಮಾನುಗಳನ್ನು ಅದೇ ಬೆಲೆಗೆ ಮಾರಿದರೆ, ಭಾರತದ ರಫ್ತು ವ್ಯಾಪಾರಗಾರರಿಗೆ ಹೆಚ್ಚು ರೂಪಾಯಿಗಳು ಬರುತ್ತವೆ. ಇದೇ ಅನುಕೂಲವನ್ನು ಬ್ರಿಟನ್ನಿನ ವ್ಯಾಪಾರಗಾರರು ಅನುಭವಿಸುತ್ತಾರೆ.

ಪೌಂಡಿನ ಮೌಲ್ಯದ ಇಳಿವರಿಯಿಂದ ಸಾಧಿಸಬಹುದಾದ ಆನುಕೂಲ್ಯಗಳು ವಿವಿಧವಾಗಿವೆ. ಒಂದನೆಯದಾಗಿ, ಬ್ರಿಟನ್ನಿನ ಸಾಮಾನುಗಳನ್ನು ಡಾಲರು ಪ್ರದೇಶದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮಾರಾಟ ಮಾಡಬಹುದು. ಎರಡನೆಯದಾಗಿ, ಡಾಲರುಗಳ ಮತ್ತು ಚಿನ್ನದ ಅಭಾವವನ್ನು ನೀಗಿಸಿ, ಪೌಂಡ್ ಸ್ಟರ್ಲಿಂಗಿನಲ್ಲಿ ವಿಶ್ವಾಸವನ್ನುಂಟು ಮಾಡಬಹುದು. ಮೂರನೆಯದಾಗಿ, ಡಾಲರು ಪ್ರದೇಶದಿಂದ ಆಮದು ಸಾಮಾನುಗಳನ್ನು ಕಡಮೆಮಾಡಿ, ಆದಷ್ಟುಮಟ್ಟಿಗೆ ಹೆಚ್ಚಿನ ಪ್ರಮಾಣದಲ್ಲಿ ಸುಲಭ ನಾಣ್ಯ (soft curency) ಪ್ರದೇಶಗಳಿಂದ ಸಾಮಾನುಗಳನ್ನು ಆಮದು ಮಾಡಿಕೊಳ್ಳಬಹುದು; ನಾಲ್ಕನೆಯದಾಗಿ ೧೯೫೨ರ ಸಮಯಕ್ಕೆ ಬ್ರಿಟನ್ನು ಮತ್ತು ಸ್ಟರ್ಲಿಂಗ್ ರಾಷ್ಟ್ರಗಳು ಆರ್ಥಿಕ ಸ್ವಪರಿಪೂರ್ಣತೆಯನ್ನು ಹೊಂದಬೇಕಾದ ಅನುಕೂಲ ವಾತಾವರಣವನ್ನು ಕಲ್ಪಿಸಬಹುದು. ಮುಖ್ಯವಾಗಿ, ರಫ್ತುವ್ಯಾಪಾರವನ್ನು ಹೆಚ್ಚು ಮಾಡಲು, ಆಮದನ್ನು ಕಡಮೆಮಾಡಲು, ನಾಣ್ಯ ಮೌಲ್ಯದ ಇಳಿವರಿಯು ಸಾಧಕವಾಗಬಹುದು. ನಾಣ್ಯಮೌಲ್ಯದ ಇಳಿವರಿಯ ಪರಮ ಧ್ಯೇಯವೇ ಇದು. ಈಗ ಅಂತರರಾಷ್ಟ್ರೀಯ ಸಾಲಸೋಲಗಳನ್ನು ಸಮದೂಗಿಸುವ ಸಮಸ್ಯೆಯನ್ನು ಪರಿಹರಿಸುವುದೇ ಬ್ರಿಟನ್ನಿನ ಆದ್ಯ ಕರ್ತವ್ಯವಾಗಿದೆ. ಅಂದರೆ, ದೀರ್ಘಕಾಲದ ಸಾಲಸೋಲಗಳ ಸಮತೂಕ ಮಾತ್ರ ಆವಶ್ಯಕ; ಕ್ಷಣಿಕಕಾಲದ ಈ ಸಮಸ್ಯೆಯನ್ನು ಪರಿಹರಿಸಲು ಅಂತರ ರಾಷ್ಟ್ರೀಯ ಸಂಸ್ಥೆ ಕಂಕಣಬದ್ಧವಾಗಿದೆ. ಕೆಲವು

ರಾಷ್ಟ್ರಗಳ ತಾತ್ಕಾಲಿಕ ನಷ್ಟಾಂಶವನ್ನು, ಇತರ ರಾಷ್ಟ್ರಗಳ ಉಳಿತಾಯದಿಂದ ಸರಿಪಡಿಸುವ ಪರಮೋದ್ದೇಶದಿಂದ ಈ ಸಂಸ್ಥೆ ನಿರ್ಮಾಣವಾಯಿತು. ಆದರೆ, ಕಾರ್ಯಕ್ಷೇತ್ರದ ಕೆಲಸ ಈ ಸಂಸ್ಥೆಯ ಶಕ್ತಿ ಮೀರಿದೆ. ವಿಷಮ ನಷ್ಟಾಂಶಗಳು, ಅಪಾರ ಉಳಿತಾಯಗಳು—ಈ ಎರಡು ಸಮಸ್ಯೆಗಳನ್ನು ಪರಿಹರಿಸಲು ಈ ಸಂಸ್ಥೆಗೆ ಸಾಧ್ಯವಿಲ್ಲ. ಅದ್ದರಿಂದ, ಅನೇಕ ರಾಷ್ಟ್ರಗಳ ಸಾಲಸೋಲಗಳ ಸಮತೂಕದ ಸಮಸ್ಯೆ ತಾತ್ಕಾಲಿಕವಾದುದಲ್ಲ. ಆದ್ದರಿಂದಲೇ, ನಾಣ್ಯಗಳ ಮೌಲ್ಯದ ಇಳಿವರಿಯು ಅನಿವಾರ್ಯವೆಂದು ಅಂತರರಾಷ್ಟ್ರೀಯ ಆರ್ಥಿಕ ಸಂಸ್ಥೆಯೇ ಒಪ್ಪಿಕೊಂಡಿದೆ.

ಪೌಂಡಿನ ಮೌಲ್ಯದ ಇಳಿವರಿಯಿಂದ, ಬ್ರಿಟನ್ನಿನಲ್ಲಿ ಅನುಕೂಲ ವಾತಾವರಣ ಕಲ್ಪನೆಯಾಗಿ, ಆರ್ಥಿಕ ಸ್ಥಿತಿ ಸುಧಾರಿಸಿ, ಡಾಲರುಗಳ ಉಗ್ರಕ್ಷಾಮ ನಿವಾರಣೆಯಾಗಿ, ವ್ಯಾಪಾರದ ಪ್ರತಿಕೂಲ ಪರಿಸ್ಥಿತಿ ಮಾಯವಾಗಬಹುದೆಂಬ ನಿರೀಕ್ಷಣೆ ಇದೆ. ಆದರೆ, ನಿರಾಶೆಗೂ ಅವಕಾಶವಿದೆ. ಕ್ರಿಪ್ಸರು ಬ್ರೆಡ್ಡಿನ ಬೆಲೆಯೊಂದು ಬಿಟ್ಟು ಬೇರೆ ಯಾವ ವಿಧವಾಗಿಯೂ ಜೀವನದ ವೆಚ್ಚ ಹೆಚ್ಚಾಗುವುದಿಲ್ಲವೆಂದು ಭರವಸೆ ಕೊಟ್ಟಿದ್ದರೂ, ಸ್ಟರ್ಲಿಂಗ್ ಮೌಲ್ಯದ ಇಳಿತದಿಂದ ಹೆಚ್ಚು ಕೆಲಸ, ಪರಿಶ್ರಮ, ತ್ಯಾಗ ಆವಶ್ಯಕವಾಗುತ್ತವೆ. ಬ್ರಿಟಿಷರು ಕೂಡಲೇ ಕಡಮೆ ಜೀವನದ ಮಟ್ಟವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಈಗಾಗಲೇ ಬ್ರಿಟಿಷ್ ಸರಕಾರವು ೪೬೫,೦೦೦,೦೦೦ ಪೌಂಡುಗಳನ್ನು ಆಹಾರದ ಮೇಲೆ ಸಹಾಯ ಧನವಾಗಿ ಪ್ರತಿವರ್ಷವೂ ಕೊಡುತ್ತಿರುವುದರಿಂದ ಇನ್ನೂ ಹೆಚ್ಚಿನ ಸಹಾಯವನ್ನು ಕೊಟ್ಟು ಬ್ರೆಡ್ಡಿನ ಬೆಲೆಯ ಹೆಚ್ಚುವರಿಯನ್ನು ತಪ್ಪಿಸಲು ಸಾಧ್ಯವಿಲ್ಲವೆಂದು ಕ್ರಿಪ್ಸರೇ ಹೇಳಿದ್ದಾರೆ.

ಸ್ಟರ್ಲಿಂಗ್ ಮೌಲ್ಯದ ಇಳಿತದಿಂದ ಬ್ರಿಟನ್ನಿನ ಆರ್ಥಿಕ ಮುಗ್ಗಟ್ಟು ನಿವಾರಣೆಯಾಗಿ, ಬ್ರಿಟನ್ನು ಪ್ರಗತಿಪಥದಲ್ಲಿ ನಿರಾತಂಕವಾಗಿ ಹೆಜ್ಜೆಯಿಡುತ್ತದೆಯೇ ? ಇದು ಸಾಧ್ಯವೆಂದು ನಂಬಿದರೆ, ಸೆಪ್ಟೆಂಬರ್ ೧೮ನೆಯ ತಾರೀಖಿನ ಹಿಂದೆ ಬ್ರಿಟನ್ನಿನ ಆರ್ಥಿಕ ಕ್ಷೇತ್ರದಲ್ಲಿದ್ದ ಕಂಟಕ ಪೌಂಡ್—ಡಾಲರು ವಿನಿಮಯ ಬೆಲೆ ಮಾತ್ರ ಎಂದು ತಿಳಿಯ

ಬೇಕಾಗುತ್ತದೆ. ವಿನಿಮಯ ದರಗಳು ಬಹು ಶಕ್ತಿಯುತವಾದ ಅಂಶಗಳು; ಅವುಗಳ ಬದಲಾವಣೆಯಿಂದ ಆಗುವ ಫಲಿತಾಂಶಗಳನ್ನು ಪ್ರತ್ಯಕ್ಷವಾಗಿ ಪರಿಶೀಲಿಸುವುದು ಅಸಾಧ್ಯ. ಆದರೆ, ಕ್ರಿಪ್ಸರು ತಿಳಿದಿರುವಷ್ಟುಮಟ್ಟಿಗೆ ವಿನಿಮಯ ದರಗಳು ಮಹತ್ವಪೂರಿತವಾಗಿಲ್ಲವೆಂದು ಹೇಳಬಹುದು. ಬ್ರಿಟನ್ನಿನ ಆರ್ಥಿಕ ರಚನೆಯಲ್ಲಿ ಅನೇಕ ಪ್ರತ್ಯಕ್ಷವಾದ ನ್ಯೂನತೆಗಳಿವೆ; ಮಹಾಯುದ್ಧದ ಪ್ರಳಯದಲ್ಲಿ ಬ್ರಿಟನ್ನಿನ ಆರ್ಥಿಕ ರಥ ಕೀಲುತಪ್ಪಿ, ಈ ವಿಷಮಪರಿಸ್ಥಿತಿಯಲ್ಲಿ ಆರ್ಥಿಕ ಸಮತೂಕವನ್ನು ಸಾಧಿಸಬಲ್ಲ ಅನುಕೂಲವಾದ ಅಂಶಗಳು ಎಲ್ಲೆಲ್ಲಿಯೂ ಶಕ್ತಿಕುಂದಿ, ಅಡ್ಡಿ ಆತಂಕಗಳಿಗೆ ಒಳಪಟ್ಟಿವೆ. ಅನೇಕ ನ್ಯೂನತೆಗಳು ಬಾಹ್ಯ ಪ್ರಪಂಚದಿಂದ ಬಂದಿದ್ದರೂ, ಬ್ರಿಟನ್ನಿನ ಒಳ ಆರ್ಥಿಕ ನೀತಿಯಿಂದ ಈ ವಿಷಮ ಪರಿಸ್ಥಿತಿ ದ್ವಿಗುಣವಾಗಿ ಇನ್ನೂ ಉಲ್ಬಣಾವಸ್ಥೆಯಲ್ಲಿದೆ. ಸ್ಟರ್ಲಿಂಗಿನ ಡಾಲರು ವಿನಿಮಯ ಬೆಲೆಯ ಬದಲಾವಣೆಯಿಂದ, ಬ್ರಿಟನ್ನಿನ ಆರ್ಥಿಕ ವಿಷಮತೆಯೆಲ್ಲಾ ಯಕ್ಷಿಣೀ ಪ್ರಯೋಗದಿಂದ ನಿವಾರಣೆಯಾಗುತ್ತದೆ ಎನ್ನುವುದನ್ನು ನಂಬಲು ಸಾಧ್ಯವಿಲ್ಲ.

ಸ್ಟರ್ಲಿಂಗ್ ಮೌಲ್ಯದ ಇಳಿತಾಯ ಅತ್ಯಂತ ಮಹತ್ವಪೂರಿತ ನಿರ್ಧಾರವಾದರೂ, ಒಳ ಆರ್ಥಿಕ ನೀತಿಯಲ್ಲಿ ಯಾವ ಬದಲಾವಣೆಯನ್ನೂ ಮಾಡುವುದಿಲ್ಲವೆಂದು ಹೇಳಿದ ಕ್ರಿಪ್ಸರಮಾತಿನಲ್ಲಿ ಸತ್ಯಾಂಶವಿದೆಯೇ? ಆರ್ಥಿಕ ಚಿಕಿತ್ಸೆ ಮನುಷ್ಯನ ಶಸ್ತ್ರಕ್ರಿಯೆಯಂತೆ ಗುಣಕಾರಕವಾದ ಹಾಗೂ ನೋವಿಲ್ಲದ ಶಸ್ತ್ರಕ್ರಿಯೆಯಲ್ಲ. ಸ್ಟರ್ಲಿಂಗಿನ ಮೌಲ್ಯದ ಇಳಿವರಿಯು ಬ್ರಿಟನ್ನಿನ ಸ್ಥಾನಮಾನಗಳನ್ನು ಹೆಚ್ಚಿಸಿ, ಆರ್ಥಿಕ ಸ್ಥಿತಿಯನ್ನು ಕ್ರಾಂತಿದಾಯಕವಾಗಿ ಮಾರ್ಪಾಟುಮಾಡಿ, ಒಳಸಂಬಂಧಗಳನ್ನು ಯಾವ ರೀತಿಯಲ್ಲೂ ಬದಲಾಯಿಸುವುದಿಲ್ಲವೆನ್ನುವುದು ಕೇವಲ ಭ್ರಾಂತಿ.

ಸ್ಟರ್ಲಿಂಗ್ ಮೌಲ್ಯದ ಇಳಿತಾಯ ಎಷ್ಟೇ ಆವಶ್ಯಕವಾದರೂ, ಅನಿವಾರ್ಯವಾದರೂ, ಬ್ರಿಟನ್ನಿನ ಆರ್ಥಿಕ ವಿಷಮತೆಯನ್ನು ಪರಿಹರಿಸಲಾರದು. ಈ ಪರಿಹಾರಕ್ಕೆ ಕಿರುಮಾರ್ಗಗಳಿಲ್ಲ. ರಾಷ್ಟ್ರದ ಆರ್ಥಿಕ ಯಂತ್ರದ ಸರ್ವತೋಮುಖವಾದ ಸಾಮರ್ಥ್ಯದಿಂದ ಮಾತ್ರ

ಇದು ಸಾಧ್ಯ. ಪೌಂಡು ಸ್ಟರ್ಲಿಂಗಿಗೆ ಸಾಮಾನುಗಳನ್ನು ಕಡಮೆ ಪ್ರಮಾಣದಲ್ಲಿ ತೆಗೆದುಕೊಳ್ಳುವುದಕ್ಕಿಂತ ಹೆಚ್ಚು ಸಾಮಾನುಗಳನ್ನು ಕೊಡಬೇಕು. ಆರ್ಥಿಕ ಬಿಕ್ಕಟ್ಟನ್ನು ಸಡಿಲಿಸಿ, ಇತರ ಅಂಶಗಳನ್ನು ಸರಾಗವಾಗಿ ನಡೆಯುವಂತೆ ಮಾಡಿದರೆ ಮಾತ್ರ ನಾಣ್ಯ ಮೌಲ್ಯದ ಇಳಿವರಿ ದೀರ್ಘಕಾಲದ ಸಾಧನವಾಗುತ್ತದೆ. ಆರ್ಥಿಕ ಕ್ಷೇತ್ರದ ಎಲ್ಲಾ ಅಂಗಗಳೂ ಬಿಗಿಯಾಗಿದ್ದರೆ, ನಾಣ್ಯಮೌಲ್ಯದ ಇಳಿವರಿಯಿಂದ ಏನೂ ಪ್ರಯೋಜನವಾಗುವುದಿಲ್ಲ.

# ೪. ಇತರ ರಾಷ್ಟ್ರಗಳು

ಬ್ರಿಟನ್ನಿನ ಸ್ಟರ್ಲಿಂಗ್ ಮೌಲ್ಯದ ಇಳಿವರಿಯೊಂದಿಗೆ ಇನ್ನೂ ೨೪ ರಾಷ್ಟ್ರಗಳು ತಮ್ಮ ನಾಣ್ಯಗಳ ಮೌಲ್ಯವನ್ನು ಡಾಲರ್ ಸಂಬಂಧದಲ್ಲಿ ಇಳಿಸಿವೆ. ಭಾರತದ ರೂಪಾಯಿಯು ಸ್ಟರ್ಲಿಂಗಿನ ಇಳಿತದ ಪ್ರಮಾಣದಲ್ಲೇ ಇಳಿದಿದೆ. ರೂಪಾಯಿಯ ಮೌಲ್ಯದ ಇಳಿವರಿಯೂ ಸೆಪ್ಟೆಂಬರ್ ೧೯ನೇ ತಾರೀಖಿನಿಂದ ಕಾರ್ಯರೂಪಕ್ಕೆ ಬಂದಿದೆ. ಮೊದಲು ಒಂದು ರೂಪಾಯಿಗೆ ೩೦·೨೨೫೦ ಸೆಂಟುಗಳು ಬರುತ್ತಿದ್ದುವು; ಈಗ ೨೧ ಸೆಂಟುಗಳಿಗೆ ಒಂದು ರೂಪಾಯಿಯಾಗಿದೆ. ೧೯೪೪ ನೆ ಜುಲೈ ೧ನೇ ತಾರೀಖು ಚಿನ್ನದ ತೂಕ ಮತ್ತು ಪರಿಶುದ್ಧತೆಯ ಸಂಬಂಧದಲ್ಲಿ ಈಗಿನ ಹೊಸ ದರಗಳು ಈ ರೀತಿ ಇವೆ. ೦·೧೮೬೬೨೧ ಗ್ರಾಮ್ಸ್ ಚೊಕ್ಕ ಚಿನ್ನಕ್ಕೆ ಒಂದು ರೂಪಾಯಿ; ೧೬೬.೬೬೭ ರೂಪಾಯಿಗಳು ಒಂದು ಟ್ರಾಯ್ ಔನ್ಸಿನ ಚೊಕ್ಕ ಚಿನ್ನಕ್ಕೆ ಸಮ; ೪.೭೬೧೯೦ ರೂಪಾಯಿಗಳು ಒಂದು ಡಾಲರಿಗೆ ಸಮ. ಮೊದಲು ಸುಮಾರು ೩-೪-೦ ರೂಪಾಯಿಗೆ ಒಂದು ಡಾಲರು ಬರುತ್ತಿತ್ತು; ಈಗ ಒಂದು ಡಾಲರಿಗೆ ೪-೧೨-೦ ರೂಪಾಯಿಗಳನ್ನು ಕೊಡಬೇಕಾಗುತ್ತದೆ. ಭಾರತವಲ್ಲದೆ, ಮುಖ್ಯವಾಗಿ ಆಸ್ಟ್ರೇಲಿಯ, ಬರ್ಮ, ಡೆನ್‌ಮಾರ್ಕ್, ಐರ್, ಈಜಿಪ್ಟ್, ಮಲಯ, ನಾರ್ವೆ, ನ್ಯೂಜಿಲೆಂಡ್, ಇಸ್ರೇಲ್, ದಕ್ಷಿಣ ಅಫ್ರಿಕ, ಸ್ವೀಡನ್, ಸಿಲೋನ್, ಫಿನ್ಲೆಂಡ್ ಮುಂತಾದ ರಾಷ್ಟ್ರಗಳು ಪೌಂಡ್ ಸ್ಟರ್ಲಿಂಗ್ ಮೌಲ್ಯದ ಇಳಿವರಿಯ ಪ್ರಮಾಣದಲ್ಲೆ ತಮ್ಮ ನಾಣ್ಯಗಳ ಮೌಲ್ಯವನ್ನು ಇಳಿಸಿವೆ. ಕೆನಡ ಮತ್ತು ಪಾಕೀಸ್ಥಾನ್— ಈ ಎರಡು ರಾಷ್ಟ್ರಗಳ ಹೊರತು ಉಳಿದ ಎಲ್ಲಾ ಡೊಮಿನಿಯನ್ನುಗಳೂ ನಾಣ್ಯಗಳ ಮೌಲ್ಯವನ್ನು ಬ್ರಿಟನ್ನಿನ ಸ್ಟರ್ಲಿಂಗ್ ಮೌಲ್ಯದ ಇಳಿವರಿಯ ಪ್ರಮಾಣದಲ್ಲಿ ಇಳಿಸಿವೆ. ಕೆನಡ ಸೇಕಡ ೧೦ ರಷ್ಟು ಮಾತ್ರ ತನ್ನ ಡಾಲರಿನ ವಿನಿಮಯ ಬೆಲೆಯನ್ನು ಇಳಿಸಿದೆ. ಪಾಕೀಸ್ಥಾನವು ಮಾತ್ರ ತನ್ನ ರೂಪಾಯಿಯನ್ನು ಮೊದಲಿನ ವಿನಿಮಯ

ದರದ ಮಟ್ಟದಲ್ಲೇ ಇರಿಸಿದೆ. ಈ ಮೇಲ್ಮಟ್ಟದ ವಿನಿಮಯ ದರವನ್ನು ಪಾಕೀಸ್ಥಾನವು ಊರ್ಜಿತ ಗೊಳಿಸುವುದೇ ಅನ್ನುವುದು ಒಂದು ಸಮಸ್ಯೆ. ಈ ಮುಂದೆ ಬರುವ ಕೋಷ್ಟಕದಿಂದ ವಿವರಗಳನ್ನು ತಿಳಿಯಬಹುದು.

ಇಟಲಿ, ಜೆಕೊಸ್ಲೋವಾಕಿಯ, ಹಂಗೆರಿ, ಪೋಲೆಂಡ್, ಪರ್ಷಿಯ, ಸ್ವಿಟ್ಜರ್ಲೆಂಡ್, ಸಿರಿಯ—ಈ ದೇಶಗಳ ನಾಣ್ಯಗಳ ಮೌಲ್ಯ ಇತರ ರಾಷ್ಟ್ರಗಳ ಮೌಲ್ಯದ ಇಳಿವರಿಯ ಫಲವಾಗಿ ಹೆಚ್ಚಿದೆ. ಪಾಕೀಸ್ಥಾನದ ರೂಪಾಯಿಯ ವಿನಿಮಯ ಬೆಲೆಯು, ಭಾರತದ ರೂಪಾಯಿಯ ಬೆಲೆಯ ಸಂಬಂಧದಲ್ಲಿ ಹೆಚ್ಚಿದೆ. ಈ ಸಂದರ್ಭದಲ್ಲಿ ಫ್ರಾನ್ಸ್ ಒಂದುವರ್ಷದ ಹಿಂದೆ ರೂಪುಗೊಂಡ ಗುಣಿತ ಅಥವಾ ವಿವಿಧ ವಿನಿಮಯ ಬೆಲೆಗಳನ್ನು* (Multiple Exchange Rates) ತೆಗೆದುಹಾಕಿ, ಈಗ ಒಂದೇ ವಿನಿಮಯದ ಬೆಲೆಯನ್ನು ಸ್ಥಾಪಿಸಿದೆ—ಅಂದರೆ ೩೫೦ ಫ್ರಾಂಕುಗಳಿಗೆ ಒಂದು ಡಾಲರು. ಇದರಿಂದ ಫ್ರಾಂಕ್-ಸ್ಟರ್ಲಿಂಗ್ ವಿನಿಮಯ ದರ ೧೦೯೭ ಫ್ರಾಂಕುಗಳಿಂದ ೯೮೦ ಫ್ರಾಂಕುಗಳಿಗೆ ಇಳಿದಿದೆ. ಬ್ರಿಟನ್ನಿನ ಮೌಲ್ಯದ ಇಳಿವರಿಯ ವಿಧಾನ ಮತ್ತು ಪ್ರಮಾಣದಲ್ಲಿ, ಫ್ರಾನ್ಸ್ ಸರಕಾರವು ತನ್ನ ಅತೃಪ್ತಿಯನ್ನು ವ್ಯಕ್ತಪಡಿಸಿದೆ. ಫ್ರಾನ್ಸಿನ ಆರ್ಥಿಕ ಸಚಿವರು, ಬ್ರಿಟನ್ನಿನ ಹೊಸ ವಿನಿಮಯ ದರವನ್ನು, "ವ್ಯಾಪಾರ—ಯುದ್ಧದ ಬೆಲೆ" ಎಂದು ಕರೆದಿದ್ದಾರೆ. ಇತ್ತೀಚೆಗೆ ಕೆಲವು ತಿಂಗಳುಗಳಿಂದ "ಮೇಲ್ಮಟ್ಟದ ವಿನಿಮಯ ಬೆಲೆಯ ಪೌಂಡ್ ಸ್ಟರ್ಲಿಂಗಿನ" ಮೇಲೆ ಚಳುವಳಿ ನಡಿಸಿದ ಫ್ರಾನ್ಸಿನ ಆರ್ಥಿಕ ಸಚಿವ, ತನ್ನ ಚಳುವಳಿಯು ಯಶಸ್ವಿಯಾದ ಸಮಯದಲ್ಲಿ ಪೌಂಡ್ ಸ್ಟರ್ಲಿಂಗಿನ ಮೌಲ್ಯದ ಇಳಿವರಿಯನ್ನು ಟೀಕಿಸಿದುದು ಅನಾವಶ್ಯಕವಾಗಿತ್ತು. ಇತರ ಯೂರೋಪಿನ ರಾಷ್ಟ್ರಗಳು ಎದುರಿಸಬೇಕಾಗಿರುವ

* ಆಮದು ಮತ್ತು ರಫ್ತು ವ್ಯಾಪಾರಿಗಾರರಿಗೆ ಫ್ರಾಂಕ್—ಡಾಲರ್ ವಿನಿಮಯ ಬೆಲೆ ೨೬೨ ಫ್ರಾಂಕ್‌ಗಳು—ಒಂದು ಡಾಲರು. ಆದರೆ ಸರಕಾರದ ಬೆಲೆ ೩೫೦ ಫ್ರಾಂಕುಗಳು—ಒಂದು ಡಾಲರು.

| ರಾಷ್ಟ್ರ | ನಾಣ್ಯದ ಹೆಸರು | ಹಿಂದಿನ ಡಾಲರು ವಿನಿಮಯ ಬೆಲೆ | ಈಗಿನ ಬೆಲೆ | ಸೇ. ಬದಲಾವಣೆ |
|---|---|---|---|---|
| ಬ್ರಿಟನ್ನು | ಪೌಂಡ್ ಸ್ಟರ್ಲಿಂಗ್ | ೪·೦೩ | ೨·೮೦ | —೩೦·೫ |
| ದಕ್ಷಿಣ ಆಫ್ರಿಕ | ,, | ೪·೦೩ | ,, | —೩೦·೫ |
| ಆಸ್ಟ್ರೇಲಿಯ | ,, | ೩·೨೨ | ೨·೨೪ | —೩೦·೪ |
| ನ್ಯೂಜಿಲೆಂಡ್ | ,, | ೪·೦೩ | ೨·೮೦ | —೩೦·೫ |
| ಇಂಡಿಯ | ರೂಪಾಯಿ | ೩೦·೨೨೫ ಸೆಂ.ಗಳು—೧ ರೂಪಾಯಿ | ೨೧ ಸೆಂಟುಗಳು | —೩೦·೫ |
| ಸಿಲೋನ್ | ,, | ,, | ,, | —೩೦·೫ |
| ಬರ್ಮ | ,, | ,, | ,, | —೩೦·೫ |
| ಐರ್ | ಪೌಂಡ್ | ೪·೦೩ | ೨·೮೦ | —೩೦·೫ |
| ಇರಾಕ್ | ,, | ,, | ,, | —೩೦·೫ |
| ಈಜಿಪ್ಟ್ | ,, | ೪·-೩ | ೨.೮೭೧ | —೩೦ ೫ |
| ಇಸ್ರೇಲ್ | ,, | ೪·೦೦ | ೨·೮ | —೩೦.೫ |
| ಹಾಲೆಂಡ್ | ಗಿಲ್ಡರ್ | ೨.೬೫ ಗಿಲ್ಡರ್— ೧ ಡಾಲರ್ | ೩·೮ ಗಿಲ್ಡರ್—೧ ಡಾಲರ್ | —೩೦·೦ |
| ಡೆನ್‌ಮಾರ್ಕ್ | ಕ್ರೋನ್ | ೪.೭೯೯೦೧ ಕ್ರೋನ್‌ಗಳು—೧ ಡಾಲರ್ | ೬.೧೯೦೭೧೪ ಕ್ರೋನ್‌ಗಳು—೧ ಡಾಲರ್ | —೩೦·೫ |
| ಫಿನ್ಲೆಂಡ್ | ಮಾರ್ಕ್ | ೧೬೦ ಮಾರ್ಕ್‌ಗಳು—೧ ಡಾಲರ್ | ೨೩೦ ಮಾರ್ಕ್‌ಗಳು—೧ ಡಾಲರ್ | —೨೯ ೫ |
| ನಾರ್ವೆ | ಕ್ರೋನ್ | ೪.೯೬೨೭೮ ಕ್ರೋನ್‌ಗಳು—೧ ಡಾಲರ್ | ೭.೧೪೨೮೬ ಕ್ರೋನ್‌ಗಳು—೧ ಡಾಲರ್ | —೩೦·೫ |
| ಸ್ವೀಡನ್ | ,, | ೩·೬೦ ಕ್ರೋನ— ೧ ಡಾಲರ್ | ೫·೧೮ ಕ್ರೋನ್—೧ ಡಾಲರ್ | —೩೦·೫ |
| ಗ್ರೀಸ್ | ಡ್ರಾಕ್ಮ | — | ೧೫,೦೦೦ ಡ್ರಾಕ್ಮ—೧ ಡಾಲರ್ | —೩೩·೩ |
| ಮಲಯ | ಡಾಲರ್ | ೪೬·೭೫ ಸೆಂಟುಗಳು | ೩೨.೫ ಸೆಂಟುಗಳು | —೩೦·೫ |
| ಕೆನಡ | ,, | ೧ ಕೆನಡ ಡಾಲರ್ | ೧·೧೦ ಕೆನಡ ಡಾಲರ್ | —೧೦·೦ |
| ಫ್ರಾನ್ಸ್ | ಫ್ರಾಂಕ್ | ೩೩೦ ಫ್ರಾಂಕ್ | ೩೫೦ ಫ್ರಾಂಕ್ | —೫.೬ |

ಅಂಶಗಳನ್ನು ತಿಳಿದು ಬ್ರಿಟನ್ನು ಕಾರ್ಯಕ್ಷೇತ್ರದಲ್ಲಿ ನಡೆದಿರುವುದೊಂದೇ ಕೈಗೊಂಡಕ್ರಮದ ಮುಖ್ಯ ಸಮರ್ಥನೆ. ಯುದ್ಧದ ಪ್ರಳಯ ಯಂತ್ರ ಮತ್ತು ಯುದ್ಧಾನಂತರದ ನಾಲ್ಕು ವರ್ಷಗಳ ಅವಿರಳ ವಿಷಮ ಹಣ ದುಬ್ಬರ, ಯೂರೋಪಿನ ಎಲ್ಲಾ ರಾಷ್ಟ್ರಗಳ ನಾಣ್ಯಗಳ ನೈಜವಾದ ಕೊಳ್ಳುವ ಶಕ್ತಿಯನ್ನು ಮಹತ್ತರವಾಗಿ ಕಡಮೆಮಾಡಿವೆ. ಕಳೆದ ಹದಿನೆಂಟು ತಿಂಗಳಲ್ಲಿ ಆರ್ಥಿಕ ಪುನರ್ರಚನೆಯ ದಾರಿಯಲ್ಲಿದ್ದ ಕಂಟಕ, ನಾಣ್ಯಗಳ ಅಸ್ವಾಭಾವಿಕ ವಿನಿಮಯ ದರ. ನೈಜವಾದ ಕೊಳ್ಳುವ ಶಕ್ತಿಯನ್ನು ಪ್ರದರ್ಶಿಸದೆ, ಯುದ್ಧಾನಂತರದ ಹಣದುಬ್ಬರವನ್ನು ಮುಚ್ಚಿಡಲು ಮಾಡಿದ ಪ್ರಯತ್ನಗಳು ವಿಫಲವಾದುವು. ಬೂದಿಮುಚ್ಚಿದ ಕೆಂಡ ತನ್ನ ಶಾಖವನ್ನು ಕಳೆದುಕೊಳ್ಳುವುದಿಲ್ಲ. ಸ್ಟರ್ಲಿಂಗಿಗೆ ಹೊಸ ವಿನಿಮಯ ದರವನ್ನು ಕೊಟ್ಟು, ಇತರ ರಾಷ್ಟ್ರಗಳು ಆ ಕ್ರಮವನ್ನು ಅನುಸರಿಸುವಂತೆ ಮಾಡಿದ ಬ್ರಿಟನ್ನಿನ ಕ್ರಮ ಹೊಸ ಸನ್ನಿವೇಶವನ್ನು ಸೃಷ್ಟಿಮಾಡಿಲ್ಲ. ಪ್ರಚಲಿತ ವಿಷಮತೆಯ ನೈಜತೆಯನ್ನು ಒಪ್ಪಿ ಕೊಂಡಂತಾಗಿದೆ.

ಯುದ್ಧಾನಂತರ ಮೊದಲನೆಯ ಸಾರಿ ನಾಣ್ಯಗಳ ವಿನಿಮಯ ದರಗಳು ಆರ್ಥಿಕ ನೈಜತೆಯ ಸಂಬಂಧವನ್ನು ತೋರಿಸುತ್ತಿವೆ. ಆದರೆ, ಮೌಲ್ಯದ ಇಳಿವರಿಯಲ್ಲಿ ಅಡಕವಾಗಿರುವ ಸ್ವಯಂ ಚಾಲಕವಾದ ಶಕ್ತಿ ಏನೂ ಇಲ್ಲ. ಹೊಸ ಸನ್ನಿವೇಶವನ್ನು ತೀವ್ರವಾದ ಆರ್ಥಿಕ ನೀತಿ ಯಿಂದ ಸ್ಥಿರಗೊಳಿಸಬೇಕು. ನವಚೇತನದಿಂದ ವೃದ್ಧಿಯಾಗುವ ಹಣ ದುಬ್ಬರವನ್ನು ಸರಕಾರಗಳು ಸರಿಯಾದ ಕ್ರಮಗಳಿಂದ ತಡೆಗಟ್ಟ ದಿದ್ದರೆ, ನಾಣ್ಯಮೌಲ್ಯದ ಇಳಿವರಿಯ ಎಲ್ಲಾ ಅನುಕೂಲ್ಯಗಳು ನೀರಿನ ಮೇಲಿನ ಗುಳ್ಳೆಗಳಾಗುತ್ತವೆ. ನಾಣ್ಯಮೌಲ್ಯದ ಇಳಿವರಿಯಿಂದಲೇ ಹಣದುಬ್ಬರವು ವೃದ್ಧಿಯಾಗಲು ಅವಕಾಶವಿದೆ. ಜೀವನದ ವೆಚ್ಚದ ಹೆಚ್ಚುವರಿಯಿಂದ, ಕಾರ್ಮಿಕರ ವೇತನಗಳು ಹೆಚ್ಚಾದರೆ, ಕೆಲವು ತಿಂಗಳಲ್ಲೇ ಹಣದುಬ್ಬರದ ಪ್ರವಾಹ ತುಂಬಿ ಬರುತ್ತದೆ. ಫ್ರಾನ್ಸಿನ ಆರ್ಥಿಕ ಯಂತ್ರ ಕೇವಲ ಶಕ್ತಿಹೀನವಾಗಿದೆ.

ಬ್ರಿಟನ್ನಿನಲ್ಲಿ ಹಣದುಬ್ಬರದ ಪುನರ್ಜನ್ಮವಾಗದಂತೆ ದೊಡ್ಡ

ಆರ್ಥಿಕ ಯುದ್ಧವನ್ನೇ ಮಾಡಬೇಕಾಗುತ್ತದೆ. ಯೂರೋಪಿನಲ್ಲಿ ಮತ್ತು ಇತರ ರಾಷ್ಟ್ರಗಳಲ್ಲಿ ಬ್ರಿಟನ್ನಿನ ನಿರ್ಧಾರದ ಅನುಕರಣೆಯಿಂದ ಸ್ಟರ್ಲಿಂಗಿನ ಅಂತರ ರಾಷ್ಟ್ರೀಯ ಮಹತ್ವ ವ್ಯಕ್ತವಾಗುತ್ತದೆ. ಸ್ಟರ್ಲಿಂಗ್ ಮೌಲ್ಯದ ಇಳಿವರಿಯನಂತರ, ಸ್ಟರ್ಲಿಂಗಿನ ಕೊಳ್ಳುವ ಶಕ್ತಿಯು ಇಳಿಮುಖವಾದರೆ, ಬ್ರಿಟನ್ನಿನ, ಇತರ ಸ್ಟರ್ಲಿಂಗ್ ರಾಷ್ಟ್ರಗಳ ಮತ್ತು ಯೂರೋಪಿನ ರಾಷ್ಟ್ರಗಳ ಆರ್ಥಿಕ ಸ್ಥಿತಿಯ ವಿಷಮತೆಯು ಪುನರ್ಜನ್ಮವನ್ನು ಪಡೆಯುತ್ತದೆ. ಸ್ಟರ್ಲಿಂಗ್ ಕ್ಷೇತ್ರದ ಎಲ್ಲಾ ರಾಷ್ಟ್ರಗಳ ಹಣದುಬ್ಬರವನ್ನು ತಡೆಗಟ್ಟಲು ಬ್ರಿಟನ್ ಕಂಕಣಬದ್ಧವಾಗಿ ನಿಲ್ಲಬೇಕು.

ಯೂರೋಪಿನ ಆರ್ಥಿಕಭದ್ರತೆ ಹಣದುಬ್ಬರವನ್ನು ತಡೆಗಟ್ಟುವ ಶಕ್ತಿಯಿಂದ ಮಾತ್ರ ಬರಲಾರದು. ಯೂರೋಪಿಗೆ ಅತ್ಯಂತ ಮುಖ್ಯವಾದ ಡಾಲರುಗಳ ಕ್ಷಾಮ ಕೇವಲ ವಿನಿಮಯ ಬೆಲೆಗಳ ಬದಲಾವಣೆಯಿಂದ ಪರಿಹಾರವಾಗಲಾರದು. ಯೂರೋಪಿನ ರಫ್ತುವ್ಯಾಪಾರವನ್ನು ಮಹತ್ತರವಾಗಿ ಹೆಚ್ಚಿಸಿ ಡಾಲರುಗಳನ್ನು ಸಂಪಾದಿಸಲು ಇತರ ಆರ್ಥಿಕ ಕ್ರಮಗಳು ಅತ್ಯಾವಶ್ಯಕ. ಪಶ್ಚಿಮ ಯೂರೋಪಿನ ಕೈಗಾರಿಕಾ ಶಕ್ತಿ ಒಂದೇ ರೀತಿ ಇದೆ. ಬ್ರಿಟನ್, ಬೆಲ್ಜಿಯಂ ಮತ್ತು ಪಶ್ಚಿಮ ಜರ್ಮನಿ—ಒಂದೇ ವಿಧವಾದ ಸಾಮಾನುಗಳನ್ನು ಅಮೆರಿಕಕ್ಕೆ ರಫ್ತುಮಾಡುತ್ತವೆ. ಅಮೆರಿಕದ ಗಿರಾಕಿಗಾಗಿ, ಈ ರಾಷ್ಟ್ರಗಳಲ್ಲಿ ಮೌಲ್ಯದ ಇಳಿತದ ಪೈಪೋಟಿ ಅತ್ಯಂತ ಬಿರುಸಾಗಿ, ಯೂರೋಪಿನ ಆರ್ಥಿಕಯಂತ್ರವೇ ನಾಶವಾಗಬಹುದು ಪ್ರತಿಯೊಂದು ರಾಷ್ಟ್ರವೂ ಅಂತರರಾಷ್ಟ್ರೀಯ ಫಲಿತಾಂಶಗಳನ್ನು ಬದಿಗೊತ್ತಿ ಪ್ರತ್ಯೇಕವಾಗಿ ತನ್ನ ವ್ಯಾಪಾರ ಸಮಸ್ಯೆಗಳನ್ನು ಪರಿಹಾರಮಾಡಲು ಹೊರಟರೆ, ಇನ್ನೂ ಉಗ್ರವಾದ ವಿಷಮತೆಯಿಂದ, ಯೂರೋಪಿನ ಆರ್ಥಿಕ ಸ್ಥಿತಿ ಕಂಗೆಡಬೇಕಾಗುತ್ತದೆ.

ಮಾರ್ಷಲ್ ಯೋಜನೆಯ ೧೯ ರಾಷ್ಟ್ರಗಳು ತಮ್ಮ ಆರ್ಥಿಕ ಯಂತ್ರಗಳನ್ನು ಸರಿಪಡಿಸಲು ಮತ್ತು ಯೂರೋಪಿನ ಹಾಗೂ ಇತರ ರಾಷ್ಟ್ರಗಳೊಂದಿಗೆ ವ್ಯಾಪಾರವನ್ನು ಹೆಚ್ಚಿಸಲು, ಒಂದಕ್ಕೊಂದು ಸಹ

ಕರಿಸಿ, ಎಲ್ಲಾ ಕ್ಷೇತ್ರಗಳಲ್ಲಿಯೂ ಪರಸ್ಪರ ಸಹಾಯ ಸೌಹಾರ್ದ ಗಳಿಂದ ವರ್ತಿಸುವುದು ಈಗ ಅತ್ಯಾವಶ್ಯಕವಾಗಿದೆ. ಇದರಲ್ಲಿ ಬ್ರಿಟ ನ್ನಿನ ಪಾತ್ರ ನಾಯಕ ಪಾತ್ರ. ಆದರೆ, ಬ್ರಿಟನ್ನಿನ ರೀತಿ ನೀತಿ ಗಳನ್ನು ಒಳಹೊಕ್ಕು ಪರೀಕ್ಷಿಸುವುದು ಕಷ್ಟ. ಬ್ರಿಟನ್ನಿನ ಸಚಿವರು ಪೌಂಡ್ ವಿನಿಮಯ ಬೆಲೆಯ ಬದಲಾವಣೆಯಿಂದ ಇತರ ಯೂರೋಪ್ ರಾಷ್ಟ್ರಗಳ ಮೇಲೆ ಏನು ಪರಿಣಾಮಗಳಾಗುತ್ತವೆಂಬುದನ್ನು ಯೋಚಿ ಸಿದ ಹಾಗೆ ಕಾಣುವುದಿಲ್ಲ. ಇದು ಅಪಾಯಕರವಾದ ನೀತಿ. ಕಾಲ ವಿಳಂಬ ಮಾಡದೆ ಬ್ರಿಟನ್ ಪಶ್ಚಿಮ ಯೂರೋಪಿನ ಮಾರ್ಷಲ್ ರಾಷ್ಟ್ರಗಳ ಸಮ್ಮೇಳನವನ್ನು ಸೇರಿಸಿ, ಯೂರೋಪಿನ ಮುಂದಿನ ಆರ್ಥಿಕ ವಿದ್ಯಮಾನಗಳನ್ನು ಸಾದ್ಯಂತವಾಗಿ ಚರ್ಚಿಸಿ ರೀತಿ ನೀತಿ ಗಳನ್ನು ರೂಪುಗೊಳಿಸುವುದು ಅತ್ಯಗತ್ಯ.

ಬ್ರಿಟನ್ನಿನ ಸ್ಟರ್ಲಿಂಗ್ ಮೌಲ್ಯದ ಇಳಿತಾಯದಿಂದ ಅಮೆರಿಕದ ಆರ್ಥಿಕ ಯಂತ್ರಕ್ಕೆ ಪೆಟ್ಟು ಬೀಳಬಹುದೆಂದು ಕೆಲವರ ವಾದ. ಅಮೆ ರಿಕ ತನ್ನ ಸಾಮಾನುಗಳ ಬೆಲೆಯನ್ನು ಬಹುಮಟ್ಟಿಗೆ ಇಳಿಸು ವದರಿಂದಲೂ, ಸುಂಕದ ಪೌಳಿಯನ್ನು ರಕ್ಷಿಸುವುದರಿಂದಲೂ ಬ್ರಿಟ ನ್ನಿನ ಸಾಮಾನುಗಳ ಆಮವನ್ನು ತಡೆಗಟ್ಟಬಹುದು. ಆದರೂ, ಅಮೆರಿಕಕ್ಕೆ ಅಪಾಯವಿದೆ. ಕಾರ್ಮಿಕರ ವೇತನಗಳನ್ನು ಕಡಮೆ ಮಾಡಿ ಸಾಮಾನುಗಳ ಬೆಲೆಯನ್ನು ಇಳಿಸಿದರೆ, ನಿರುದ್ಯೋಗ ಉಲ್ಬಣವಾಗಿ ಅಮೆರಿಕದಲ್ಲಿ ಆರ್ಥಿಕ ಬಿಕ್ಕಟ್ಟು ತಲೆದೋರ ಬಹುದು. ಬ್ರಿಟನ್ನು ಪೌಂಡಿನ ಡಾಲರು ಬೆಲೆಯನ್ನು ಇಳಿಸಿ, ವಿಶ್ವದ ಆರ್ಥಿಕ ಯಾಜಮಾನ್ಯವನ್ನು ಪುನಃ ಪಡೆಯಲು ಮಹತ್ತರವಾದ ಪ್ರಯತ್ನಮಾಡಿದೆಯೆಂದು ಕೆಲವರ ವಾದ. ಬ್ರಿಟನ್ನು ರಾಜಕೀಯ ಹಾಗೂ ಆರ್ಥಿಕ ಕ್ಷೇತ್ರದಲ್ಲಿ ಅನೇಕ ವಿಚಿತ್ರವಾದ ಪ್ರಯೋಗಗಳನ್ನು ಯಶಸ್ವಿಯಾಗಿ ನಡೆಸಿದೆ. ಇದೂ ಸಹಾ ಯಶಸ್ವಿಯಾಗಿ, ಬ್ರಿಟನ್ನಿನ ಅರ್ಥಿಕ ಪ್ರಗತಿ ನಾಗಾಲೋಟದಿಂದ ವೃದ್ಧಿಯಾದರೂ ಆಗಬಹುದು. ಆದರೆ, ಅರ್ಥಿಕ ವಿದ್ಯಮಾನಗಳಲ್ಲಿ ಭವಿಷ್ಯವನ್ನು ಹೇಳುವುದು ಕಷ್ಟ.

ಅಂತರ ರಾಷ್ಟ್ರೀಯ ಅರ್ಥಿಕ ಸಂಸ್ಥೆಯ ಅನೇಕ ಸದಸ್ಯ ರಾಷ್ಟ್ರ

ಗಳು ನಾಣ್ಯಗಳ ವಿನಿಮಯ ದರಗಳಲ್ಲಿ ಬದಲಾವಣೆಗಳನ್ನು ಮಾಡಿರುವ ಸಂಬಂಧದಲ್ಲಿ, ಸಂಸ್ಥೆಯ ಆಡಳಿತ ಡೈರೆಕ್ಟರಾದ ಕಾಮಿಲಿಗಟ್ ರವರು ಸೆಪ್ಟೆಂಬರ್ ೨೨ನೇ ತಾರೀಖು ೧೯೪೯ ರಲ್ಲಿ ಪತ್ರಿಕಾಪ್ರತಿನಿಧಿಗಳ ಸಮ್ಮೇಳನದಲ್ಲಿ ಉಪಯುಕ್ತವಾದ ಹೇಳಿಕೆಯನ್ನು ಕೊಟ್ಟಿದ್ದಾರೆ. "ಸದಸ್ಯ ರಾಷ್ಟ್ರಗಳ ನಾಣ್ಯಮೌಲ್ಯದ ಇಳಿವರಿಯಲ್ಲಿ ಈ ಸಂಸ್ಥೆಯು ತನ್ನ ಒಪ್ಪಿಗೆಯನ್ನು ಸಂತೋಷದಿಂದ ಕೊಟ್ಟಿದೆ. ಸದಸ್ಯ ರಾಷ್ಟ್ರಗಳಲ್ಲದ, ನ್ಯೂಜಿಲೆಂಡ್, ಐರ್, ಪೋರ್ಚುಗಲ್ ಮತ್ತು ಸ್ವೀಡನ್—ಈ ರಾಷ್ಟ್ರಗಳು ತಮ್ಮ ನಾಣ್ಯಗಳ ವಿನಿಮಯ ಬೆಲೆಗಳನ್ನು ಸೂಕ್ತವಾಗಿ ಬದಲಾಯಿಸಿವೆ. ಇದು ಅಂತರ ರಾಷ್ಟ್ರೀಯ ಆರ್ಥಿಕ ಸಹಕಾರದ ಮಹತ್ತರವಾದ ಚಿಹ್ನೆಯೆಂದು ಕಾಮಿಲಿಗಟ್‌ರವರ ಅಭಿಪ್ರಾಯ. ಆರ್ಥಿಕ ಸಂಸ್ಥೆಯ ರಚನಾ ಕ್ಷೇತ್ರದಲ್ಲಿ, ಅಂತರರಾಷ್ಟ್ರೀಯ ಸಂಧಾನದಿಂದ ಅನೇಕ ರಾಷ್ಟ್ರಗಳು ರಾಷ್ಟ್ರೀಯ ಆರ್ಥಿಕ ಆಸಕ್ತಿಗಳಿಗೆ ಮಹತ್ವಕೊಡದೆ ಈ ರೀತಿ ವರ್ತಿಸಿರುವುದು ಅಂತರ ರಾಷ್ಟ್ರೀಯ ಆರ್ಥಿಕ ಸಹಕಾರದ ನೈಜತೆಯನ್ನು ವ್ಯಕ್ತಪಡಿಸುತ್ತದೆ. ಪ್ರಪಂಚದ ವ್ಯಾಪಾರದ ಅಭಿವೃದ್ಧಿಗೆ ಇದು ಸಾಧನವಾಗುವುದರಲ್ಲಿ ಏನೂ ಸಂದೇಹವಿಲ್ಲ. ಇದರಿಂದ ಪಶ್ಚಿಮಾರ್ಧಗೋಳದ ರಾಷ್ಟ್ರಗಳಿಗೆ ಬೇರೆ ದೇಶಗಳು ಹೆಚ್ಚಾಗಿ ಸಾಮಾನುಗಳನ್ನು ರಫ್ತು ಮಾಡುವುದರಿಂದ, ಡಾಲರುಗಳ ಕ್ಷಾಮ ಪರಿಹಾರವಾಗಿ ಆರ್ಥಿಕ ಬಿಕ್ಕಟ್ಟು ನಿವಾರಣೆಯಾಗುತ್ತದೆ. ಸೆಪ್ಟೆಂಬರ್ ತಿಂಗಳ ೧೯ನೇ ತಾರೀಖಿನಿಂದ ಬಹು ಉಪಯುಕ್ತವಾದ ಮತ್ತು ಶಾಂತಿಯುತವಾದ ಆರ್ಥಿಕ ಕ್ರಾಂತಿ ನಡೆದಿದೆ. ಆರ್ಥಿಕ ಸಂಸ್ಥೆಯ ಧ್ಯೇಯಗಳ ಸಾಧನೆಗೆ ಇದು ಪ್ರಥಮ ಸೋಪಾನ. ವಿವಿಧ ಮುಖವಾದ ಅಂತರ ರಾಷ್ಟ್ರೀಯ ವ್ಯಾಪಾರವು ಈ ಸನ್ನಿವೇಶದಲ್ಲಿ ಪುನರ್ಜನ್ಮತಾಳಿ, ವಿಶ್ವವ್ಯಾಪಾರ ಪುನಃ ಬಹು ವೇಗದಿಂದ ಅಭಿವೃದ್ಧಿಯಾಗುತ್ತದೆ. ಇದೇ ಅಂತರ ರಾಷ್ಟ್ರೀಯ ಆರ್ಥಿಕ ಸಂಸ್ಥೆಯ ಪ್ರಧಾನ ಧ್ಯೇಯ. ವಿನಿಮಯ ದರಗಳ ಪುನರ್ವ್ಯವಸ್ಥೆಯಿಂದ ಪ್ರಪಂಚ ವ್ಯಾಪಾರದ ಅಭಿವೃದ್ಧಿಗೆ ಹೆಚ್ಚಿನ ಅವಕಾಶಗಳೊದಗಿ, ವಿನಿಮಯದ ಅಡ್ಡಿಆತಂಕಗಳು ಶೀಘ್ರವಾಗಿ ಮಾಯವಾಗುವುದರಲ್ಲಿ ಯಾವ ಸಂದೇ

ಹವೂ ಇಲ್ಲ. ಆರ್ಥಿಕ ಸಂಸ್ಥೆಯ ಪ್ರಧಾನ ಧ್ಯೇಯಗಳಲ್ಲಿ ಇವು ಮುಖ್ಯವಾದುವು.'' ಈ ರೀತಿಯಾಗಿ ಕಾಮಿಲಿಗಟ್‌ರವರು ಆಶಾವಾದಿಗಳಾಗಿದ್ದಾರೆ. ಆದರೆ, ಅನೇಕ ರಾಷ್ಟ್ರಗಳು ಏಕಕಾಲದಲ್ಲಿ ನಾಣ್ಯಗಳ ಮೌಲ್ಯವನ್ನು ಇಳಿಸಿರುವುದರಿಂದ ನಾಣ್ಯಮೌಲ್ಯದ ಇಳಿವರಿಯ ಅನುಕೂಲಗಳು ಕೇವಲ ಕ್ಷಣಿಕವಾಗಬಹುದು. ಗಾಳಿಗೋಪುರಗಳಾಗಬಹುದು. ಈ ರಾಷ್ಟ್ರಗಳ ಸಾಮಾನುಗಳಿಗೆ ಪ್ರಪಂಚದ ಸುಸ್ತವಾದ ಗಿರಾಕಿ ಇದ್ದರೆ, ಹೆಚ್ಚು ಸಾಮಾನುಗಳನ್ನು ಹೊರಗಡೆ ಮಾರಾಟ ಮಾಡಲು ಸಾಧ್ಯವಾಗಬಹುದು.

ಮುಖ್ಯವಾಗಿ ಸ್ಟರ್ಲಿಂಗ್ ಕ್ಷೇತ್ರದ ರಾಷ್ಟ್ರಗಳು ಬ್ರಿಟನ್ನಿನ ಕ್ರಮವನ್ನು ಬಹು ಶ್ರದ್ಧೆಯಿಂದ ಅನುಸರಿಸಿವೆ. ಈ ರಾಷ್ಟ್ರಗಳು ತಮ್ಮ ನಾಣ್ಯಗಳ ಮೌಲ್ಯದ ಇಳಿವರಿಯನ್ನು ಸಾಧಿಸದಿದ್ದರೆ, ಇವುಗಳ ಆರ್ಥಿಕ ರಚನೆಯಲ್ಲಿ ಏನು ಬದಲಾವಣೆಗಳಾಗುತ್ತಿದ್ದುವು, ಎಂಬುದನ್ನು ತಿಳಿಯಬೇಕಾದರೆ, ರೂಪಾಯಿಯ ಮೌಲ್ಯದ ಇಳಿವರಿಯಿಂದ ಭಾರತಕ್ಕೆ ಆಗಿರುವ ಸಾಧಕ ಬಾಧಕಗಳೇನು? ಭಾರತ ಬ್ರಿಟನ್ನಿನೊಂದಿಗೆ ರೂಪಾಯಿಯ ಮೌಲ್ಯವನ್ನು ಇಳಿಸದೆ ಇದ್ದಿದ್ದರೆ ಏನಾಗುತ್ತಿತ್ತು? ಈ ಸಮಸ್ಯೆಗಳನ್ನು ಕೂಲಂಕಷವಾಗಿ ಪರಿಶೀಲಿಸಬೇಕು.

# ೫. ಭಾರತದ ರೂಪಾಯಿ

ಪ್ರಪಂಚದ ಇತರ ರಾಷ್ಟ್ರಗಳಂತೆ ಭಾರತವೂ ಅತ್ಯಂತ ವಿಷಮವಾದ ಆರ್ಥಿಕ ವಾತಾವರಣದಲ್ಲಿದೆ. ಭಾರತದ ಆಮದು ರಫ್ತುಗಳನ್ನು ಸಮತೂಗಿಸುವುದು ಕಷ್ಟವಾಗಿ, ಯುದ್ಧಾನಂತರ ಇಲ್ಲಿಯೂ ಡಾಲರುಗಳ ಕ್ಷಾಮ ತಲೆದೋರಿದೆ. ಈ ದೃಷ್ಟಿಯಿಂದ ಭಾರತವು ರೂಪಾಯಿಯ ಮೌಲ್ಯವನ್ನು ಇಳಿಸಲು ಮಾಡಿದ ನಿರ್ಧಾರವನ್ನು ವಿಮರ್ಶಿಸಬೇಕಾಗಿದೆ. ಮಹಾಯುದ್ಧದಿಂದ ಭಾರತದ ಆರ್ಥಿಕ ಯಂತ್ರವು ಶಿಥಿಲವಾಯಿತು. ಯುದ್ಧಕಾಲದಲ್ಲಿ ಮಿತ್ರ ರಾಷ್ಟ್ರಗಳ ಯುದ್ಧದ ಆವಶ್ಯಕತೆಗಳ ಸರಬರಾಜಿಗೋಸ್ಕರ ಭಾರತದ ಆರ್ಥಿಕಯಂತ್ರ ಮಾರ್ಪಾಡಾಯಿತು. ಯುದ್ಧಕ್ಕೆ ಬೇಕಾದ ಸಾಮಾನುಗಳನ್ನು ತಯಾರಿಸುವುದು, ಅತ್ಯಾವಶ್ಯಕವಾದ ಕಚ್ಚಾ ಮಾಲುಗಳನ್ನು ಮತ್ತು ಇತರ ಪದಾರ್ಥಗಳನ್ನು ಒದಗಿಸುವುದು, ಯುದ್ಧಕ್ಕೆ ಸಿಪಾಯಿಗಳನ್ನು ಒದಗಿಸುವುದು—ಇವೇ ಭಾರತದ ಮುಖ್ಯ ಕೆಲಸಗಳಾಗಿದ್ದುವು. ಆದ್ದರಿಂದ, ಯುದ್ಧಾನಂತರ, ಇತರ ಯುದ್ಧ ಮಾಡಿದ ರಾಷ್ಟ್ರಗಳಂತೆ ಆರ್ಥಿಕ ರಚನೆಯನ್ನು ಶಾಂತಿಕಾಲದ ರೂಪಕ್ಕೆ ಮಾರ್ಪಡಿಸಿ, ಅನುಪಯುಕ್ತವಾದ ಕೈಗಾರಿಕಾ ಮತ್ತು ಸಂಚಾರ ಉಪಕರಣಗಳನ್ನು ಸರಿಪಡಿಸಿ, ಯುದ್ಧದಲ್ಲಿ ನಿರತರಾಗಿದ್ದ ಅನೇಕ ಜನರಿಗೆ ಉಪಯುಕ್ತವಾದ ಉದ್ಯೋಗಗಳನ್ನು ಕಲ್ಪಿಸಲು ಭಾರತ ಅನವರತ ಶ್ರಮಿಸಬೇಕಾಗಿದೆ. ದುಡಿಯಬೇಕಾಗಿದೆ. ಯುದ್ಧದ ದೆಸೆಯಿಂದ ಮತ್ತು ಆಹಾರದ ಕೊರತೆಯಿಂದ ಲಕ್ಷಾಂತರ ಜನರು ಪ್ರಾಣವನ್ನು ಕಳೆದುಕೊಂಡರು. ಕೋಟ್ಯಂತರ ಜನರಿಗೆ ಅಹಾರವನ್ನು ಒದಗಿಸುವ ಸಮಸ್ಯೆ ಮಹತ್ತರವಾಗಿದೆ. ಯುದ್ಧದ ಅಪಾರ ವೆಚ್ಚವನ್ನು ನಿರ್ವಹಿಸಲು ಸ್ಟರ್ಲಿಂಗ್ ಪತ್ರಗಳ ಆಧಾರದ ಮೇಲೆ ರಿಸರ್ವ್ ಬ್ಯಾಂಕ್ ಕೋಟ್ಯಂತರ ರೂಪಾಯಿಗಳ ನೋಟುಗಳನ್ನು

ಅಚ್ಚು ಹಾಕಿದ್ದರಿಂದ, ಭಾರತದಲ್ಲಿ ಹಣದುಬ್ಬರ ನಾಗಾಲೋಟದಿಂದ ವೃದ್ಧಿಯಾಗಿ, ಲಕ್ಷಾಂತರ ಜನರು ಕಷ್ಟನಷ್ಟಗಳಿಗೆ, ಸಾವುನೋವುಗಳಿಗೆ ಗುರಿಯಾದರು. ಯುದ್ಧಾನಂತರ ಹಣದುಬ್ಬರ ಇನ್ನೂ ಉಲ್ಬಣವಾಗಿದೆ. ಇಂಡಿಯಾ ಸರಕಾರವು ದೇಶದ ರಕ್ಷಣೆಗಾಗಿ ಅಪಾರವಾದ ಪ್ರಮಾಣದಲ್ಲಿ ಹಣವನ್ನು ವೆಚ್ಚಮಾಡಬೇಕಾದ್ದರಿಂದ, ೧೯೩೯ರಿಂದ ನಷ್ಟಾಂಶ ಬಡ್ಜೆಟ್ಟುಗಳು ಅನಿವಾರ್ಯವಾಗಿವೆ. ತೆರಿಗೆಗಳಿಂದ ಮತ್ತು ಹಣದುಬ್ಬರದಿಂದ, ಈ ನಷ್ಟಾಂಶವನ್ನು ಸಮದೂಗಿಸಲಾಗಿದೆ.

ಭಾರತಕ್ಕೆ ಸ್ವಾತಂತ್ರ್ಯ ಬಂದ ಮೇಲೆ ಸರಕಾರವು ಅನೇಕ ಸಾರ್ವಜನಿಕ ಕೆಲಸಗಳ ಯೋಜನೆಗಳನ್ನು ಕೈಗೊಂಡು ಕೋಟ್ಯಂತರ ರೂಪಾಯಿಗಳನ್ನು ವೆಚ್ಚಮಾಡುತ್ತಿದೆ. ಇದರಿಂದ ಹಣದುಬ್ಬರವು ವೃದಿಯಾಗುವುದಲ್ಲದೆ, ಇತರ ದೇಶಗಳಿಂದ ಬಂಡವಾಳವನ್ನು ತರಿಸಿಕೊಳ್ಳಬೇಕಾಗಿದೆ. ಭಾರತವು ವಿಭಜನೆಯಾದ ಮೇಲೆ, ಇಂಡಿಯಾದಲ್ಲಿ ಆಹಾರಧಾನ್ಯಗಳನ್ನು ಬೆಳೆಯುವ ಪ್ರದೇಶಕ್ಷೀಣವಾಗಿ, ಹೆಚ್ಚುವರಿ ಪ್ರದೇಶಗಳು ಪಾಕೀಸ್ಥಾನಕ್ಕೆ ಹೋಗಿವೆ. ಇದಲ್ಲದೆ, ಸೆಣಬು ಮತ್ತು ಹತ್ತಿ ಬಟ್ಟೆಯ ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಮಾಲಗಳನ್ನು ಪಾಕೀಸ್ಥಾನದಿಂದ ತರಿಸಿಕೊಳ್ಳಬೇಕಾಗಿದೆ. ನಮ್ಮ ಆಮದು ಪ್ರಮಾಣ ಹೆಚ್ಚಾಗುತ್ತಿದ್ದು, ರಫ್ತುವ್ಯಾಪಾರ ಕ್ಷೀಣವಾಗುತ್ತಿದೆ.

ಇಂಡಿಯಾ ಬಂಡವಾಳ ರಾಷ್ಟ್ರವಲ್ಲ. ನಮ್ಮ ದೇಶದ ಸಾಲಸೋಲಗಳಲ್ಲಿ ನಷ್ಟಾಂಶವು ಮುಖ್ಯವಾಗಿ ಎರಡು ಕಾರಣಗಳಿಂದ ಹೆಚ್ಚಾಗುತ್ತಿದೆ-ಒಂದನೆಯದು ಬಂಡವಾಳ ಸಾಮಾನುಗಳ, ಯಂತ್ರಗಳ ಹಾಗೂ ಇತರ ಕೈಗಾರಿಕಾ ಉಪಕರಣಗಳ ಆಮದು; ಎರಡನೆಯದು ಆಹಾರ ಧಾನ್ಯಗಳ ಆಮದು. ಭಾರತ ಆಹಾರ ಧಾನ್ಯಗಳಿಗೋಸ್ಕರ ಮತ್ತು ಯಂತ್ರೋಪಕರಣಗಳಿಗೋಸ್ಕರ ಅಮೆರಿಕಕ್ಕೆ ಅಧೀನವಾಗಿರುವುದರಿಂದ, ನಮ್ಮ ದೇಶದಲ್ಲಿ ಡಾಲರುಗಳ ಅಭಾವ ಹೆಚ್ಚಾಗುತ್ತಿದೆ. ವ್ಯಾಪಾರದಲ್ಲಿ ಸಮತೂಕ ಅಸಾಧ್ಯವಾಗಿದೆ; ನಷ್ಟಾಂಶ ಅನಿವಾರ್ಯವಾಗಿದೆ. ಈ ಕೆಳಗಿನ ಕೋಷ್ಟಕವು ಭಾರತದ ವ್ಯಾಪಾರ ಸರಕುಗಳ ಪ್ರಮಾಣವನ್ನು ತೋರಿಸುತ್ತದೆ.

## ವ್ಯಾಪಾರ ಸರಕುಗಳ ತುಲನ (Balance of Trade)

### ನಿವ್ವಳ ರಫ್ತುಗಳು + ಮತ್ತು ನಿವ್ವಳ ಆಮದು —

(ಮಿಲಿಯನ್ ರೂಪಾಯಿಗಳಲ್ಲಿ)

| ವಾರ್ಷಿಕ | ಸ್ಟರ್ಲಿಂಗ್ ಕ್ಷೇತ್ರ | ಅಮೆರಿಕ | ಸ್ಟರ್ಲಿಂಗ್‌ಕ್ಷೇತ್ರಕ್ಕೆ ಸೇರದ ರಾಷ್ಟ್ರಗಳು |
|---|---|---|---|
| ೧೯೩೮. | —೨.೪ | +೧.೭ | +೭.೫ |
| ೧೯೪೫. | +೩೧.೯ | —೧೯.೬ | —೩೦.೯ |
| ೧೯೪೬. | —೬.೩ | +೧೯.೮ | —೨.೫ |
| ೧೯೪೭ (೬ ತಿಂಗಳ ಸರಾಸರಿ) | +೧೩.೦ | —೩೬.೪ | +೦.೬ |
| ೧೯೪೮ (೯ ತಿಂಗಳ ಸರಾಸರಿ- ಏಪ್ರಿಲಿನಿಂದ ಡಿಸೆಂಬರ್) | —೧೨.೩ | —೨೫.೮ | —೯.೨ |
| **ತ್ರೈಮಾಸಿಕ** | | | |
| ೧೯೪೮—ಒಂದನೆಯದು | +೨೮.೬ | —೨೪.೦ | +೧೭.೯ |
| ೧೯೪೮—ಎರಡನೆಯದು | —೨೩.೧ | —೨೬.೯ | +೩೨.೪ |
| ೧೯೪೮—ಮೂರನೆಯದು | —೧೦.೩ | —೩೨.೬ | —೧೫.೨ |
| ೧೯೪೮—ನಾಲ್ಕನೆಯದು | —೩.೩ | —೧೭.೮ | —೪೪.೯ |
| ೧೯೪೯—ಒಂದನೆಯದು | —೮೩.೬ | —೩೬.೪ | —೮೦.೨ |
| ೧೯೪೯—ಎರಡನೆಯದು | — | — | — |

ಯುದ್ಧಕ್ಕಿಂತ ಹಿಂದೆ ಇಂಡಿಯಾದ ರಫ್ತುವ್ಯಾಪಾರದಲ್ಲಿ, ಸ್ಟರ್ಲಿಂಗ್‌ಕ್ಷೇತ್ರದೊಂದಿಗೆ ಉಂಟಾಗುತ್ತಿದ್ದ ನಷ್ಟಾಂಶವನ್ನು ಇತರ ರಾಷ್ಟ್ರಗಳೊಂದಿಗೆ ಮತ್ತು ಅಮೆರಿಕದೊಂದಿಗೆ ಬರುತ್ತಿದ್ದ ಉಳಿತಾಯ ದಿಂದ ಸರಿಪಡಿಸಲು ಅನುಕೂಲವಿದ್ದಿತು. ೧೯೪೫ರಲ್ಲಿ ಇಂಡಿಯಾಕ್ಕೆ ಅಮೆರಿಕದ ಹೆಚ್ಚಿನ ಆಮದಿನಿಂದ, ಮೊದಲನೆಯ ಸಲ ಆ ದೇಶ ದೊಂದಿಗೆ ನಷ್ಟಾಂಶ ಪ್ರಾರಂಭವಾಯಿತು. ಆದರೂ ಇದು ಅಷ್ಟು ಮಹತ್ವವಾದುದಲ್ಲ, ಕೆಲವು ಉತ್ಕಟವಾದ ಅಂಶಗಳಿಂದ ಈ ಪರಿಸ್ಥಿತಿ ಯುಂಟಾಯಿತು. ಆದರೆ ೧೯೪೭ರಲ್ಲಿ ಈ ನಷ್ಟಾಂಶವು ವಿಪರೀತವಾಗಿ,

ನಮ್ಮ ಆರ್ಥಿಕಸ್ಥಿತಿ ಹದಗೆಟ್ಟಿತು. ಸ್ಟರ್ಲಿಂಗ್ ಕ್ಷೇತ್ರದೊಂದಿಗೆ ೧೯೪೮ನೆಯ ಇಸವಿಯ ಮೊದಲನೇ ಮೂರು ತಿಂಗಳಲ್ಲಿ ೨೮·೬ ಮಿಲಿಯನ್ ರೂಪಾಯಿಗಳ ರಫ್ತು ಉಳಿತಾಯವಿದ್ದು, ಅದೇ ವರ್ಷದ ಎರಡನೆಯ ೩ ತಿಂಗಳಲ್ಲಿ ೨೩.೧ ಮಿಲಿಯನ್ ರೂಪಾಯಿಗಳ ನಷ್ಟಾಂಶವುಂಟಾಯಿತು. ಸ್ಟರ್ಲಿಂಗ್ ಕ್ಷೇತ್ರದೊಂದಿಗೆ ಉಂಟಾದ ಈ ನಷ್ಟಾಂಶವು, ಅಮೆರಿಕದೊಂದಿಗೆ ಆದ ನಷ್ಟಾಂಶದಿಂದ ಇನ್ನೂ ವಿಷಮಗೊಂಡಿತು. ಆದರೆ, ಸ್ವಲ್ಪಮಟ್ಟಿಗೆ ಈ ನಷ್ಟಾಂಶವು ಇತರ ರಾಷ್ಟ್ರಗಳೊಂದಿಗೆ ಬಂದ ಉಳಿತಾಯದಿಂದ ಕಡಮೆಯಾಯಿತು. ೧೯೪೮ನೆಯ ಇಸವಿಯ ದ್ವಿತೀಯಾರ್ಧದಿಂದ ಮೂರು ಕ್ಷೇತ್ರಗಳೊಂದಿಗೂ ನಷ್ಟಾಂಶವುಂಟಾಯಿತು ಇದು ಭಯಸೂಚನೆಯ ಚಿಹ್ನೆ. ಇದರಿಂದ ನಮ್ಮ ಹೊರಗಿನ ಹಣದ ನಿಧಿಯು ಕ್ಷೀಣವಾಗುತ್ತಾ ಬಂದಿತು.

ನಮ್ಮ ಸಾಲಸೋಲಗಳ ಸಮಸ್ಯೆಯ ಪರಿಶೀಲನೆಯಿಂದ, ಆರ್ಥಿಕ ವಿಷಮತೆ ವ್ಯಕ್ತವಾಗುತ್ತದೆ. ಹೊರಗಿರುವ ವಿದೇಶಿ ಹಣದ ನಿಧಿಯಿಂದ, ನಮ್ಮ ವ್ಯಾಪಾರದ ನಷ್ಟಾಂಶವನ್ನು ಪರಿಹಾರಮಾಡುವುದು ಸೂಕ್ತವಲ್ಲ. ಭಾರತವು ಹೆಚ್ಚು ಮಾರಾಟಮಾಡಿ, ಹೊರಗಡೆಯಿಂದ ಬರುವ ಆಮದು ಸಾಮಾನುಗಳನ್ನು ಕಡಮೆಮಾಡುವುದರಿಂದ ಮಾತ್ರ ಈ ವಿಷಮ ಪರಿಸ್ಥಿತಿಯನ್ನು ನಿವಾರಿಸಬಲ್ಲದು; ಬೇರೆ ಮಾರ್ಗವಿಲ್ಲ. ೧೯೪೯ನೆಯ ಇಸವಿಯ ಮೊದಲನೆಯ ಮೂರು ತಿಂಗಳಲ್ಲಿ ನಮ್ಮ ಡಾಲರು ನಷ್ಟಾಂಶವು ೩೬.೪ ಮಿಲಿಯನ್ ರೂಪಾಯಿಗಳು. ಪ್ರಚಲಿತ ಲೆಕ್ಕದ ಮೇಲೆ ಇಂಡಿಯಾದ ಒಟ್ಟು ವ್ಯಾಪಾರದ ಸಾಲಸೋಲಗಳಲ್ಲಿ ನಷ್ಟಾಂಶವು ೧೯೪೭ರಲ್ಲಿ ೮೬·೪ ಕೋಟಿ ರೂಪಾಯಿಗಳು, ೧೯೪೭ರಲ್ಲಿ ೧೫೪ ಕೋಟಿ ರೂಪಾಯಿಗಳು ಮತ್ತು ೧೯೪೮ರಲ್ಲಿ ೧೨೨½ ಕೋಟಿ ರೂಪಾಯಿಗಳು.

೧೯೪೯ನೆಯ ಇಸವಿಯ ಪ್ರಾರಂಭದಲ್ಲಿ ಭಾರತದ ನಷ್ಟಾಂಶವು ಸ್ಟರ್ಲಿಂಗ್ ಕ್ಷೇತ್ರದೊಂದಿಗೆ, ಅಮೆರಿಕದೊಂದಿಗೆ ಮತ್ತು ಇತರ ದೇಶಗಳೊಂದಿಗೆ, ಏಕಕಾಲದಲ್ಲಿ ಹೆಚ್ಚಾಯಿತು. ಭಾರತವು ಅಮೆರಿಕದಿಂದ ಮಹತ್ತರ ಪ್ರಮಾಣದಲ್ಲಿ ಆಹಾರ ಧಾನ್ಯಗಳನ್ನು ಮತ್ತು

ಯಂತ್ರೋಪಕರಣಗಳನ್ನು ಆಮದುಮಾಡಿಕೊಂಡಿರುವುದರಿಂದ, ಈ ರೀತಿ ಡಾಲರು ನಷ್ಟಾಂಶ ಹೆಚ್ಚಾಗಿದೆ. ಡಾಲರು ಪ್ರದೇಶಕ್ಕೆ ನಮ್ಮ ರಫ್ತು ವ್ಯಾಪಾರದ ಪ್ರಮಾಣ ಕಡಮೆಯಾಗಿದೆ. ೧೯೪೯ ನೆಯ ಇಸವಿಯ ಆದಿಯಲ್ಲಿ ಇತರ ರಾಷ್ಟ್ರಗಳೊಂದಿಗೆ ಇಂಡಿಯಾದ ನಷ್ಟಾಂಶ ೪೦·೭ ಮಿಲಿಯರ್ ರೂಪಾಯಿಗಳಾಯಿತು. ಈ ಕ್ಷೇತ್ರದಲ್ಲಿ ಅನೇಕ ದುರ್ಲಭ ನಾಣ್ಯಗಳ ರಾಷ್ಟ್ರಗಳಿವೆ. ಈ ಕ್ಷೇತ್ರದ ಮತ್ತು ಅಮೆರಿಕದ ಒಟ್ಟು ಲೆಕ್ಕ ತೆಗೆದುಕೊಂಡರೆ, ನಮ್ಮ ದುರ್ಲಭ ನಾಣ್ಯಗಳ ಒಟ್ಟು ನಷ್ಟಾಂಶ ಅಪಾರವಾಗಿದೆ.

ಸ್ಟರ್ಲಿಂಗ್ ಕ್ಷೇತ್ರದಲ್ಲಿಯೂ ಸಹಾ ಇಂಡಿಯಾದ ನಷ್ಟಾಂಶ ಹೆಚ್ಚಾಗಿದೆ, ಗಮನಾರ್ಹವಾಗಿದೆ. ಈ ಕ್ಷೇತ್ರದಲ್ಲಿಯೂ ಸಹಾ ಇಂಡಿಯಾದ ರಫ್ತು ವ್ಯಾಪಾರಕ್ಕೆ ತೊಂದರೆ ಬಂದಿದೆ. ಆಹಾರ, ಯಂತ್ರಗಳು, ಕೈಗಾರಿಕಾ ಉಪಕರಣಗಳು ಮತ್ತು ಇತರ ಬಂಡವಾಳ ವಸ್ತುಗಳ ಆಮದು ಅತ್ಯಾವಶ್ಯಕವಾಗಿ ನಮ್ಮ ನಷ್ಟಾಂಶ ಇನ್ನೂ ವೃದ್ಧಿಯಾಗುತ್ತಿದೆ.

ಭಾರತವು ವಿದೇಶಿ ವ್ಯಾಪಾರದಲ್ಲಿ ಮುನ್ನುಗ್ಗಬೇಕು. ಇದು ವರೆವಿಗೂ ನಮ್ಮ ಸ್ಟರ್ಲಿಂಗ್ ನಿಧಿಯಿಂದ ಬಂದ ಸ್ಟರ್ಲಿಂಗ್ ಮತ್ತು ಡಾಲರ್ ಸೌಲಭ್ಯಗಳಿಂದ ಇಂಡಿಯಾ ಆಮದು ರಫ್ತುಗಳನ್ನು ಸಮ ದೂಗಿಸಿ, ಇವೆರಡರ ಅಂತರವನ್ನು ನಿವಾರಿಸಿದೆ. ಆದರೆ, ಈ ರೀತಿ ಯಾಗಿ ನಮ್ಮ ವ್ಯಾಪಾರವನ್ನು ಸಮದೂಗಿಸುವುದು ಬಹುಕಾಲ ಸಾಧ್ಯ ವಿಲ್ಲ. ಡಾಲರು ಪ್ರದೇಶದಿಂದ ಬರುವ ಸಾಮಾನುಗಳ ಆಮದನ್ನು ಕಡಮೆಮಾಡಬೇಕು. ಈ ಸನ್ನಿವೇಶದಲ್ಲಿ ರೂಪಾಯಿಯ ಮೌಲ್ಯದ ಇಳಿವರಿಯು ಸೂಕ್ತವೆಂದು ತೋರುತ್ತದೆ. ಇದರಿಂದ, ಡಾಲರು ಪ್ರದೇಶಗಳ ಆಮದು ಕಡಮೆಯಾಗುತ್ತದೆ; ಅನಾವಶ್ಯಕವಾದ ಅನೇಕ ಸಾಮಾನುಗಳ ಆಮದು ಸ್ವಾಭಾವಿಕವಾಗಿ ನಿಂತುಹೋಗುತ್ತದೆ. ಅನುಕೂಲ ವಾತಾವರಣ ಕಲ್ಪಿತವಾದರೆ, ಇಂಡಿಯಾದೇಶವು ಡಾಲರು ಕ್ಷೇತ್ರಕ್ಕೆ ಸಾಕಾದಷ್ಟು ಪ್ರಮಾಣದಲ್ಲಿ ಸಾಮಾನುಗಳನ್ನು ರಫ್ತು ಮಾಡಲು ಅವಕಾಶವಾಗುತ್ತದೆ.

ರೂಪಾಯಿಯ ಹೊರ ವಿನಿಮಯ ಬೆಲೆ ಎಷ್ಟಿರಬೇಕು? ರೂಪಾಯಿಯ ಮತ್ತು ಸ್ಟರ್ಲಿಂಗಿನ ಕೊಳ್ಳುವ ಶಕ್ತಿಯನ್ನು ಆಧಾರವಾಗಿಟ್ಟುಕೊಳ್ಳೋಣ. ನಾಣ್ಯಮೌಲ್ಯದ ಇಳಿವರಿಗಿಂತ ಹಿಂದೆ ಭಾರತದಲ್ಲಿ ಸಗಟುವ್ಯಾಪಾರ ಬೆಲೆಯ ಸೂಚಿ ೩೮೭ ಮತ್ತು ಬ್ರಿಟನ್ನಿನಲ್ಲಿ ೨೦೮. ಈ ನಾಣ್ಯಗಳ ಕೊಳ್ಳುವ ಶಕ್ತಿಯ ಸಮತೂಕದ ಆಧಾರದ ಮೇಲೆ ರೂಪಾಯಿಯ ಸ್ಟರ್ಲಿಂಗ್ ವಿನಿಮಯ ದರ ಸುಮಾರು ೧೦ ಪೆನ್ನಿಗಳು. ಜೀವನದ ವೆಚ್ಚವನ್ನು ತೆಗೆದುಕೊಂಡರೆ ಈ ವಿನಿಮಯ ಬೆಲೆ ಕೇವಲ ೬ ಪೆನ್ನಿಗಳು ಮಾತ್ರ. ಇದೇ ಕಾಲದಲ್ಲಿ ಅಮೆರಿಕದಲ್ಲಿ ವ್ಯಾಪಾರ ಬೆಲೆಯ ಸೂಚಿ ೧೮೦. ಈ ಅಧಾರದ ಮೇಲೆ ಒಂದು ರೂಪಾಯಿಯ ಡಾಲರು ವಿನಿಮಯ ಬೆಲೆ ಕೇವಲ ೧೫ ಸೆಂಟುಗಳು ಮಾತ್ರ; ಜೀವನದ ವೆಚ್ಚವನ್ನು ಹೋಲಿಸಿದರೆ ಇದು ೧೭ ಸೆಂಟುಗಳಾಗುತ್ತದೆ. ಈಗ ಇರುವ ವಿನಿಮಯ ಬೆಲೆಗಳು ರೂಪಾಯಿ—ಸ್ಟರ್ಲಿಂಗ್ ಬೆಲೆ ೧೮ ಪೆನ್ನಿಗಳು, ರೂಪಾಯಿ ಡಾಲರು ವಿನಿಮಯ ಬೆಲೆ ೨೧ ಸೆಂಟುಗಳು. ರೂಪಾಯಿಯ ಡಾಲರು ವಿನಿಮಯದ ಬೆಲೆಯ ಇಳಿವರಿಯಿಂದ, ರೂಪಾಯಿಯ ಮೇಲ್ಮಟ್ಟದ ವಿನಿಮಯ ಬೆಲೆಯು ಕೆಳಗಿಳಿದಿದೆ. ಆದರೆ, ರೂಪಾಯಿ ಸ್ಟರ್ಲಿಂಗ್ ವಿನಿಮಯ ಬೆಲೆ ಕೇವಲ ಅಸ್ವಾಭಾವಿಕ. ಸಾಮಾನ್ಯವಾಗಿ, ಈಗ ಅನೇಕ ವರ್ಷಗಳಿಂದ ರೂಪಾಯಿಯ ಸ್ಟರ್ಲಿಂಗ್ ವಿನಿಮಯ ಬೆಲೆಯು ಉದ್ದಿಶ್ಯಪೂರ್ವಕವಾಗಿ ಮೇಲ್ಮಟ್ಟದಲ್ಲಿರಿಸಲಾಗಿದೆ. ನಮ್ಮ ರಾಜಕೀಯ ಅಧೀನತೆಯೊಂದಿಗೆ ಆರ್ಥಿಕ ಪರಾಧೀನತೆಯೂ ಬೆಳೆಯುತ್ತಾ ಬಂತು. ಆದರೆ, ಸ್ವತಂತ್ರ ಭಾರತದಲ್ಲಿ ಈ ರೀತಿಯಾದ ಅಸ್ವಾಭಾವಿಕ ಹಾಗೂ ಕೃತ್ರಿಮವಾದ ನಾಣ್ಯವಿನಿಮಯ ಬೆಲೆಗಳಿಗೆ ಅವಕಾಶವಿರಬಾರದು. ೧೮ ಪೆನ್ನಿಗಳ ವಿನಿಮಯ ದರವನ್ನು ಬದಲಾಯಿಸಿ, ಸೂಕ್ತವಾದ ರೂಪಾಯಿ ಸ್ಟರ್ಲಿಂಗ್ ವಿನಿಮಯ ದರವನ್ನು ನಿರ್ಧರಿಸುವುದು ಅತ್ಯಾವಶ್ಯಕವಾಗಿ ಕಾಣುತ್ತದೆ. ಇದರ ಸಂಬಂಧದಲ್ಲಿ ಬರುವ ಎಡರುತೊಡರುಗಳಿಗೆ ಹೆದರಿದರೆ, ಪರಿಸ್ಥಿತಿ ಸುಧಾರಿಸುವುದಿಲ್ಲ.

ಪ್ರಕೃತ ಪರಿಸ್ಥಿತಿಯಲ್ಲಿ ನಮ್ಮ ರೂಪಾಯಿಯ ಮೂಲ, ಬೆಳವಣಿಗೆ ಹಾಗೂ ಅದರ ಸ್ಥಾನಮಾನಗಳ ಪರಿಶೀಲನೆ ಬಹು ಸ್ವಾರಸ್ಯವಾದ ವಿಷಯ. ನಮ್ಮ ದೇಶದಲ್ಲಿ, ೧೮೩೫ನೆಯ ಇಸವಿಯವರೆಗೆ ಚಿನ್ನದ ಮತ್ತು ಬೆಳ್ಳಿಯ ನಾಣ್ಯಗಳೆರಡೂ ಬಳಕೆಯಲ್ಲಿದ್ದುವು. ಅದುವರೆವಿಗೂ ನಮ್ಮ ದೇಶದಲ್ಲಿ ದ್ವಿಲೋಹಪದ್ಧತಿ (Bimetalism) ಇತ್ತು. ಮಹಮ್ಮದೀಯರ ಆಡಳಿತದಲ್ಲಿ ಉತ್ತರ ಇಂಡಿಯಾದಲ್ಲಿ ಬೆಳ್ಳಿಯ ನಾಣ್ಯಗಳ ಚಲಾವಣೆ ಹೆಚ್ಚಾಗಿತ್ತು; ದಕ್ಷಿಣ ಇಂಡಿಯಾದಲ್ಲಿ ಚಿನ್ನದ ನಾಣ್ಯಗಳ ಚಲಾವಣೆ ಬಹು ಮುಖ್ಯವಾಗಿತ್ತು. ೧೯ನೆಯ ಶತಮಾನದ ಆದಿಯಲ್ಲಿ, ಅನೇಕ ಬೆಳ್ಳಿಯ ಮತ್ತು ಚಿನ್ನದ ನಾಣ್ಯಗಳು ಚಲಾವಣೆಯಲ್ಲಿದ್ದು, ಒಂದು ಸ್ವತಂತ್ರವಾದ (Monometalism) ವ್ಯವಸ್ಥೆ ಇರಲಿಲ್ಲ. ಕ್ರಮೇಣ ನಾಣ್ಯ ಸುಧಾರಣೆಯ ಫಲವಾಗಿ, ೧೮೩೫ರಲ್ಲಿ ಏಕಲೋಹ ಪದ್ಧತಿಯು ಸ್ಥಾಪಿತವಾಗಿ, ಒಂದೇ ನಮೂನೆಯ ರೂಪಾಯಿ ಚಲಾವಣೆಗೆ ಬಂದಿತು. ಚಿನ್ನದ ನಾಣ್ಯಗಳ ತಯಾರಿಕೆ ನಿಂತು ಹೋಗಿ, ಬೆಳ್ಳಿಯ ನಾಣ್ಯಗಳ ಚಲಾವಣೆ ಹೆಚ್ಚಾಯಿತು. ಈ ರೀತಿಯಾಗಿ, ನಮ್ಮ ದೇಶದಲ್ಲಿ ಬೆಳ್ಳಿಯ ಏಕನಾಣ್ಯ ಪದ್ಧತಿ ಸ್ಥಾಪಿತವಾಗಿ, ಬೆಳ್ಳಿ ಭಂಗಾರದ ದ್ವಿಲೋಹಪದ್ಧತಿಯು ನಿಂತುಹೋಯಿತು.

ನಮ್ಮ ರೂಪಾಯಿಯು ಬ್ರಿಟನ್ನಿನ ನಾಣ್ಯವಾದ ಪೌಂಡಿಗೆ ಅನೇಕ ವರ್ಷಗಳ ಕಾಲ ಅಧೀನವಾಗಿತ್ತು. ಸೆಪ್ಟೆಂಬರ್ ೨೧ನೇ ತಾರೀಖು, ೧೯೩೧ರವರೆಗೆ ನಮ್ಮ ದೇಶದ ಹಣವ್ಯವಸ್ಥೆಯು ಹೊನ್ನಿನ ಹಣಪದ್ಧತಿಯ ಆಧಾರದಮೇಲೆ ನಿಂತಿದ್ದಿತೆಂದು ಹೇಳಬಹುದು. ೧೮೯೯ ರಿಂದ ೧೯೨೬ರ ವರೆಗೆ, ಸ್ವರ್ಣ ವಿನಿಮಯ ಪದ್ಧತಿಯು ಬಳಕೆಯಲ್ಲಿತ್ತು. ಈ ಪದ್ಧತಿಯಂತೆ, ಭಾರತಕ್ಕೆ ಆವಶ್ಯಕವಾದಾಗ ವಿದೇಶಿ ಆರ್ಥಿಕ ವ್ಯವಹಾರಕ್ಕೆ ಸ್ಟರ್ಲಿಂಗನ್ನು ಪಡೆಯಲು ಅವಕಾಶವಿತ್ತು. ಅಂದರೆ, ನಮ್ಮ ರೂಪಾಯಿಯು ಸ್ಟರ್ಲಿಂಗಿನೊಂದಿಗೆ ಹೊಂದಿಕೆಯಾಗಿತ್ತು. ಇವೆರಡು ನಾಣ್ಯಗಳ ಪರಸ್ಪರ ಸಂಬಂಧವು ಹಾಸುಹೊಕ್ಕಾಗಿ ಬೆಳೆದು, ರೂಪಾಯಿಯು ಸ್ಟರ್ಲಿಂಗಿನ ಸೇವಕನಂತಿತ್ತು. ೧೮೯೪ರಲ್ಲಿ ರೂಪಾಯಿಯ ದರ ೧ ಷಿಲ್ಲಿಂಗ್ 1½ ಪೆನ್ನಿಗಳಿತ್ತು;

೧೮೯೮ಕ್ಕೆ ಇದು ೧ ಷಿಲ್ಲಿಂಗ್ ೪ ಪೆನ್ನಿಗಳಿಗೆ ಏರಿತು. ಮಾರ್ಚಿ ೧೯೨೭ರ ವರೆಗೆ ರೂಪಾಯಿ-ಸ್ಟರ್ಲಿಂಗ್ ವಿನಿಮಯ ದರ ೧ ಷಿಲ್ಲಿಂಗ್ ೪ ಪೆನ್ನಿಗಳಾಗಿದ್ದಿತು.

ಆಗಸ್ಟ್ ೪ ನೇ ತಾರೀಖು, ೧೯೨೬ ರಲ್ಲಿ ಪ್ರಕಟವಾದ ಹಿಲ್ಟನ್-ಯಂಗ್ ಸಮಿತಿಯ ವರದಿಯು ಸ್ವರ್ಣವಿನಿಮಯ ಪದ್ಧತಿಯನ್ನು ಕೂಲಂಕಷವಾಗಿ ಪರೀಕ್ಷಿಸಿ, ಈ ಪದ್ಧತಿಯು ಭಾರತದ ಹಣಕಾಸಿನ ವ್ಯವಸ್ಥೆಗೆ ಸಾಧಕವಾಗಿಲ್ಲವೆಂದು ನಿರ್ಧಾರಕ್ಕೆ ಬಂದಿತು. ಭಾರತದ ಆಗಿನ ಆರ್ಥಿಕ ವಾತಾವರಣದಲ್ಲಿ ಪರಿಶುದ್ಧವಾದ ಹೊನ್ನಿನ ಹಣ ಪದ್ಧತಿ ಮಾತ್ರ ಉಚಿತವೆಂದು ಈ ಸಮಿತಿಯು ತೀರ್ಮಾನಕ್ಕೆ ಬಂದಿತು. ಚಿನ್ನದ ನಾಣ್ಯಗಳ ಚಲಾವಣೆಯಿಲ್ಲದೆ, ಚಿನ್ನದ ಹಣಪದ್ಧತಿಯನ್ನು ರೂಪುಗೊಳಿಸಲು ಸಾಧ್ಯವೆಂದು ಈ ಸಮಿತಿಯ ದೃಢನಂಬಿಕೆ. ಚಲಾವಣೆಯಲ್ಲಿ ನೋಟುಗಳು ಮತ್ತು ಬೆಳ್ಳಿಯ ರೂಪಾಯಿಗಳಿದ್ದು, ಇವನ್ನು ಚಿನ್ನದಲ್ಲಿ ವಿನಿಮಯಮಾಡುವ ಕ್ರಮದಿಂದ ಭಾರತದ ರೂಪಾಯಿಯ ಭದ್ರತೆಯನ್ನು, ಶಕ್ತಿಯನ್ನು ಸಾಧಿಸಬಹುದು, ಎಂದು ಈ ಸಮಿತಿಯು ಶಿಫಾರ್ಸ್‌ಮಾಡಿತು. ಇದು ಚಿನ್ನದಗಟ್ಟಿಯ ಪದ್ಧತಿ. ರೂಪಾಯಿಯ ವಿನಿಮಯದ ಸಮಬೆಲೆಯ ಸಂಬಂಧದಲ್ಲಿ ಚಿನ್ನವನ್ನು ಕೊಳ್ಳುವ ಮತ್ತು ಮಾರುವ ಬೆಲೆಗಳನ್ನು ನಿರ್ಧರಿಸಬೇಕೆಂದು ಈ ಸಮಿತಿಯು ವರದಿಮಾಡಿತು. ಸ್ವರ್ಣ ವಿನಿಮಯ ಪದ್ಧತಿಯನ್ನು ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ಹೇಳಿದ ಈ ಸಮಿತಿಯ ವರದಿಯನ್ನು ಭಾರತೀಯರು ಆಹ್ವಾನಿಸಿದರು. ಆದರೆ ಸ್ವರ್ಣಗಟ್ಟಿ ಪದ್ಧತಿಯಲ್ಲಿ ಭಾರತೀಯರಿಗೆ ವಿಶ್ವಾಸ ಬರಲಿಲ್ಲ. ಪರಿಶುದ್ಧವಾದ ಹೊನ್ನಿನ ಹಣಪದ್ಧತಿಯು ಸಾಧ್ಯವಾಗದ ಪಕ್ಷದಲ್ಲಿ, ಫಲದಾಯಕವಾದ ಸ್ವರ್ಣವಿನಿಮಯ ಪದ್ಧತಿಯಿಂದ ಭಾರತದ ಸ್ಥಿತಿಗತಿಗಳು ಸರಿಹೋಗುತ್ತಿದ್ದವು.

ಸ್ಟರ್ಲಿಂಗ್-ರೂಪಾಯಿಯ ವಿನಿಮಯ ಬೆಲೆಯನ್ನು ೧ ಷಿಲ್ಲಿಂಗ್ ೬ ಪೆನ್ನಿಗಳಿಗೆ ಏರಿಸಿ (೮·೪೭೫ ಗ್ರೈನ್ಸ್ ಚಿನ್ನ), ರೂಪಾಯಿಯ ಬೆಲೆಯನ್ನು ಚಿನ್ನದ ಸಂಬಂಧದಲ್ಲಿ ಸ್ಥಿರಗೊಳಿಸಬೇಕೆಂಬುದು ಈ ಸಮಿತಿಯ ಇನ್ನೊಂದು ಮುಖ್ಯ ಸಲಹೆ. ಈ ವಿನಿಮಯ ದರವು ಒಂದು

ವರ್ಷದಿಂದ ಕಾರ್ಯಕ್ಷೇತ್ರದಲ್ಲಿದ್ದುದರಿಂದ, ಭಾರತದ ಸಾಮಾನುಗಳ ಬೆಲೆಗಳು ಪ್ರಪಂಚದ ಬೆಲೆಗಳೊಂದಿಗೆ ಸಾಮರಸ್ಯಗೊಂಡಿವೆ; ಇದ ರಲ್ಲಿ ಏನಾದರೂ ಬದಲಾವಣೆಯಾದರೆ ಆರ್ಥಿಕ ರಚನೆಯು ವ್ಯವಸ್ಥಿ ಕಷ್ಟವಾಗಿ ಬಹುಕಾಲ ಆರ್ಥಿಕತೊಂದರೆಗಳೊದಗುತ್ತವೆ ಎಂದು ಈ ಸಮಿತಿಯ ಅಭಿಪ್ರಾಯ. ಇರುವ ಹಣ ಪ್ರಮಾಣದ ಹಾಗೂ ಹೊರ ಬೆಲೆಗಳೊಂದಿಗೆ ಸಾಮರಸ್ಯವನ್ನು ಪಡೆದ ಬೆಲೆಯನ್ನು ಸಾಧಿಸಬಲ್ಲ ವಿನಿಮಯ ದರವೇ ಸ್ವಾಭಾವಿಕವಾದುದು ಎಂದು ಈ ಸಮಿತಿಯ ನಂಬಿಕೆ. ಆದ್ದರಿಂದ ೧ ಷಿಲ್ಲಿಂಗ್ ೬ ಪೆನ್ನಿಗಳ ವಿನಿಮಯ ದರ ಸ್ವಾಭಾವಿಕ ದರ; ಇದು ಸ್ಥಿರವಾಗಿರಬಲ್ಲದೆಂದು ಈ ಸಮಿತಿಯು ಸಾಧಿಸಿತು. ಈ ಸಮಿತಿಯ ಒಬ್ಬ ಸದಸ್ಯರಾದ ಸರ್ ಪುರುಷೋ ತ್ತಮದಾಸ್ ಥಾಕೂರ್‌ದಾಸರವರು ಈ ಅಭಿಪ್ರಾಯವನ್ನು ವಿರೋ ಧಿಸಿ, ೧ ಷಿಲ್ಲಿಂಗ್ ೬ ಪೆನ್ನಿಗಳ ವಿನಿಮಯ ದರದ ಸಿದ್ಧಾಂತದಲ್ಲಿ ತಮ್ಮ ಆಶ್ಚರ್ಯವನ್ನು ಸೂಚಿಸಿದ್ದರು. ಸೆಪ್ಟೆಂಬರ್ ಮತ್ತು ಅಕ್ಟೋ ಬರ್ ೧೯೩೯ರಲ್ಲಿ ಯುದ್ಧಕ್ಕಿಂತ ಹಿಂದಿನ ವಿನಿಮಯ ಬೆಲೆಯಾದ ೧ ಷಿಲ್ಲಿಂಗ್ ೪ ಪೆನ್ನಿಗಳ ದರದಲ್ಲಿ ರೂಪಾಯಿಯ ಬೆಲೆಯನ್ನು ಸ್ಥಿರ ಗೊಳಿಸುವ ಸದವಕಾಶವನ್ನು ಸರಕಾರವು ಉಪಯೋಗಿಸಿಕೊಳ್ಳಲಿಲ್ಲ ವೆಂಬುದನ್ನು ತೋರಿಸಿದ್ದಾರೆ. ಇವರ ವಾದಸರಣಿ ಹೀಗಿದೆ. ಒಂದ ನೆಯದಾಗಿ, ೧ ಷಿಲ್ಲಿಂಗ್ ೬ ಪೆನ್ನಿಗಳ ವಿನಿಮಯ ದರದಿಂದ ಪ್ರಚಲಿತ ಬೆಲೆಗಳಿಗೂ, ಕಾರ್ಮಿಕ ವೇತನಗಳಿಗೂ ಸಾಮರಸ್ಯವುಂಟಾಗುವು ದಿಲ್ಲ. ಎರಡನೆಯದಾಗಿ, ಈ ವಿನಿಮಯ ದರದಿಂದ ವಿದೇಶಿ ಉದ್ಯ ಮಿಗೆ ಅಪ್ರತ್ಯಕ್ಷವಾಗಿ ಸೇಕಡ ೧೨½ಯಷ್ಟು ಲಾಭ ಸಿಕ್ಕುವುದರಿಂದ ಭಾರತದ ಕೈಗಾರಿಕೆಗಳ ಪ್ರತಿಪೋಟಿಶಕ್ತಿಗೆ ತೊಂದರೆಯಾಗುತ್ತದೆ. ಮೂರನೆಯದಾಗಿ ವಿನಿಮಯದ ಬದಲಾವಣೆಯಿಂದ ರೈತ ಸಾಲಗಾರ ರಿಗೆ ಸೇಕಡ ೧೨½ ಯಷ್ಟು ಹೆಚ್ಚಿನ ಹೊರೆಯಾಗುತ್ತದೆ. ರೈತರ ಸಾಲಗಳು ಹಳೆಯ ಸಾಲಗಳಾದ್ದರಿಂದ, ಅವು ೧ ಷಿಲ್ಲಿಂಗ್ ೪ ಪೆನ್ನಿಗಳ ವಿನಿಮಯದ ಆಧಾರದ ಮೇಲೆ ತೆಗೆದುಕೊಂಡವೆಂಬುದನ್ನು ಹೇಳ ಬೇಕಾಗಿಲ್ಲ. ನಾಲ್ಕನೆಯದಾಗಿ, ೧ ಷಿಲ್ಲಿಂಗ್ ೪ ಪೆನ್ನಿಯ ವಿನಿಮಯ

ದಿಂದ ನಮ್ಮ ಸಾರ್ವಜನಿಕ ಹಣಕಾಸಿನ ಮೇಲೆ ದುಷ್ಪರಿಣಾಮಗಳಾಗುತ್ತವೆಂಬುದು ಕೇವಲ ಅತಿಶಯೋಕ್ತಿ. ಐದನೆಯದಾಗಿ, ೧ಷಿಲ್ಲಿಂಗ್ ೬ ಪೆನ್ನಿಗಳ ವಿನಿಮಯದಿಂದ ಶೇಕಡ ೭೯ ಜನರಿಗೆ ಆಗುವ ತೊಂದರೆಗಳ ಪರಂಪರೆಯಲ್ಲಿ, ೧ ಷಿಲ್ಲಂಗ್ ೪ ಪೆನ್ನಿಯಿಂದ ಕಡಮೆ ಸಂಬಳದ ಸರಕಾರಿ ನೌಕರರ ಸೇಕಡ ೨೧ ಜನರಿಗೆ ಆಗುವ ತೊಂದರೆಗಳು ಕೇವಲ ಕಡಮೆ. ತಗ್ಗಿದ ವಿನಿಮಯದಿಂದ ಕೈಗಾರಿಕೆ ಹಾಗೂ ವ್ಯವಸಾಯ ಪ್ರಗತಿಹೊಂದುತ್ತವೆ; ಮೇಲ್ಮಟ್ಟದ ವಿನಿಮಯ ದರದಿಂದ ಎರಡಕ್ಕೂ ತೊಂದರೆ. ಆರನೆಯದಾಗಿ, ೧೯೧೪-೧೮ ರ ಯುದ್ಧಕ್ಕಿಂತ ಹಿಂದೆ ಇದ್ದ ೧ ಷಿಲ್ಲಿಂಗ್ ೪ ಪೆನ್ನಿಗಳ ದರವನ್ನು ಇತರ ದೇಶಗಳ ನಾಣ್ಯವಿನಿಮಯ ದರಗಳ ಬದಲಾವಣೆಯೊಂದಿಗೆ ಬದಲಾಯಿಸಲಾಯಿತು. ಯುದ್ಧಾನಂತರ, ಇತರ ರಾಷ್ಟ್ರಗಳು ಮೊದಲಿನ ವಿನಿಮಯ ದರಗಳನ್ನು ಪುನಃ ಸ್ಥಾಪಿಸಿವೆ. ಆದ್ದರಿಂದ, ೧ ಷಿಲ್ಲಿಂಗ್ ೪ ಪೆನ್ನಿಗಳ ದರ ಭಾರತಕ್ಕೆ ಸೂಕ್ತವಾದುದು, ವಿಹಿತವಾದುದು.

೧ ಷಿಲ್ಲಿಂಗ್ ೬ ಪೆನ್ನಿ-೧ಷಿಲ್ಲಿಂಗ್ ೪ ಪೆನ್ನಿಗಳ ವಿನಿಮಯದರದಲ್ಲಿ ವಿಷಯವಾಗಿ ವಿಪುಲ ಚರ್ಚೆ ನಡೆದು, ಕೊನೆಗೆ ಮಾರ್ಚಿ ೧೯೨೭ ರ ಹಣಕಾಸಿನ ಕಾನೂನಿನಂತೆ ೧ ಷಿಲ್ಲಿಂಗ್ ೬ ಪೆನ್ನಿಗಳ ವಿನಿಮಯ ದರವು ಸರಕಾರದಿಂದ ಅಂಗೀಕಾರವಾಯಿತು. ಈ ವಿನಿಮಯ ದರದಂತೆ ಸರಕಾರವು ಬೊಂಬಾಯಿಯ ಟಂಕಸಾಲೆಯಿಂದ ೪೦ ತೊಲಗಳ ಗಟ್ಟಿಯಲ್ಲಿ ಒಂದು ತೊಲಕ್ಕೆ ೨೧ ರೂ ೩ ಆಣೆ ೧೦ ಕಾಸಿನಂತೆ ಅಮಿತ ಪ್ರಮಾಣದಲ್ಲಿ ಚಿನ್ನವನ್ನು ಕೊಳ್ಳುವುದೆಂದು ಪ್ರಕಟವಾಯಿತು. ಇದೇ ಕಾನೂನಿನಿಂದ ಸವರನ್ನುಗಳ ಮತ್ತು ಅರ್ಧ ಸವರನ್ನುಗಳ ಚಲಾವಣೆ ನಿಂತುಹೋಯಿತು. ಅನಂತರ ಸೆಪ್ಟೆಂಬರ್ ೧೯೩೧ರಲ್ಲಿ ಬ್ರಿಟನ್ನು ಹೊನ್ನಿನ ಹಣ ಪದ್ಧತಿಯನ್ನು ತ್ಯಜಿಸಿದಾಗ ನಮ್ಮ ರೂಪಾಯಿಯೂ ಸಹಾ ಆದೇ ರೀತಿಯನ್ನನುಸರಿಸಿ, ಸ್ಟರ್ಲಿಂಗ್‌ನೊಡನೆ ಸಂಬಂಧವನ್ನು ಬೆಳೆಸಿತು. ರೂಪಾಯಿಯ ವಿನಿಮಯ ಬೆಲೆ ಹದಿನೆಂಟು ಪೆನ್ನಿ ಸ್ಟರ್ಲಿಂಗು ಆಯಿತು. ರೂಪಾಯಿಗೂ, ಸ್ಟರ್ಲಿಂಗಿಗೂ ಇದ್ದ ಪರಸ್ಪರ ಸಂಬಂಧ ಬೇರೆ ಯಾವ ಎರಡು ದೇಶಗಳ ನಾಣ್ಯಗಳಿಗೂ ಇರಲಿಲ್ಲ.

ಸಾರ್ವಜನಿಕ ಅಭಿಪ್ರಾಯಕ್ಕೆ ವಿರುದ್ಧವಾಗಿ, ರೂಪಾಯಿಗೂ, ಸ್ಟರ್ಲಿಂಗಿಗೂ ನಿಕಟ ಸಂಬಂಧ ಕಲ್ಪಿತವಾಯಿತು. ಈ ಸಂಬಂಧವು ದೇಶದ ಆರ್ಥಿಕ ಜೀವನಕ್ಕೆ ಸಂಬಂಧಿಸಿದ ಒಂದು ಬಹುಮುಖ್ಯವಾದ ಅಂಶವಾಗಿದೆ. ಏಕೆಂದರೆ, ಈ ಸಂಬಂಧದಿಂದಾಗುವ ರೂಪಾಯಿಯ ಪರನಾಣ್ಯವಿನಿಮಯ ದರವು ದೇಶದ ಆರ್ಥಿಕ ಜೀವನದ ಸರ್ವಕ್ಷೇತ್ರಗಳಲ್ಲಿಯೂ ತನ್ನ ಪ್ರಭಾವವನ್ನು ಬೀರಿದೆ. ರೂಪಾಯಿ-ಸ್ಟರ್ಲಿಂಗು ಸಂಬಂಧವು ನಮ್ಮ ದೇಶದ ಆರ್ಥಿಕ ಅಭಿವೃದ್ಧಿಗೆ ಬಹು ದೊಡ್ಡ ಕಂಟಕವಾಗಿ ಪರಿಣಮಿಸಿ ನಮ್ಮ ದೇಶವು ಆರ್ಥಿಕ ಪಥದಲ್ಲಿ ಹಿಂದುಳಿದಿರುವುದಕ್ಕೆ ಒಂದು ಮಹತ್ತರ ಕಾರಣವಾಯಿತು. ರೂಪಾಯಿ-ಸ್ಟರ್ಲಿಂಗ್ ಸಂಬಂಧದಲ್ಲಿ ಅನೇಕ ಲೋಪದೋಷಗಳಿವೆಯೆಂದು ಸಾರ್ವಜನಿಕ ಅಭಿಪ್ರಾಯ. ಒಂದನೆಯದಾಗಿ, ಇಂಗ್ಲೆಂಡಿನ ಸ್ಟರ್ಲಿಂಗಿನ ಏರಿಳಿತಗಳ ಪರಿಣಾಮಗಳನ್ನೆಲ್ಲ, ನಮ್ಮ ರೂಪಾಯಿಯು ಅನುಭವಿಸಬೇಕಾಯಿತು. ಎರಡನೆಯದಾಗಿ, ರೂಪಾಯಿಯ ಚಿನ್ನದ ವಿನಿಮಯ ಬೆಲೆಯ ಇಳಿತದಿಂದ ಇಂಡಿಯಾದ ವಿದೇಶಿ ವ್ಯಾಪಾರವು ಹೆಚ್ಚಾದರೂ, ಬೇರೆ ದೇಶಗಳಿಂದ ಸಾಮಾನುಗಳನ್ನು ನಮ್ಮ ದೇಶವು ಆಮದು ಮಾಡಿಕೊಳ್ಳುವುದಕ್ಕೆ ಅಡಚಣೆಯಾಗಿ, ಇಂಗ್ಲೆಂಡಿಗೆ ಒಂದು ಅಪೂರ್ವ ವ್ಯಾಪಾರ ಅನುಕೂಲ ಲಭಿಸಿತು. ಕೊನೆಯದಾಗಿ ಚಿನ್ನದ ಬೆಲೆ ರೂಪಾಯಿಗಳಲ್ಲಿ ಹೆಚ್ಚಾಗಿ, ನಮ್ಮ ದೇಶದಿಂದ ಚಿನ್ನವು ಅಪಾರವಾಗಿ ಸಾಗಿಹೋಗಲು ಕಾರಣವಾಯಿತು.

ರೂಪಾಯಿ-ಸ್ಟರ್ಲಿಂಗ್ ಸಂಬಂಧದಿಂದ ನಮ್ಮ ದೇಶದ ಆರ್ಥಿಕ ಪ್ರಗತಿಗೆ ತೊಂದರೆಯು ಹೆಚ್ಚಾಯಿತೆಂದು ಧಾರಾಳವಾಗಿಹೇಳಬಹುದು. ಈ ಸಂಬಂಧದಿಂದ ನಮ್ಮ ದೇಶಕ್ಕೆ ಅನೇಕ ಅನುಕೂಲಗಳಾಗಿವೆ ಎಂದು ಸರಕಾರದ ಅಭಿಪ್ರಾಯವಿತ್ತು. ಆದರೆ ಈ ಸಂಬಂಧಯುಕ್ತವೂ ಅಲ್ಲ; ಆವಶ್ಯಕವೂ ಅಲ್ಲ. ಸ್ಟರ್ಲಿಂಗ್ ರಥದ ಚಕ್ರಗಳಿಗೆ ರೂಪಾಯಿಯನ್ನು ಬಿಗಿಯಾಗಿ ಕಟ್ಟಿದ್ದು ದೇಶದ ಆರ್ಥಿಕ ಹಿತಕ್ಕೆ ವಿರುದ್ಧವಾಗಿತ್ತು. ಮುಖ್ಯವಾಗಿ, ಇದರಿಂದ ನಮ್ಮ ದೇಶದ ಚಿನ್ನವು ಪರದೇಶಗಳಿಗೆ ವಿಶೇಷವಾಗಿ ಸಾಗಿಹೋಯಿತು. ಸ್ಟರ್ಲಿಂಗಿನ ಬೆಲೆ ಕಡಮೆ

ಯಾಗುತ್ತಾ ಬಂದು, ಚಿನ್ನದ ಬೆಲೆ ಸ್ವಾಭಾವಿಕವಾಗಿ ಏರಿತು. ನಮ್ಮ ರೂಪಾಯಿಯೂ ಸಹಾ ಸ್ಟರ್ಲಿಂಗಿನ ಜೊತೆಯಲ್ಲಿ ಬೆಲೆಯ ಇಳಿತದಲ್ಲಿ ಅನಾವಶ್ಯಕವಾಗಿ ಭಾಗವಹಿಸಬೇಕಾಯಿತು. ಇದರಿಂದ, ಚಿನ್ನದ ಬೆಲೆಯು ಅತಿ ಏರಿಹೋಗಿ, ಹೊನ್ನಿನ ಆಧಾರದ ಹಣ ಪದ್ಧತಿಯುಳ್ಳ ಅಮೆರಿಕ ಮತ್ತು ಫ್ರಾನ್ಸ್ ದೇಶಗಳಿಗೆ, ಅಪಾರವಾಗಿ ಚಿನ್ನವು ಸಾಗಿ ಹೋಯಿತು. ಸರಕಾರದವರು ಚಿನ್ನದ ಮಾರಾಟಕ್ಕೆ ಯಾವ ನಿರ್ಬಂಧ ವನ್ನೂ ಹಾಕಲಿಲ್ಲ. ಈ ರೀತಿಯಾಗಿ ಚಿನ್ನವು ನಿರಾತಂಕವಾಗಿ, ಸ್ವೇಚ್ಛೆ ಯಾಗಿ ಪರದೇಶಗಳಲ್ಲಿ ಮಾರಾಟವಾಯಿತು. ೧೯೩೧ನೆಯ ಇಸವಿ ಯಿಂದ ೧೯೪೦ರ ವರೆಗೆ, ನಮ್ಮ ದೇಶವು ಸುಮಾರು ೩೫೧.೪ ಕೋಟಿ ರೂಪಾಯಿಗಳ ಬೆಲೆಯ ಚಿನ್ನವನ್ನು ಮಾರಾಟ ಮಾಡಿತು. ದೇಶದ ಕೈಗಾರಿಕಾ ಸಂಸ್ಥೆಗಳು, ವಾಣಿಜ್ಯ ಸಂಸ್ಥೆಗಳು ಮತ್ತು ಇತರ ಪ್ರಮುಖ ವ್ಯಕ್ತಿಗಳು, ಚಿನ್ನದ ಅಪಾರ ಮಾರಾಟವನ್ನು ವಿರೋಧಿಸಿದರು. ಚಿನ್ನದ ಮಾರಾಟದಿಂದ ನಮ್ಮ ದೇಶದ ಅರ್ಥಿಕಸ್ಥಿತಿಯು ತಲೆಕೆಳಕಾಗಿ, ದೇಶದ ಅನೇಕ ಬ್ಯಾಂಕುಗಳ ವ್ಯವಹಾರಗಳಿಗೆ ಅಡಚಣೆಯಾಗಿ ಅನೇಕ ವರ್ಷಗಳಿಂದ ಕೂಡಿಸಿದ ದೇಶದ ಸಂಪತ್ತು ಸೂರೆಯಾಯಿತು. ಆದ್ದ ರಿಂದ, ಈ ಸಂಬಂಧವನ್ನು ತಪ್ಪಿಸಿ, ರೂಪಾಯಿಗೆ ಸ್ವತಂತ್ರವಾದ ಅಂತಸ್ತನ್ನು ನಿರ್ಮಿಸಲು ಪ್ರಯತ್ನಗಳು ನಡೆದವು.

ಇಂಡಿಯಾ ಅಂತರ ರಾಷ್ಟ್ರೀಯ ಆರ್ಥಿಕ ನಿಧಿಯ ಸದಸ್ಯ ರಾಷ್ಟ್ರವಾಗಿ ಸೇರಲು ನಿಶ್ಚಯಿಸಿದಾಗ, ರೂಪಾಯಿಯ ವಿನಿಮಯ ದರದ ಸಮ ಬೆಲೆಯನ್ನು ಚಿನ್ನದಲ್ಲಾಗಲಿ, ಅಮೆರಿಕದ ಡಾಲರು ಗಳಲ್ಲಾಗಲಿ, ಸೂಚಿಸಬೇಕಾಗಿ ಆರ್ಥಿಕ ಸಂಸ್ಥೆಯು ಕೇಳಿತು. ಅಂತರ ರಾಷ್ಟ್ರೀಯ ಹಣ ಸಂಸ್ಥೆಯು ಒದಗಿಸಿದ ಅವಕಾಶವನ್ನು ಇಂಡಿಯಾ ಸರಕಾರವು ಉಪಯೋಗಿಸಿಕೊಂಡು, ಸ್ಟರ್ಲಿಂಗಿನ ಸಂಬಂಧವನ್ನು ತ್ಯಜಿಸಿ, ರೂಪಾಯಿಗೂ ಚಿನ್ನಕ್ಕೂ ನೇರವಾದ ಸಂಬಂಧವನ್ನು ಕಲ್ಪಿಸಲು ಅನುಕೂಲವಾಯಿತು. ಆರ್ಥಿಕ ಸಂಸ್ಥೆಯ ಇತರ ಸದಸ್ಯ ರಾಷ್ಟ್ರಗಳಂತೆ, ಇಂಡಿಯ ಅಕ್ಟೋಬರ್ ೧೨ನೇ ತಾರೀಖು, ೧೯೪೬ರ ಒಳಗೆ ವಿನಿಮಯ ಬೆಲೆಯನ್ನು ತಿಳಿಸಬೇಕಾಗಿತ್ತು. ಆಗ ರೂಪಾ

ಯಿಯ ವಿನಿಮಯ ದರದ ಸಮ ಬೆಲೆಯನ್ನು ನಿರ್ಧರಿಸುವುದು ಬಹು ಕಷ್ಟವಾದ ಸಮಸ್ಯೆಯಾಯಿತು. ಆಗಿನ ಆರ್ಥಿಕ ಸನ್ನಿವೇಶದಲ್ಲಿ, ಶಾಸ್ತ್ರೀಯವಾದ, ದೀರ್ಘಕಾಲ ಉಳಿಯಬಲ್ಲ, ವಿನಿಮಯ ದರವನ್ನು ನಿರ್ಧರಿಸುವುದು ಕಷ್ಟವಾದರೂ, ದೇಶದ ಆರ್ಥಿಕ ಹಿತದೃಷ್ಟಿಯಿಂದಲೂ ಮತ್ತು ಅಂತರ ರಾಷ್ಟ್ರೀಯ ನ್ಯಾಯದೃಷ್ಟಿಯಿಂದಲೂ ಸರಿಯಾದ ದರವನ್ನು ನಿಶ್ಚಯಿಸಬೇಕಾಗಿತ್ತು. ಆಗಿನ ಪರಿಸ್ಥಿತಿಯಲ್ಲಿ, ರೂಪಾಯಿಯ ಬೆಲೆಯನ್ನು ನಿರ್ಧರಿಸುವುದು ಅತ್ಯಾವಶ್ಯಕವಾದರೆ, ಹದಿನೆಂಟು ಪೆನ್ನಿ ಸ್ಟರ್ಲಿಂಗಿಗೆ ಸಮನಾಗುವ ಚಿನ್ನದ ತೂಕವನ್ನೇ ತಿಳಿಸುವುದು ಸೂಕ್ತವೆಂದು ತೀರ್ಮಾನವಾಯಿತು.

ಇಂಡಿಯಾದೇಶವು ಅಂತರ ರಾಷ್ಟ್ರೀಯ ಆರ್ಥಿಕ ಸಂಸ್ಥೆಯ ಸದಸ್ಯರಾಷ್ಟ್ರವಾದ ಮೇಲೆ ರೂಪಾಯಿ ಸ್ಟರ್ಲಿಂಗ್ ಸಂಬಂಧ ಕೇವಲ ಅನಾವಶ್ಯಕವಾಯಿತು. ರೂಪಾಯಿಗೂ ಚಿನ್ನಕ್ಕೂ ನೇರವಾದ ಸಂಬಂಧಕಲ್ಪನೆಯಾಯಿತು. ಇದರ ಪರಿಣಾಮವಾಗಿ ಏಪ್ರಿಲ್ ೮, ೧೯೪೭ರಲ್ಲಿ, ರೂಪಾಯಿಗೂ ಸ್ಟರ್ಲಿಂಗಿಗೂ ಇದ್ದ ಪರಸ್ಪರ ಸಂಬಂಧ ಕಡಿದುಹೋಯಿತು. ರೂಪಾಯಿಗೆ ಸ್ವತಂತ್ರವಾದ ಅಂತಸ್ತು ಲಭಿಸಿತು. ರೂಪಾಯಿಯ ವಿನಿಮಯ ಬೆಲೆಯನ್ನು ಹದಿನೆಂಟು ಪೆನ್ನಿ ಸ್ಟರ್ಲಿಂಗ್ ಎಂದು ಹೇಳುವುದರ ಬದಲು ೪·೧೪ ಗ್ರೈನ್ಸ್ ಚೊಕ್ಕ ಚಿನ್ನವೆಂದು ಹೇಳಬಹುದು. ಈ ರೀತಿಯಾದರೂ, ರೂಪಾಯಿ ಸ್ಟರ್ಲಿಂಗ್ ಪರಸ್ಪರ ಸಂಬಂಧ ಪೂರ್ತಿ ಮಾಯವಾಗಿಲ್ಲ. ಭಾರತವು ಸ್ಟರ್ಲಿಂಗ್ ಕ್ಷೇತ್ರಕ್ಕೆ ಸೇರಿರುವವರೆಗೂ ಈ ಸಂಬಂಧ ತಪ್ಪಲಾರದು. ರೂಪಾಯಿ—ಸ್ಟರ್ಲಿಂಗ್ ವಿನಿಮಯ ದರ ೧೮ ಪೆನ್ನಿಗಳಾಗಿ ಉಳಿದಿದೆ. ಈಗ ರೂಪಾಯಿಯ ಮೌಲ್ಯದ ಇಳಿವರಿಯಲ್ಲಿ ರೂಪಾಯಿಯ ಡಾಲರು ಬೆಲೆ ಮಾತ್ರ ಕಡಮೆಯಾಗಿದೆ; ಸ್ಟರ್ಲಿಂಗ್ ಬೆಲೆಯಲ್ಲಿ ಯಾವ ಬದಲಾವಣೆಯೂ ಆಗಿಲ್ಲ.

ಭಾರತವು ರೂಪಾಯಿಯ ಮೌಲ್ಯವನ್ನು ಪೌಂಡಿನ ಮೌಲ್ಯದ ಇಳಿತದ ಪ್ರಮಾಣದಷ್ಟೇ ಇಳಿಸಿದೆ. ರೂಪಾಯಿಯ ವಿನಿಮಯ ಬೆಲೆಯ ಇಳಿತಾಯದ ಫಲವಾಗಿ ಭಾರತದಲ್ಲಿ ಜೀವನ ನಿರ್ವಾಹದ

ವೆಚ್ಚ ಹೆಚ್ಚಬಹುದೆಂದು ಹಲವೆಡೆಗಳಲ್ಲಿ ವ್ಯಕ್ತವಾಗಿರುವ ಅಭಿಪ್ರಾಯವನ್ನು ವಿರೋಧಿಸಿ ಪ್ರಧಾನ ಪಂಡಿತ ನೆಹರೂರವರು ಸೆಪ್ಟೆಂಬರ್ ೨೦ನೇ ತಾರೀಖು ರಾತ್ರಿ ರೇಡಿಯೋ ಭಾಷಣಮಾಡುತ್ತಾ, ಜನರು ಭಯಪಡಬೇಕಾದ ಕಾರಣವೇನೂ ಇಲ್ಲವೆಂಬುದನ್ನು ಪರಿಷ್ಕಾರಗೊಳಿಸಿದ್ದಾರೆ. ಜೀವನದ ವೆಚ್ಚ ಹೆಚ್ಚಾಗುವುದಿಲ್ಲವೆಂಬುದಕ್ಕೆ ಪ್ರಧಾನರು ಕೊಟ್ಟಿರುವ ಕಾರಣಗಳು ಈರೀತಿಯಾಗಿವೆ.

"ಜೀವನದ ನಿರ್ವಾಹದ ವೆಚ್ಚದಲ್ಲಿ ಬಟ್ಟೆ ಮತ್ತು ಆಹಾರ ಮುಖ್ಯವಾದ ಅಂಶಗಳು. ಡಾಲರ್ ಪ್ರದೇಶದಿಂದ ಪ್ರಸ್ತುತ ಸಾಲಿನಲ್ಲಿ ನಾವು ತರಿಸಬೇಕಾದ ಆಹಾರ ಧಾನ್ಯಗಳೆಲ್ಲವನ್ನೂ ತರಿಸಿಕೊಂಡಿದ್ದೇವೆ. ಡಾಲರ್ ಬೆಲೆ ಹೆಚ್ಚುವರಿ ನಮ್ಮ ಆಹಾರಧಾನ್ಯಗಳ ಆಮದಿನ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡುವುದಿಲ್ಲ. ಮುಂದೆ ದುರ್ಲಭ ನಾಣ್ಯಪ್ರದೇಶಗಳಿಂದ ಆಹಾರ ಧಾನ್ಯಗಳ ಆಮದನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ನಾವು ನಿರ್ಧರಿಸಿದ್ದೇವೆ. ಹೊರಗಿನಿಂದ ಆಹಾರ ಧಾನ್ಯಗಳ ಆಮದನ್ನು ಸಂಪೂರ್ಣವಾಗಿ ನಿಲ್ಲಿಸಬೇಕೆಂದು ನಾವು ನಿರ್ಧರಿಸಿದ್ದೇವೆ. ಹೊರಗಿನಿಂದ ಆಹಾರಧಾನ್ಯಗಳ ಆಮದನ್ನು ನಿಲ್ಲಿಸುವುದೇ ನಮ್ಮ ಆದರ್ಶ ಧ್ಯೇಯ.''

"ಬಟ್ಟೆ ತಯಾರಿಕೆಗೆ ಬೇಕಾದ ಹತ್ತಿಯನ್ನು ಆಮದು ಮಾಡುವ ರಾಷ್ಟ್ರಗಳು ಈಗಾಗಲೇ ನಾಣ್ಯಗಳ ಬೆಲೆಯನ್ನು ಇಳಿಸಿವೆ. ಆದಕಾರಣ ಬಟ್ಟೆ ಬೆಲೆ ಹೆಚ್ಚುವ ಸಂಭವವಿರುವುದಿಲ್ಲ. ಗ್ರಾಮಾಂತರಗಳಿಗೆ ಬೇಕಾದ ಸೀಮೆಎಣ್ಣೆ ನಮಗೆ ಸ್ಟರ್ಲಿಂಗ್ ಪ್ರದೇಶದಿಂದ ಬರುತ್ತದೆ. ಆದ್ದರಿಂದ ಅದರ ಬೆಲೆಯೂ ಹೆಚ್ಚುವುದಿಲ್ಲ."

ಎಂದು ಹೇಳಿ ಪಂಡಿತ ನೆಹರೂರವರು ಸಾಮಾನುಗಳ ಬೆಲೆ ಹೆಚ್ಚದಿರುವಂತೆ ಸರಕಾರ ಎಲ್ಲಾ ಕಾರ್ಯವಿಧಾನಗಳನ್ನೂ ಕೈಗೊಳ್ಳುವುದಾಗಿ ಭರವಸೆಯಿತ್ತಿದ್ದಾರೆ. ಇದಲ್ಲದೆ, ಅತ್ಯಾವಶ್ಯಕ ವಸ್ತುಗಳ ಬೆಲೆಯನ್ನು ತಗ್ಗಿಸಲು ಸರಕಾರ ಮುಂದೆ ಸತತ ಪ್ರಯತ್ನ ಮಾಡುವುದೆಂದೂ, ಈ ವಿಷಯದಲ್ಲಿ ಸರಕಾರದ ನೀತಿ ಇನ್ನೂ ಫಲದಾಯಕವಾಗುವುದೆಂದೂ ಹೇಳಿದ್ದಾರೆ.

ಸ್ಟರ್ಲಿಂಗ್ ಇಳಿತಕ್ಕೆ ಅನುಗುಣವಾಗಿ ರೂಪಾಯಿ ಬೆಲೆಯನ್ನು ಇಳಿಸಲು ಭಾರತಸರಕಾರ ನಿರ್ಧರಿಸಿದ್ದರ ಕಾರಣಗಳನ್ನು ಇದರಿಂದ ಭಾರತಕ್ಕೆ ಆಗುವ ಅನುಕೂಲ್ಯಗಳನ್ನು ಪಂಡಿತ ನೆಹರೂರವರು ತಮ್ಮ ಭಾಷಣದಲ್ಲಿ ವಿವರಿಸಿದ್ದಾರೆ. ಭಾರತದ ವ್ಯಾಪಾರವೆಲ್ಲಾ ಮುಖ್ಯ ವಾಗಿ ಸ್ಟರ್ಲಿಂಗ್‌ಪ್ರದೇಶದಲ್ಲಿರುತ್ತದೆ. ಈ ಕಾರಣದಿಂದ ಸ್ಟರ್ಲಿಂಗ್ ಡಾಲರ್ ಬೆಲೆಗೆ ಅನುಗುಣವಾಗಿ ರೂಪಾಯಿ ಬೆಲೆಯನ್ನು ಇಳಿಸು ವುದು ಭಾರತಕ್ಕೆ ಅನಿವಾರ್ಯವಾಯಿತು. ಈ ಇಳಿತಾಯದಿಂದ ಭಾರತದ ರಫ್ತು ವ್ಯಾಪಾರ ಹೆಚ್ಚಿ ಆಮದು ಮತ್ತು ರಫ್ತಿಗೆ ಕಳೆದ ವರ್ಷ ಕಂಡುಬಂದ ಅಂತರವು ಪರಿಹಾರವಾಗುವ ನಿರೀಕ್ಷಣೆ ಇದೆ. ಈಗ ಭಾರತವು ಮುಖ್ಯವಾಗಿ ಸೆಣಬು, ಸೆಣಬಿನ ವಸ್ತುಗಳು, ಎಣ್ಣೆಬೀಜಗಳು, ಮ್ಯಾಂಗನೀಸ್ ಮತ್ತು ಟೀ, ಇವುಗಳನ್ನು ಹೊರ ದೇಶಗಳಿಗೆ ಕಳುಹಿಸುತ್ತದೆ. ವ್ಯಾಪಾರಗಾರರು ಈ ವಸ್ತುಗಳ ಬೆಲೆ ಯನ್ನು ಹೆಚ್ಚಿಸಿ ಇಳಿತಾಯದ ಲಾಭ ದೇಶಕ್ಕೆ ದೊರಕದಂತೆ ನಡೆ ಯುವ ಪ್ರಯತ್ನಗಳನ್ನು ಪ್ರಧಾನರು ಖಂಡಿಸಿರುವುದು ಸೂಕ್ತ ವಾಗಿದೆ. ವರ್ತಕರು ಮತ್ತು ಜನಸಾಮಾನ್ಯರು ಲಾಭಾರ್ಜನೆಗಿಂತ ರಾಷ್ಟ್ರದ ಆರ್ಥಿಕ ಹಿತಸಾಧನೆಗೆ ಹೆಚ್ಚು ಗಮನಕೊಡಬೇಕಾಗಿ ಪ್ರಧಾನರು ಮನವಿಮಾಡಿಕೊಂಡಿದ್ದಾರೆ. ಈಗಾಗಲೇ ಆಮದಾಗಿ ಭಾರತದ ವರ್ತಕರ ಹತ್ತಿರ ಇರುವ ಡಾಲರ್ ಪ್ರದೇಶದ ಸಾಮಾನು ದಳ ಬೆಲೆಯನ್ನು ಹೆಚ್ಚಿಸಕೂಡದೆಂದು ಪ್ರಧಾನಿಗಳು ಎಚ್ಚರಿಸಿದ್ದಾರೆ.

ಸಾಮಾನುಗಳ ಬೆಲೆಯಾಗಲೀ ಜೀವನದ ವೆಚ್ಚವಾಗಲೀ ಈ ಇಳಿತಾಯದಿಂದ ಹೆಚ್ಚುವುದಿಲ್ಲವೆಂದು ಪಂಡಿತ ನೆಹರೂರವರು ಹೇಳಿ ದ್ದಾರೆ. ಜನರ ನಗದು ಹಣವಾಗಲೀ ಅಥವಾ ಬ್ಯಾಂಕು ಡಿಪಾಜಿಟ್ ಗಳಾಗಲೀ ಇದರಿಂದ ಯಾವ ರೀತಿಯೂ ಮಾರ್ಪಾಡಾಗುವುದಿಲ್ಲ. ನಮ್ಮ ರೂಪಾಯಿಯ ಕೊಳ್ಳುವ ಶಕ್ತಿಯೂ ಸಹಾ, ಡಾಲರ್ ಪ್ರದೇಶ ದಿಂದ ಬರುವ ಸಾಮಾನುಗಳ ಹೊರತು ಇತರ ಸಾಮಾನುಗಳ ಸಂಬಂಧದಲ್ಲಿ ಕಡಮೆಯಾಗುವುದಿಲ್ಲ. ರೂಪಾಯಿ ಮೌಲ್ಯದ ಇಳಿ ತಾಯದಿಂದ ದುರ್ಲಭನಾಣ್ಯಪ್ರದೇಶದಿಂದ ಬರುವ ಸಾಮಾನುಗಳ

ಬೆಲೆ ಹೆಚ್ಚಾಗುವುದರಲ್ಲಿ ಏನೂ ಸಂದೇಹವಿಲ್ಲ. ಆದರೆ, ಇದರಿಂದ ಎಲ್ಲಾ ಸಾಮಾನುಗಳ ಬೆಲೆ ಹಾಗೂ ಜೀವನದ ವೆಚ್ಚ ಹೆಚ್ಚಾಗುತ್ತದೆ ಎನ್ನುವುದರಲ್ಲಿ ನಿಜಾಂಶವಿಲ್ಲ. ಭಾರತೀಯರ ಜೀವನ ನಿರ್ವಾಹಕ್ಕೆ ನಮ್ಮ ದೇಶದಲ್ಲೇ ತಯಾರಾದ ಸಾಮಾನುಗಳು ಸಾಕು. ಇತರ ಆವಶ್ಯಕವಾದ ವಸ್ತುಗಳನ್ನು ಸ್ಟರ್ಲಿಂಗ್ ಪ್ರದೇಶದಿಂದ ತರಿಸಿಕೊಳ್ಳ ಬಹುದು. ಆದ್ದರಿಂದ ಬೆಲೆಯುಬ್ಬರವಾಗುವ ಸಂಭವವಿಲ್ಲ. ನಮ್ಮ ಕೈಗಾರಿಕೆಗಳಿಗೆ ಬೇಕಾಗುವ ಯಂತ್ರಸಾಮಗ್ರಿಗಳನ್ನು ಸ್ಟರ್ಲಿಂಗ್ ಪ್ರದೇಶದಿಂದ ತರಿಸಿಕೊಳ್ಳುವುದರಿಂದ, ಸಾಮಾನುಗಳನ್ನು ತಯಾರು ಮಾಡುವ ವೆಚ್ಚವೂ ಸಹಾ ಹೆಚ್ಚಾಗಲಾರದು.

ನಾಣ್ಯ ವಿನಿಮಯದರವನ್ನು ಪುನರ್ವಿಮರ್ಶಿಸುವುದರಿಂದ ಮಾತ್ರ ದೇಶದ ಆರ್ಥಿಕ ತೊಂದರೆಗಳು ಪರಿಹಾರವಾಗುವುದಿಲ್ಲ; ಇದು ಒಂದು ಉಪಶಾಂತಿ ಮಾತ್ರ. ನಮ್ಮ ದೇಶದ ಆರ್ಥಿಕ ಯಂತ್ರವನ್ನು ಶಿಥಿಲಗೊಳಿಸಿರುವ ಉಗ್ರ ಅವ್ಯವಸ್ಥೆಯನ್ನು ಪರಿಶೋಧಿಸಿ ಅದನ್ನು ನಿವಾರಿಸಬೇಕು. ಆದರೆ, ವಿಶ್ವದ ಆರ್ಥಿಕ ಪರಿಸ್ಥಿತಿಯಲ್ಲಿ ಉಂಟಾಗಿ ರುವ ಬದಲಾವಣೆಗಳಿಗೆ ಅನುಗುಣವಾಗಿ ಭಾರತವು ಈ ಯೋಜನೆಗೆ ಒಪ್ಪಬೇಕಾಯಿತೆಂದು ನೆಹರೂರವರು ಸ್ಪಷ್ಟಪಡಿಸಿದ್ದಾರೆ. ಹಿಂದೆ ಒದಗಿದ ಅನೇಕ ಎಡರುತೊಡರುಗಳನ್ನು ಧೈರ್ಯಸ್ಥೈರ್ಯಗಳಿಂದ ಎದು ರಿಸಿದಂತೆಯೇ ಆರ್ಥಿಕಕ್ಷೇತ್ರದಲ್ಲಿ ತಲೆದೋರಿರುವ ಈ ಬಿಕ್ಕಟ್ಟಿನ ಪರಿ ಸ್ಥಿತಿಯನ್ನು ಭಾರತೀಯರು ಎದುರಿಸಬೇಕಾಗಿದೆ. ದೇಶಭಕ್ತಿ, ಶಿಸ್ತು ಮತ್ತು ಸಹಕಾರ ಆವಶ್ಯಕವೆಂದು ಪ್ರಧಾನರು ಸೂಚಿಸಿರುವುದನ್ನು ಈ ಸಂದರ್ಭದಲ್ಲಿ ನಾವು ವರ್ತಕರ ಮತ್ತು ಜನಸಾಮಾನ್ಯರ ಗಮ ನಕ್ಕೆ ತರಬೇಕಾಗಿದೆ.

ಸೆಪ್ಟೆಂಬರ್ ೧೯ ನೇ ತಾರೀಖು ಆರ್ಥಿಕ ಸಚಿವರು ಒಂದು ಪ್ರಕಟನೆಯನ್ನು ಹೊಡಿಸಿ ಇದೇ ವಿಷಯಗಳನ್ನು ನಿರೂಪಿಸಿದ್ದಾರೆ. ಸಾಮಾನುಗಳ ಬೆಲೆಯಲ್ಲಿ ಯಾವ ವಿಧವಾದ ಹೆಚ್ಚುವರಿಯಾಗದ ಹಾಗೆ ಸರಕಾರದವರು ಕಾರ್ಯ ಕ್ರಮಗಳನ್ನು ಕೈಗೊಳ್ಳುವರೆಂದು ಆರ್ಥಿಕ ಸಚಿವರು ಭರವಸೆ ಇತ್ತಿದ್ದಾರೆ.

ಭಾರತ ಸರ್ಕಾರದ ಮಾಜಿ ಆರ್ಥಿಕ ಸಚಿವರಾದ ಆರ್. ಕೆ. ಷಣ್ಮುಗಂ ಚೆಟ್ಟಿಯವರು ಕೊಯಮುತ್ತೂರಿನಲ್ಲಿ ೨೦ ನೇ ತಾರೀಖಿನ ದಿನ ಇದೇ ವಿಷಯವನ್ನು ಆಮೂಲಾಗ್ರವಾಗಿ ವಿವರಿಸಿದ್ದಾರೆ. ಇವರು ಹೇಳಿರುವ ಕೆಲವು ವಿಷಯಗನ್ನು ಇಲ್ಲಿ ಉಲ್ಲೇಖಿಸುವುದು ಅನಾವಶ್ಯಕವಾಗಲಾರದು. ಭಾರತವು ಅಂತರ ರಾಷ್ಟ್ರೀಯ ಆರ್ಥಿಕ ನಿಧಿಯ ಸದಸ್ಯರಾಷ್ಟ್ರವಾದ ಮೇಲೆ ನಮ್ಮ ರೂಪಾಯಿ ಚಿನ್ನಕ್ಕೆ ನೇರ ವಾಗಿ ಸಂಬಂಧಿಸಿ ಸ್ಟರ್ಲಿಂಗ್ ಸಂಬಂಧವನ್ನು ತ್ಯಜಿಸಿದರೂ, ನಮ್ಮ ಕಾರ್ಯಕ್ಷೇತ್ರವೆಲ್ಲಾ ಮುಖ್ಯವಾಗಿ ಸ್ಟರ್ಲಿಂಗ್ ಪ್ರದೇಶದಲ್ಲೇ ಕೇಂದ್ರೀ ಕೃತವಾಗಿದೆ. ಸ್ಟರ್ಲಿಂಗ್ ಮೌಲ್ಯದ ಇಳಿವರಿಯಾದ ಮೇಲೆ, ರೂಪಾಯಿಯ ವಿನಿಮಯದರ ಮೊದಲಿನ ಹಾಗೇ ಇದ್ದಿದ್ದರೆ ನಮ್ಮ ಆರ್ಥಿಕ ಸ್ಥಿತಿಯಲ್ಲಿ ಮಹತ್ತರವಾದ ಏರುಪೇರುಗಳಾಗುತ್ತಿದ್ದವು. ಸ್ಟರ್ಲಿಂಗ್ ಪ್ರದೇಶದ ನಮ್ಮ ವ್ಯಾಪಾರ ಅತ್ಯಂತ ಮಹತ್ವಪೂರಿತ ವಾದುದು. ಆದ್ದರಿಂದ ಸ್ಟರ್ಲಿಂಗ್ ಮೌಲ್ಯದ ಇಳಿತಾಯಕ್ಕೆ ಸರಿ ಯಾಗಿ ರೂಪಾಯಿ ಮೌಲ್ಯವನ್ನು ಇಳಿಸಿರುವ ಭಾರತ ಸರ್ಕಾರದ ನಿರ್ಧಾರ ಸೂಕ್ತವಾಗಿದೆ. ಬ್ರಿಟನ್ನಿನಂತೆ, ಭಾರತಕ್ಕೂ ಅಮೆರಿಕ ದೊಂದಿಗೆ ವ್ಯಾಪಾರದಲ್ಲಿ ಸಮತೂಕ ವಿಲ್ಲದೆ, ಸಾಮಾನುಗಳ ರಫ್ತಿ ಗಿಂತ ಆಮದೇ ಹೆಚ್ಚಾಗಿದೆ. ರೂಪಾಯಿ ಮೌಲ್ಯದ ಇಳಿತದಿಂದ ಡಾಲರ್ ಪ್ರದೇಶಕ್ಕೆ ನಮ್ಮ ಸಾಮಾನುಗಳನ್ನು ಕಳುಹಿಸಲು ಬಹು ಅನುಕೂಲವಾಗುತ್ತದೆ, ಅಲ್ಲಿಂದ ಆಮದಾಗುವ ಸಾಮಾನುಗಳ ಬೆಲೆ ಹೆಚ್ಚಾಗಿ, ಆಮದು ಕಡಮೆಯಾಗುತ್ತದೆ.

ರೂಪಾಯಿ ಮೌಲ್ಯದ ಇಳಿತಾಯದಿಂದ ರಫ್ತುವ್ಯಾಪಾರ ಹೆಚ್ಚಾಗಿ ನಮ್ಮ ಆರ್ಥಿಕಸ್ಥಿತಿ ಸುಧಾರಿಸುತ್ತದೆ. ಆದರೆ ಡಾಲರು ಪ್ರದೇಶದಿಂದ ನಮ್ಮ ದೇಶಕ್ಕೆ ಆಮದಾಗುವ ಸಾಮಾನುಗಳ ಬೆಲೆ ಹೆಚ್ಚಾಗಿ, ನಮ್ಮ ಆರ್ಥಿಕ ಸ್ಥಿತಿಯು ಹದಗೆಡುವ ಸಂಭವವಿದೆ. ಇದ ಕ್ಕಾಗಿ, ಸರಕಾರವು ಸರಿಯಾದ ಕ್ರಮಗಳನ್ನು ಕೈಗೊಳ್ಳಬೇಕು. ಡಾಲರು ಪ್ರದೇಶದಿಂದ ಗೋಧಿಯನ್ನು ಆಮದು ಮಾಡಿಕೊಳ್ಳದೆ, ಸ್ಟರ್ಲಿಂಗ್ ಪ್ರದೇಶದಿಂದ ಮಾತ್ರ ತರಿಸಿಕೊಂಡರೆ, ಆಹಾರಧಾನ್ಯಗಳ

ಬೆಲೆ ಹೆಚ್ಚಾಗುವುದಿಲ್ಲ. ಇಲ್ಲವಾದರೆ, ಗೋಧಿಯ ಬೆಲೆ ಅಪಾರವಾಗಿ ಹೆಚ್ಚಾಗುತ್ತದೆ. ಇದು ಬಹು ಮುಖ್ಯವಾದ ಸಮಸ್ಯೆ. ಇದಲ್ಲದೆ ನಮ್ಮ ದೇಶದ ಕೈಗಾರಿಕಾಭಿವೃದ್ಧಿಗೆ ಡಾಲರುಗಳ ಪ್ರದೇಶದಿಂದ ಯಂತ್ರ ಸಾಮಗ್ರಿಗಳನ್ನು ತರಿಸಿಕೊಳ್ಳ ಬೇಕಾದುದು ಅತ್ಯಗತ್ಯವಾಗಿರುವುದ ರಿಂದ, ಕೈಗಾರಿಕೆಗಳ ಮೂಲವೆಚ್ಚ ಹೆಚ್ಚಾಗುತ್ತದೆ. ನಮ್ಮ ಉತ್ಪತ್ತಿ ಶಕ್ತಿಯ ಮಹತ್ತರ ಸೌಲಭ್ಯಸಾಧನೆಗಳಿಂದ ಮಾತ್ರ ಈ ಪರಿಸ್ಥಿತಿ ಯನ್ನು ನಿವಾರಿಸಬಹುದು.

ನಾಣ್ಯದ ಮೌಲ್ಯದ ಇಳಿತಾಯ ಪ್ರಕೃತ ಸನ್ನಿವೇಶದಲ್ಲಿ ಅತ್ಯಾವಶ್ಯಕವಾದರೂ, ಇದು ಕೇವಲ ಕ್ಷಣಿಕಕಾಲದ ಆರ್ಥಿಕ ಸುಧಾರಣೆ. ನಮ್ಮ ದೇಶದ ಆರ್ಥಿಕದುಃಸ್ಥಿತಿಯನ್ನು ಪರಿಹರಿಸಲು, ಇನ್ನೂ ಹೆಚ್ಚಿನ ಫಲದಾಯಕವಾದ, ರಚನಾತ್ಮಕವಾದ ಕ್ರಮಗಳನ್ನು ಕಾರ್ಯರೂಪಕ್ಕೆ ತರಬೇಕು. ಬೆಲೆಯುಬ್ಬರ, ಜೀವನದ ವೆಚ್ಚದ ಏರುವಿಕೆ--ಇವೆರಡೂ ರಾಷ್ಟ್ರದ ಆರ್ಥಿಕ ಉನ್ನತಿಯ ಮಹತ್ತರ ಕಂಟಕಗಳು. ಮೌಲ್ಯದ ಇಳಿತಾಯ ಕ್ಷಣಿಕಕಾಲದ ಪರಿಹಾರವನ್ನು ಒದಗಿಸಿದರೂ, ಕಡಮೆ ವೆಚ್ಚದಲ್ಲಿ ಹೆಚ್ಚು ಉತ್ಪತ್ತಿಯಾಗುವ ವಾತಾವಣ ನಿರ್ಮಾಣವಾಗ ದಿದ್ದರೆ, ನಮ್ಮ ಸ್ಥಿತಿ ಸರಿಹೋಗಲಾರದು. ಆಹಾರದಲ್ಲಿ ಸ್ವಪರಿಪೂರ್ಣತೆಯನ್ನೂ ಸಾಧಿಸಿದರೆ, ರೂಪಾಯಿಯ ಮೌಲ್ಯದ ಇಳಿತಾಯ ಫಲದಾಯಕವಾಗಿ, ಅನುಕೂಲ ವಾತಾವರಣವನ್ನು ಕಲ್ಪಿಸಬಲ್ಲದು. ಈ ರೀತಿಯಾಗಿ ಷಣ್ಮುಗಂಚೆಟ್ಟಿಯವರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ.

ಭಾರತವು ರೂಪಾಯಿಯ ಮೌಲ್ಯವನ್ನು ಇಳಿಸಲು ಕಾರಣ ವೇನು? ಅರ್ಥಿಕ ಸಚಿವರಾದ ಜಾನ್‌ಮಥಾಯ್‌ರವರು ಡೊಮಿನಿಯನ್ ಪಾರ್ಲಿಮೆಂಟಿನಲ್ಲಿ ಅಕ್ಟೋಬರ್ ೫ನೇ ತಾರೀಖು ತಮ್ಮ ೮೦ ನಿಮಿಷದ ಅಮೂಲ್ಯ ಭಾಷಣದಲ್ಲಿ ರೂಪಾಯಿಯ ಮೌಲ್ಯದ ಇಳಿವರಿಯ ಸನ್ನಿವೇಶವನ್ನು ನಾದ್ಯಂತವಾಗಿ ವಿವರಿಸಿದರು. ಅಲ್ಲಿಯವರೆಗೂ ದೇಶದಾದ್ಯಂತ ಅನೇಕ ವಾದವಿವಾದಗಳು, ವಿಪುಲ ಚರ್ಚೆಗಳು ನಡೆದಿದ್ದವು. ಪ್ರಧಾನ ಪಂಡಿತ ನೆಹರೂರವರ ರೇಡಿಯೋ

ಭಾಷಣದಲ್ಲಿ, ಆರ್ಥಿಕ ಸಚಿವರ ಪ್ರಕಟನೆಯಲ್ಲಿ, ರೂಪಾಯಿಯ ಮೌಲ್ಯದ ಇಳಿವರಿಯನ್ನು ಸಮರ್ಥಿಸುವ ಒಂದು ಅಂಶವಾದರೂ ಇರಲಿಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಬೊಂಬಾಯಿಯ ಕೆಲವು ಆರ್ಥಿಕ ವಾರಪತ್ರಿಕೆಗಳು ಈ ವಿಷಯವನ್ನು ನಿರ್ದಿಷ್ಟವಾಗಿ ವ್ಯಕ್ತಪಡಿಸಿವೆ. ಆದರೆ, ಅಕ್ಟೋಬರ್ ೫ನೇ ತಾರೀಖಿನ ಆರ್ಥಿಕ ಸಚಿವರ ಭಾಷಣದಲ್ಲಿ ಯಾವ ಅಂಶವೂ ಬಿಟ್ಟುಹೋಗಿಲ್ಲ. ಸಮಸ್ಯೆಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಚರ್ಚಿಸಿ, ರೂಪಾಯಿಯ ಮೌಲ್ಯದ ಇಳಿವರಿಯ ವಿಷಯದಲ್ಲಿದ್ದ ಎಲ್ಲಾ ಸಂದೇಹಗಳನ್ನೂ ಯೋಗಲಾಡಿಸಿದ್ದಾರೆ. ಆರ್ಥಿಕ ಸಚಿವರು ಸಮಸ್ಯೆಯ ಎಲ್ಲಾ ರೇಖೆಗಳನ್ನೂ ಅರಿತು, ಸೆಪ್ಟೆಂಬರ್ ೧೮ನೇ ತಾರೀಖಿನಿಂದ ನಡೆದ ಆರ್ಥಿಕ ವಿದ್ಯಮಾನಗಳೆಲ್ಲನನ್ನೂ ಪರಿಶೀಲಿಸಿ, ಬಹು ಸ್ವಾರಸ್ಯವಾಗಿ, ಸ್ಪಷ್ಟವಾಗಿ, ವಿಮರ್ಶಕರ ಎಲ್ಲಾ ಅಂಶಗಳಿಗೂ ತೃಪ್ತಿಕರವಾದ ಉತ್ತರವನ್ನು ಕೊಟ್ಟಿದ್ದಾರೆ. ಅಮಿತವಾಗಿ ಚರ್ಚೆಯಾಗಿದ್ದ ಅನೇಕ ವಿಷಯಗಳಿಗೆ ಸೂಕ್ತವಾದ ಉತ್ತರ ಹೇಳಿ, ಎಲ್ಲರ ಸಂದೇಹಗಳನ್ನೂ ನಿವಾರಿಸಿರುವುದಲ್ಲದೆ, ಬೇರೆ ಕ್ರಮಗಳನ್ನೇಕೆ ಅನುಸರಿಸಲಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ. ತರ್ಕದಿಂದ ಉತ್ಪನ್ನವಾದ ದೃಢನಂಬಿಕೆಯಿಂದ ವರ್ತಿಸದೆ, ನಡೆದ ವಿದ್ಯಮಾನಗಳಿಗೆ ಶರಣಾಗಿ ಈ ರೀತಿ ಮಾಡಬೇಕಾಯಿತೆಂದೂ ಇದು ಉಚಿತವಾದ ಮಾರ್ಗವಲ್ಲವೆಂದೂ ಖಚಿತವಾಗಿ ಹೇಳಿದ್ದಾರೆ. “ರೂಪಾಯಿಯ ಮೌಲ್ಯದ ಇಳಿವರಿಯ ನಿರ್ಧಾರದಿಂದ ನಾನೇನೂ ತೃಪ್ತಿ ಹೊಂದಿಲ್ಲ. ಸ್ಟರ್ಲಿಂಗ್ ರಾಷ್ಟ್ರಗಳು ಈ ಕ್ರಮವನ್ನನುಸರಿಸಿದ್ದರಿಂದಲೂ, ನನ್ನ ಸಹೋದ್ಯೋಗಿಗಳು ಒಪ್ಪಿದ್ದರಿಂದಲೂ, ಬೇರೆ ಮಾರ್ಗ ಕಾಣದೆ, ನಾನು ಈ ಕ್ರಮವನ್ನು ಕೈಗೊಳ್ಳಬೇಕಾಯಿತು” ಎಂದು ಆರ್ಥಿಕ ಸಚಿವರು ಹೇಳಿದ್ದಾರೆ.

ಕಾಮನ್‌ವೆಲ್ತ್ ಆರ್ಥಿಕ ಸಚಿವರ ಸಮ್ಮೇಳನದಲ್ಲಿ ಈ ಪ್ರಶ್ನೆ ಚರ್ಚೆಯಾಗಲಿಲ್ಲವೆಂದೂ, ಈಗಾದರೂ ಬ್ರಿಟಿಷ್ ಸರಕಾರವು ಕಾಮನ್‌ವೆಲ್ತ್ ರಾಷ್ಟ್ರಗಳ ಸರಕಾರಗಳ ಸಲಹೆ ಪಡೆದು ವರ್ತಿಸಬಹುದಾಗಿತ್ತೆಂದೂ ಹೇಳಿದರು. ಎಷ್ಟೇ ತೊಂದರೆಗಳಿದ್ದರೂ, ಬ್ರಿಟನ್ನು ಕಾಮನ್

ವೆಲ್ತ್ ರಾಷ್ಟ್ರಗಳ ಅನುಮತಿಯನ್ನು ಪಡೆಯಬಹುದಾಗಿತ್ತು. ಈ ರೀತಿಯಾಗಿದ್ದರೆ, ಪಾಕೀಸ್ತಾನವಾಗಲೀ ಸಿಲೋನ್ ಆಗಲಿ ಅನಾನುಕೂಲತೆಗೆ ಈಡಾಗುತ್ತಿರಲಿಲ್ಲ. ಸಿಲೋನ್ ಅಥವಾ ಪಾಕೀಸ್ತಾನ ಇಂಡಿಯಾದ ಅತಿ ವೇಗದ ನಿರ್ಧಾರದ ಸಂಬಂಧದಲ್ಲಿ ಏನಾದರೂ ಹೇಳುವುದಾದರೆ, ತಪ್ಪು ನಮ್ಮದೆಲ್ಲವೆಂಬುದು ವೇದ್ಯವಾಗುತ್ತದೆ. ಮೌಲ್ಯದ ಇಳಿವರಿಯ ಆವಶ್ಯಕತೆ, ಪ್ರಮಾಣ ಮತ್ತು ಕಾಲದ ಬಗ್ಗೆ ಸಲಹೆ ಪಡೆಯಲು ರಹಸ್ಯವಾಗಿ ಕಾಮನ್‌ವೆಲ್ತ್ ಸಚಿವರ ಸಭೆ ಸೇರಿಸಲು ಸರಿಯಾದ ಕ್ರಮಗಳನ್ನು ಬ್ರಿಟನ್ ಕೈಗೊಳ್ಳಬೇಕಾಗಿತ್ತು. ಇದಲ್ಲದೆ, ಸೆಪ್ಟೆಂಬರ್ ೧೬ ನೇ ತಾರೀಖಿನವರೆಗೂ ಮೌಲ್ಯದ ಇಳಿವರಿಯ ಸಂಬಂಧದಲ್ಲಿ ಬ್ರಿಟನ್ನಿನ ಉದ್ದೇಶದ ಚಿಹ್ನೆಯಾದರೂ ಗೊತ್ತಾಗದೆ ಇರುವುದು ಕಾಮನ್‌ವೆಲ್ತ್ ಸಂಬಂಧದ ಸರಿಯಾದ ರೀತಿಯಲ್ಲ. ಕಾಮನ್‌ವೆಲ್ತ್ ಆರ್ಥಿಕ ಸಚಿವರ ಸಮ್ಮೇಳನದ ಕೊನೆಯಲ್ಲಿ ನಿರೀಕ್ಷಿಸಿದ ಕಾಮನ್‌ವೆಲ್ತ್ ರಾಷ್ಟ್ರಗಳ ಪರಸ್ಪರ ಸಹಾಯ, ಸಲಹೆಗಳು ಕಾರ್ಯಕ್ಷೇತ್ರದಲ್ಲಿ ಯಾವ ರೀತಿ ಕೆಲಸ ಮಾಡುತ್ತಿವೆ ಎಂಬುದು ವ್ಯಕ್ತವಾಗುತ್ತದೆ. ಸ್ಟರ್ಲಿಂಗ್ ಕ್ಷೇತ್ರದ ಪ್ರಧಾನರಾಷ್ಟ್ರವಾದ ಬ್ರಿಟನ್ನು ಇತರ ಕಾಮನ್‌ವೆಲ್ತ್ ರಾಷ್ಟ್ರಗಳ ಅಭಿಪ್ರಾಯಗಳನ್ನು ತಿಳಿದುಕೊಳ್ಳಲು ಯಾವ ಪ್ರಯತ್ನವನ್ನೂ ಮಾಡದೇ ಇರುವುದು ಕೇವಲ ಶೋಚನೀಯ. ಆಸ್ಟ್ರೇಲಿಯದ ಪ್ರಧಾನ ಮಂತ್ರಿ ಚಿಫ್ಲೇಯವರು, "ಆಸ್ಟ್ರೇಲಿಯ ಸನ್ನಿವೇಶಕ್ಕೆ ಆಹುತಿಯಾಯಿತು" ಎಂದು ಹೇಳಿದ್ದಾರೆ.

ಸ್ವಲ್ಪವೂ ಕಾಲವಿಳಂಬವಿಲ್ಲದೆ ಇಂಡಿಯ ರೂಪಾಯಿಯ ಮೌಲ್ಯವನ್ನು ಏಕೆ ಇಳಿಸಿತೆಂಬುದನ್ನೂ, ಪೌಂಡಿನ ಮೌಲ್ಯದ ಇಳಿತಾಯದ ಪ್ರಮಾಣದಲ್ಲೇ ರೂಪಾಯಿಯ ಮೌಲ್ಯವು ಏಕೆ ಇಳಿಯಿತೆಂಬುದನ್ನೂ ಆರ್ಥಿಕ ಸಚಿವರು ವಿವರಿಸಿದ್ದಾರೆ.

ನಮ್ಮ ರಫ್ತು ವ್ಯಾಪಾರದ ಶೇಕಡ ೭೫ ರಷ್ಟು ಪ್ರಮಾಣ ಸ್ಟರ್ಲಿಂಗ್ ಪ್ರದೇಶದೊಂದಿಗಿದೆ. ರೂಪಾಯಿಯ ಮೇಲ್ಮಟ್ಟದ ವಿನಿಮಯ ದರದಿಂದ ನಮ್ಮ ರಫ್ತು ವ್ಯಾಪಾರವೆಲ್ಲಾ ಹಾಳಾಗುತ್ತಿತ್ತು; ಕ್ಷಣಿಕ ಕಾಲದಲ್ಲೇ ನಾಶವಾಗುತ್ತಿತ್ತು. ಪೌಂಡಿನ ಮೌಲ್ಯದ ಇಳಿವರಿಗಿಂತ

ಹಿಂದೆ ನಡೆದ ಆರ್ಥಿಕ ವಿದ್ಯಮಾನಗಳನ್ನು ವಿವೇಚಿಸಿದವರಾರೂ, ಆರ್ಥಿಕ ಸಚಿವರ ವಾದವನ್ನು ಪ್ರಶ್ನಿಸುವುದಿಲ್ಲ. ಸ್ಟರ್ಲಿಂಗ್ ಕ್ಷೇತ್ರದ ಆಗುಹೋಗುಗಳನ್ನು ಒಪ್ಪಿಕೊಳ್ಳುವುದಲ್ಲದೆ, ನಾಣ್ಯಮೌಲ್ಯದ ಇಳಿವರಿಯ ಆವಶ್ಯಕತೆಯನ್ನು ಅಂಗೀಕರಿಸಿದರೆ, ಬ್ರಿಟನ್ನಿನ ಸ್ಟರ್ಲಿಂಗಿನ ಮೌಲ್ಯದ ಇಳಿವರಿಯ ಪ್ರಮಾಣದಷ್ಟೇ, ರೂಪಾಯಿಯ ಮೌಲ್ಯವನ್ನು ಇಳಿಸುವ ಆವಶ್ಯಕತೆಯನ್ನು ಒಪ್ಪಿಕೊಳ್ಳಲೇಬೇಕು. ಇಂಡಿಯಾ ಸರಕಾರವು ರೂಪಾಯಿಯ ಮೌಲ್ಯವನ್ನು ಅದೇ ಪ್ರಮಾಣದಲ್ಲಿ ಇಳಿಸದಿದ್ದಿದ್ದರೆ, ಇದರಿಂದ ನಮ್ಮ ರಫ್ತು ವ್ಯಾಪಾರವು ಬಹುಮಟ್ಟಿಗೆ ಕ್ಷೀಣವಾಗುತ್ತಿತ್ತು ಎಂದು ಆರ್ಥಿಕ ಸಚಿವರು ಅನುಭವಸಿದ್ಧವಾದ ಮಾತನ್ನು ಹೇಳಿದ್ದಾರೆ. ಇದಕ್ಕಿಂತ ಮೊದಲೇ, ಬ್ರಿಟನ್ನಿನ ಸಾಮಾನುಗಳ ಬೆಲೆಗಳ ಮಟ್ಟಕ್ಕಿಂತ, ಇಂಡಿಯಾದ ಬೆಲೆಯ ಮಟ್ಟ ಹೆಚ್ಚಾಗಿತ್ತು. ರೂಪಾಯಿಯ ವಿನಿಮಯ ಬೆಲೆಯನ್ನು, ಪೌಂಡಿನ ವಿನಿಮಯ ಬೆಲೆಗಿಂತ ಕಡಮೆ ಪ್ರಮಾಣದಲ್ಲಿ ಇಳಿಸಿದ್ದರೆ, ಇಂಡಿಯಾದ ಹತ್ತಿ ಬಟ್ಟೆಗಳನ್ನು ರಫ್ತು ಮಾರ್ಕೆಟ್ಟುಗಳಲ್ಲಿ ಲ್ಯಾಂಕಾಷೈರ್ ಹತ್ತಿ ಬಟ್ಟೆಯೊಂದಿಗೆ ಪೈಪೋಟಿಯಿಂದ ಮಾರಾಟ ಮಾಡುವುದು ಅಸಾಧ್ಯವಾಗುತ್ತಿತ್ತು. ಈ ಮೊದಲೇ ಲ್ಯಾಂಕಾಷೈರಿನ ಪೈಪೋಟಿಯನ್ನು ತಡೆಯಲು ಭಾರತಕ್ಕೆ ಕಷ್ಟವಾಗಿತ್ತು. ಇದಲ್ಲದೆ, ಬ್ರಿಟನ್—ಅಮೆರಿಕ—ಕೆನಡ, ಈ ತ್ರಿರಾಷ್ಟ್ರಗಳ ಆರ್ಥಿಕ ಸಮ್ಮೇಳನದಲ್ಲಿ ವಿದ್ಯಮಾನಗಳನ್ನು ನಿರೀಕ್ಷಿಸಲು ಕಳುಹಿಸಿದ್ದ ಸರ್ ಚಿಂತಾಮನ್ ದೇಶ್‌ಮುಖ್ ಮತ್ತು ರಿಜರ್ವ್ ಬ್ಯಾಂಕಿನ ಗವರ್ನರಾದ ಸರ್ ಬಿ. ರಾಮರಾವ್—ಇವರು ರೂಪಾಯಿಯ ಮೌಲ್ಯವನ್ನು ಪೌಂಡಿನ ಮೌಲ್ಯದ ಇಳಿವರಿಯ ಪ್ರಮಾಣದಲ್ಲಿ ಇಳಿಸಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

ಜಾನ್ ಮಥಾಯ್‌ರವರ ಭಾಷಣದಿಂದ ಕಾಮನ್‌ವೆಲ್ತ್ ರಾಷ್ಟ್ರಗಳ ಆರ್ಥಿಕ ಸಂಬಂಧದ ವಿಷಯ ಚೆನ್ನಾಗಿ ವ್ಯಕ್ತವಾಗಿದೆ. ಬ್ರಿಟಿಷ್ ಕಾಮನ್‌ವೆಲ್ತಿನಲ್ಲಿ ಇರುವುದರಿಂದ ಭಾರತಕ್ಕೆ ಯಾವ ಅನುಕೂಲವಿದೆ? ಕಾಮನ್‌ವೆಲ್ತಿನಲ್ಲಿರುವುದರಿಂದ ಮಹತ್ತರವಾದ ರಾಜಕೀಯ

ಹಾಗೂ ಆರ್ಥಿಕ ಸಮಸ್ಯೆಗಳಲ್ಲಿ ಸಹಾಯ ಸಹಕಾರಗಳೊದಗುತ್ತ ವೆಂಬುದು ಒಂದು ಮುಖ್ಯ ಅಂಶ. ಆದರೆ, ಬ್ರಿಟನ್ನು ಕಾಮನ್ ವೆಲ್ತ್ ರಾಷ್ಟ್ರಗಳನ್ನು ಕೇಳದೆ, ಪೌಂಡಿನ ಮೌಲ್ಯವನ್ನು ಇಳಿಸಿರು ವುದು ಕಾಮನ್ ವೆಲ್ತ್ ಸಂಬಂಧದ ವಿರೋಧಾಭಾಸವನ್ನು ತೋರಿ ಸುತ್ತದೆ. ಪಾಕೀಸ್ಥಾನ ಕಾಮನ್ ವೆಲ್ತಿಗೆ ಸೇರಿದ್ದು, ತನ್ನ ರೂಪಾ ಯಿಯ ಮೌಲ್ಯವನ್ನು ಮೇಲ್ಮಟ್ಟದಲ್ಲಿರಿಸಿರುವುದರಿಂದ, ನಮ್ಮ ಆರ್ಥಿಕ ರಚನೆಯಲ್ಲಿ ಮಹತ್ತರವಾದ ಏರುಪೇರುಗಳಾಗುತ್ತವೆ. ಐದು ವರ್ಷಗಳ ನಂತರ ಭಾರತವು ಕಚ್ಚಾಸೆಣಬಿನಲ್ಲ ಸ್ವಪರಿ ಪೂರ್ಣತೆ ಯನ್ನು ಸಾಧಿಸಿ, ಪಾಕೀಸ್ಥಾನದ ಸೆಣಬನ್ನು ಸಂಪೂರ್ಣವಾಗಿ ನಿರಾ ಕರಿಸಬಹುದು. ಇದಕ್ಕಿಂತಲೂ ಶೀಘ್ರವಾಗಿ, ಪಾಕೀಸ್ಥಾನದ ಹತ್ತಿ ಯಿಲ್ಲದೆ, ಭಾರತವು ಬಟ್ಟೆಯಗಿರಣಿಗಳನ್ನು ನಡೆಸಬಹುದು. ಆದರೆ, ಈಗ ಈ ಸಮಸ್ಯೆ ಬಹು ತೊಡಕಾಗಿದೆ. ಪಾಕೀಸ್ಥಾನ್ ಕಾಮನ್ ವೆಲ್ತಿನ ರಾಷ್ಟ್ರವಾಗಿರುವುದರಿಂದ, ಈ ರೀತಿಯಾಗಿ ಸ್ವೇಚ್ಛೆಯಾಗಿ ವರ್ತಿಸದೆ, ರಾಷ್ಟ್ರಗಳಂತೆ ರೂಪಾಯಿಯ ವಿನಿಮಯ ಬೆಲೆಯನ್ನು ಇಳಿಸ ಬೇಕಾಗಿತ್ತು.

ನಮ್ಮ ರೂಪಾಯಿಯು ಸ್ಟರ್ಲಿಂಗಿಗೆ ಅಧೀನವಾಗಿಲ್ಲ; ರೂಪಾ ಯಿಗೆ ಅಂತರ ರಾಷ್ಟ್ರೀಯಸ್ಥಾನವಿದೆ. ರಿಜರ್ವ್ ಬ್ಯಾಂಕು ಸ್ಟರ್ಲಿಂ ಗನ್ನು ಕೊಳ್ಳುವ ಹಾಗೂ ಮಾರಾಟಮಾಡುವ ಕಾನೂನು ಇಲ್ಲವೆಂದು ಆರ್ಥಿಕ ಸಚಿವರು ಹೇಳಿದ್ದಾರೆ. ಭಾರತವು ಸ್ಟರ್ಲಿಂಗ್ ಕ್ಷೇತ್ರಕ್ಕೆ ಸೇರಿ ರುವುದು ಅನೇಕರಿಗೆ ಸಮ್ಮತವಾಗಿಲ್ಲ; ಇದರಿಂದ ನಮ್ಮದೇಶಕ್ಕೆ ಏನೂ ಪ್ರಯೋಜನವಾಗಿಲ್ಲವೆಂದು ಕೆಲವರ ವಾದ. ಸ್ಟರ್ಲಿಂಗ್ ಕ್ಷೇತ್ರವು ಕಾಮನ್ ವೆಲ್ತಿಗಿಂತ ವಿಸ್ತಾರವಾಗಿದ್ದರೂ, ೧೯೩೨ ರಿಂದ ಕಾಮನ್ ವೆಲ್ತಿನೊಂದಿಗೆ ಇಂಡಿಯಾದ ವ್ಯಾಪಾರ ಸಂಬಂಧಗಳು ನಿಕಟ ವಾಗಿ ಬೆಳೆದಿವೆ. ಒಟ್ಟಾವ ಕರಾರಿನಿಂದ, ಬ್ರಿಟಿಷ್ ಚಕ್ರಾಧಿಪತ್ಯದ ವ್ಯಾಪಾರ ಅತಿವೇಗವಾಗಿ, ಹೆಚ್ಚಿನ ಪ್ರಮಾಣದಲ್ಲಿ ಅಭಿವೃದ್ಧಿಯಾಗಿದೆ. ಆದ್ದರಿಂದ, ವಿನಿಮಯವ್ಯವಸ್ಥೆ ಮತ್ತು ವ್ಯಾಪಾರ ಒಪ್ಪಂದಗಳಿಂದ, ಸ್ಟರ್ಲಿಂಗ್ ಕ್ಷೇತ್ರದ ಸದಸ್ಯರಾಷ್ಟ್ರವಾಗದೇ, ಭಾರತವು ಎಲ್ಲಾ ವ್ಯಾಪಾರ ಅನುಕೂಲಗಳನ್ನೂ ಪಡೆಯಬಹುದು. ಎಂದು ವಾದಿಸಲಾಗಿದೆ.

ಈ ಪ್ರಾವಸರಣೆಗೆ ಪ್ರತಿವಾದವಾಗಿ ಆರ್ಥಿಕಸಚಿವರು ಕೆಲವು ವಿಷಯಗಳನ್ನು ಹೇಳಿದ್ದಾರೆ. ಕಾಮನ್‌ವೆಲ್ತಿಗೆ ಸೇರಿರುವುದರಿಂದ ಭಾರತಕ್ಕೆ ಲಭ್ಯವಾಗುವ ರಾಜಕೀಯ ಅನುಕೂಲಗಳ ವಿಷಯದಲ್ಲಿ ವಾದವಿವಾದಗಳಿಗೆ ಅವಕಾಶವಿಲ್ಲ. ನಮ್ಮದೇಶವು ಕಾಮನ್‌ವೆಲ್ತಿನಲ್ಲಿರುವುದರಿಂದ, ಹೆಚ್ಚು ಡಾಲರುಗಳ ಸೌಲಭ್ಯ ದೊಯುತ್ತದೆ, ಎಂದು ಆರ್ಥಿಕ ಸಚಿವರು ಹೇಳಿದ್ದಾರೆ. " ನಾವು ಸ್ಟರ್ಲಿಂಗ್ ಕ್ಷೇತ್ರದ ಸದಸ್ಯ ರಾಷ್ಟ್ರವಾಗಿದ್ದೇವೆ. ಈ ಕ್ಷೇತ್ರದಲ್ಲಿರುವವರೆಗೂ, ಇವರ ಆಗುಹೋಗುಗಳಿಗನುಸಾರವಾಗಿ ನಾವು ವರ್ತಿಸುವುದು ನಮ್ಮ ಕರ್ತವ್ಯ ಮತ್ತು ಈ ಕರ್ತವ್ಯಗಳನ್ನು ಪಾಲಿಸಲು ನಾವು ಸಿದ್ಧವಾಗಿರಬೇಕು. "

ಸ್ಟರ್ಲಿಂಗ್ ಕ್ಷೇತ್ರದ ಮುಖ್ಯಾಂಶ ವೇನೆಂದರೆ, ಸದಸ್ಯರಾಷ್ಟ್ರಗಳು ಸಂಪಾದಿಸಿದ ದುರ್ಲಭ ನಾಣ್ಯಗಳೆಲ್ಲವನ್ನೂ ಒಟ್ಟಿಗೆ ಸೇರಿಸಲಾಗುತ್ತದೆ. ಸದಸ್ಯರಾಷ್ಟ್ರಗಳು ಡಾಲರುಗಳ ನಷ್ಟಾಂಶವನ್ನು ಪರಿಹರಿಸಲು, ಈ ಕೇಂದ್ರ ಡಾಲರು ನಿಧಿಯಿಂದ ಡಾಲರುಗಳನ್ನು ಪಡೆಯಲು ಅವಕಾಶವಿದೆ. "

ಇಂಡಿಯಾದ ರಾಜಕೀಯ ವಿಭಜನೆಗಿಂತ ಹಿಂದೆ ಭಾರತವು ಈ ನಿಧಿಗೆ ಹೆಚ್ಚು ಡಾಲರುಗಳನ್ನು ಸೇರಿಸುತ್ತಿತ್ತು. ಆದರೆ ಈಗ ನಾವು ಅತಿ ಹೆಚ್ಚಿನ ಪ್ರಮಾಣದಲ್ಲಿ ಡಾಲರುಗಳನ್ನು ಉಪಯೋಗಿಸುತ್ತಿದ್ದೇವೆ. ಆದ್ದರಿಂದ, ಸ್ಟರ್ಲಿಂಗ್ ಕ್ಷೇತ್ರವನ್ನು ಬಿಡಲು ಸಾಧ್ಯವಿಲ್ಲವೆಂದು ಆರ್ಥಿಕ ಸಚಿವರು ಹೇಳಿದ್ದಾರೆ. ತತ್ವಶಃ ಈ ನಿಧಿಯಿಂದ ಡಾಲರುಗಳನ್ನು ಪಡೆಯಲು ಯಾವರಾಷ್ಟ್ರಕ್ಕೂ ಆತಂಕ ವಿಲ್ಲದಿದ್ದರೂ, ಸ್ವೇಚ್ಛೆಯಾಗಿ ಅಮಿತ ಪ್ರಮಾಣದಲ್ಲಿ ಭಾರತವು ಈ ನಿಧಿಯಿಂದ ಡಾಲರುಗಳನ್ನು ಪಡೆಯುವುದಕ್ಕಾಗುವುದಿಲ್ಲ.

ಬ್ರಿಟನ್ನು ಸ್ಟರ್ಲಿಂಗ್ ಕ್ಷೇತ್ರದ ಕಾರ್ಖಾನೆ ಯಾಗಿರುವುದಲ್ಲದೆ, ಕೇಂದ್ರ ಬ್ಯಾಂಕರಾಗಿರುವುದರಿಂದ, ಈ ಕ್ಷೇತ್ರದ ಆರ್ಥಿಕ ರಚನೆಯ ಮುಖ್ಯಆಧಾರವಾಗಿದೆ. ಸರಿಯಾದ ಬೆಲೆಗಳಲ್ಲಿ ಈ ಕ್ಷೇತ್ರದ ಸದಸ್ಯ ರಾಷ್ಟ್ರಗಳಿಗೆ ಸಾಮಾನುಗಳನ್ನು ಸರಬರಾಜ ಮಾಡುವ ಬ್ರಿಟನ್ನಿನ ಶಕ್ತಿಯಮೇಲೆ ನಿಂತಿದೆ ಈ ಕ್ಷೇತ್ರದ ಆರ್ಥಿಕ ಜೀವ. ಇದಲ್ಲದೆ, ಸದಸ್ಯ

ರಾಷ್ಟ್ರಗಳು ಬೇರೆಕಡೆಯಿಂದ ಸಾಮಾನುಗಳನ್ನು ಆಮದು ಮಾಡಿಕೊಳ್ಳಲು, ಸ್ಟರ್ಲಿಂಗ್ ನಿಧಿಯನ್ನು ಯಾವ ರಾಷ್ಟ್ರದ ನಾಣ್ಯದೊಂದಿಗಾದರೂ ವಿನಿಮಯ ಮಾಡುವ ಅವಕಾಶವನ್ನು ಒದಗಿಸಿಕೊಡಬೇಕು. ಚರ್ಚಿಲ್ಲರು, ಟೋರಿ ಪಕ್ಷದವರು ಮತ್ತು ಇತರ ಬ್ರಿಟಿಷ್ ಅರ್ಥಶಾಸ್ತ್ರಜ್ಞರು, ಯುದ್ಧದ ಪಣ್ಣವನ್ನು ಕೊಡಕೂಡದೆಂದೂ ಮತ್ತು ಅಮಿತ ಪ್ರಮಾಣದಲ್ಲಿ ಸಾಮಾನುಗಳನ್ನು ಸ್ಟರ್ಲಿಂಗ್ ನಿಧಿಯ ರಾಷ್ಟ್ರಗಳಿಗೆ ಸರಬರಾಜ ಮಾಡಕೂಡದೆಂದೂ ವಾದಿಸುತ್ತಾ, ಬ್ರಿಟನ್ನಿಗೂ ಮತ್ತು ಇತರ ಸ್ಟರ್ಲಿಂಗ್ ರಾಷ್ಟ್ರಗಳಿಗೂ ಇರುವ ನಿಕಟ ಆರ್ಥಿಕ ಬಾಂಧವ್ಯವನ್ನು ಮರೆತಿದ್ದಾರೆ ಈಗಿನ ಆರ್ಥಿಕ ಸನ್ನಿವೇಶದ ಬ್ರಿಟನ್ನಿನ ಮತ್ತು ಸ್ಟರ್ಲಿಂಗ್ ಕ್ಷೇತ್ರದ ರಾಷ್ಟ್ರಗಳ ಸಂಬಂಧದಲ್ಲಿ, ಈ ಕ್ಷೇತ್ರದ ಸದಸ್ಯ ರಾಷ್ಟ್ರಗಳಿಗೆ ಡಾಲರುಗಳನ್ನು ಒದಗಿಸುವ ಹೊಣೆ ಬ್ರಿಟನ್ನಿನದು. ಇದನ್ನು ಯಾರೂ ವಿರೋಧಿಸಲಾರರು. ಆದರೆ, ಬ್ರಿಟನ್ನು ಡಾಲರುಗಳನ್ನು ಒದಗಿಸಲು ಅಶಕ್ತವಾಗಿರುವುದಲ್ಲದೆ ಸ್ಟರ್ಲಿಂಗ್ ನಿಧಿಯನ್ನು ಇತರ ದೇಶಗಳ ನಾಣ್ಯಗಳೊಂದಿಗೆ ನಿರಾತಂಕವಾಗಿ ವಿನಿಮಯ ಮಾಡುವ ಸೌಲಭ್ಯವನ್ನೂ ಒದಗಿಸಲಾರದು. ವಾಷಿಂಗ್‌ಟನ್ನಿನ ಆರ್ಥಿಕ ಸಮ್ಮೇಳನದನಂತರ ತ್ರಿರಾಷ್ಟ್ರಗಳ ಆರ್ಥಿಕ ಸಚಿವರು ಹೊರಡಿಸಿದ ಪ್ರಕಟನೆಯಲ್ಲಿ ಈ ಅಂಶ ಸ್ಪಷ್ಟವಾಗಿ ವ್ಯಕ್ತವಾಗಿದೆ. ಪೌಂಡ್ ಸ್ಟರ್ಲಿಂಗಿನ ಮೌಲ್ಯದ ಇಳಿವರಿಯಿಂದಲೂ ಮತ್ತು ಇತರ ಆರ್ಥಿಕ ಕ್ರಮಗಳಿಂದಲೂ, ಬ್ರಿಟನ್ನಿನ ಮತ್ತು ಸ್ಟರ್ಲಿಂಗ್ ಕ್ಷೇತ್ರದ ರಾಷ್ಟ್ರಗಳ ಡಾಲರುಗಳ ಸ್ಥಿತಿಯಲ್ಲಿ ಯಾವ ಸುಧಾರಣೆಯೂ ಆಗದೆ, ಈ ಕ್ಷೇತ್ರದ ಡಾಲರು ನಿಧಿ ಕ್ಷೀಣವಾಗುತ್ತಾ ಬಂದರೆ, ಸ್ಟರ್ಲಿಂಗ್ ಕ್ಷೇತ್ರವು ಕೊನೆಗಾಣುವಸ್ಥಿತಿ ಬರಬಹುದೆಂದು ಜಾನ್ ಮಧಾಯರ್‌ರವರು ಸ್ಪಷ್ಟಪಡಿಸಿದ್ದಾರೆ

ಅನಂತರ, ಭಾರತದ ಬೆಲೆಗಳ ಪ್ರಮಾಣದ ಸಮಸ್ಯೆಯನ್ನು ಚರ್ಚಿಸುತ್ತಾ, ಕೆಲವು ಸಟ್ಟಾವ್ಯಾಪಾರಗಳಲ್ಲಿ ಬೆಲೆ ಹೆಚ್ಚಾಗಬಹುದು; ಆದರೆ, ಆರ್ಥಿಕ ದೃಷ್ಟಿಯಿಂದ ನಮ್ಮ ಜೀವನದ ವೆಚ್ಚ ಏರಕೂಡ ದೆಂದು ಹೇಳಿದ್ದಾರೆ. ಅಮೆರಿಕದಿಂದ ತರಿಸಿಕೊಳ್ಳಬೇಕಾದ ಆಹಾರ

ಧಾನ್ಯಗಳೆಲ್ಲವನ್ನೂ ಆಮದುಮಾಡಿಕೊಂಡಿರುವುದರಿಂದ, ನಾವು ಆಹಾರಕ್ಕಾಗಿ ಹೆಚ್ಚು ಹಣವನ್ನು ವೆಚ್ಚಮಾಡಬೇಕಾದುದಿಲ್ಲವೆಂದು ಆರ್ಥಿಕ ಸಚಿವರು ಭರವಸೆಯಿತ್ತಿದ್ದಾರೆ. ಆದರೆ, ಈ ಅಭಿಪ್ರಾಯವನ್ನು ಸಮರ್ಥಿಸುವುದು ಕಷ್ಟ. ಇನ್ನು ಕೆಲವು ತಿಂಗಳ ಕಾಲ ಬೇಕಾಗುವಷ್ಟು ಆಹಾರ ಧಾನ್ಯಗಳನ್ನು ನಾವು ಆಮದು ಮಾಡಿಕೊಂಡಿರಬಹುದು ; ಆದರೆ ಇನ್ನೂ ಆಹಾರದಲ್ಲಿ ಸ್ವಯಂಪೂರ್ಣತೆಯನ್ನು ಸಾಧಿಸಲು ಸಾಧ್ಯವಾಗಿಲ್ಲ. ಆಹಾರ ಧಾನ್ಯಗಳ ಬೆಲೆ ಹೆಚ್ಚಾಗಲೇಬೇಕು. ರಫ್ತಾಗುವ ಸಾಮಾನುಗಳ ಬೆಲೆ ಏರುತ್ತದೆ. ಹತ್ತಿ, ಸೆಣಬು, ಎಣ್ಣೆ ಬೀಜಗಳು, ಟೀ ಮತ್ತು ಕಾಫಿ ಇವುಗಳ ಬೆಲೆ ಹೆಚ್ಚಾಗಲೇಬೇಕು. ಆಹಾರ ಧಾನ್ಯಗಳ ಬೆಲೆಯನ್ನು ನ್ಯವನಾಯ ಇತರ ಕಚ್ಚಾಮಾಲುಗಳೊಂದಿಗೆ ಹೆಚ್ಚಿಸದಿದ್ದರೆ, ಆಹಾರ ಧಾನ್ಯಗಳ ಬೆಳೆಗೆ ಪ್ರೋತ್ಸಾಹವೇ ಇರುವುದಿಲ್ಲ. ಇದರಿಂದ, ೧೯೫೧ ರ ಕೊನೆಯೊಳಗೆ ಆಹಾರದಲ್ಲಿ ಸ್ವಯಂಪೂರ್ಣತೆಯನ್ನು ಹೊಂದುವುದು ಕೇವಲ ಕನಸಾಗುತ್ತದೆ. ಆದ್ದರಿಂದ, ಆಹಾರದ ಸರಬರಾಜನ್ನು ಈಗಿರುವ ಪ್ರಮಾಣದಲ್ಲಿರಿಸಬೇಕಾದರೂ, ಆಹಾರ ಧಾನ್ಯಗಳನ್ನು ಸೂಕ್ತವಾಗಿ ಹೆಚ್ಚಿಸಬೇಕಾಗುತ್ತದೆ.

ನಾಣ್ಯ ಮೌಲ್ಯದ ಇಳಿಸುವಿಕೆಯು ಸಮಯೋಚಿತವಾದ ಎಚ್ಚರಿಕೆಯನ್ನು ಕೊಟ್ಟಿದೆ ಎಂದು ಭಾಷಣದ ಕೊನೆಯಲ್ಲಿ ಆರ್ಥಿಕ ಸಚಿವರು ಹೇಳಿದರು. “ ಈಗ ಅನೇಕ ವರ್ಷಗಳಿಂದ ನಾವು ನಮ್ಮ ಆದಾಯಕ್ಕಿಂತ ಹೆಚ್ಚಾಗಿ ವೆಚ್ಚಮಾಡುತ್ತಿದ್ದೇವೆ. ಆದ್ದರಿಂದ, ಇದು ಕಾಲೋಚಿತವಾದ ಎಚ್ಚರಿಕೆ--ಪರಿಸ್ಥಿತಿ ಕ್ಷೀಣಿಸುವುದಕ್ಕಿಂತ ಮುಂಚೆಯೇ, ನಾವು ಆರ್ಥಿಕ ರಚನೆಯನ್ನು ಸರಿಪಡಿಸಿ, ಆರ್ಥಿಕ ಸನ್ನಿವೇಶವನ್ನು ಸುಧಾರಿಸಬೇಕು ” ಎಂದು ನಿರೂಪಿಸಿದ್ದಾರೆ.

ರೂಪಾಯಿ ಮೌಲ್ಯದ ಇಳಿತಾಯದಿಂದ, ಭಾರತದ ರಫ್ತು ವ್ಯಾಪಾರಕ್ಕೆ ಅನುಕೂಲವಾಗುತ್ತದೆಯೆ ? ಭಾರತವು ಸೆಣಬು, ಸೆಣಬಿನ ವಸ್ತುಗಳು, ಎಣ್ಣೆ ಬೀಜಗಳು, ಮ್ಯಾಂಗನೀಸ್, ಅಭ್ರಕ ಮತ್ತು ಟೀ---ಇವುಗಳನ್ನು ಹೊರದೇಶಗಳಿಗೆ ಕಳುಹಿಸುತ್ತದೆ. ಅದು

ಕದ ವ್ಯಾಪಾರ ತೂಕದಲ್ಲಿ ಭಾರತದ ಮುಖ್ಯ ರಫ್ತು ಸಾಮಾನುಗಳು ಸೆಣಬಿನ ವಸ್ತುಗಳು ಮತ್ತು ಟೀ. ಈ ಎರಡು ಸಾಮಾನುಗಳ ಸಂಬಂಧದಲ್ಲಿ ಅಮೆರಿಕದ ಗಿರಾಕಿಯಾಗಲೀ ಅಥವಾ ಭಾರತದ ಸರಬರಾಜಾಗಲೀ ಬೆಲೆಗಳ ಬದಲಾವಣೆಗಳಿಗನುಸಾರವಾಗಿ ಬದಲಾಯಿಸುವುದಿಲ್ಲ. ಅಂದರೆ, ರೂಪಾಯಿಯ ವಿನಿಮಯ ದರದ ಇಳಿವರಿಯಿಂದ, ನಮ್ಮ ದೇಶದಿಂದ ಅಮೆರಿಕಕ್ಕೆ ಹೆಚ್ಚಿನ ಪ್ರಮಾಣದಲ್ಲಿ ಸಾಮಾನುಗಳು ರಫ್ತಾಗುವ ಸಂಭವವಿಲ್ಲ. ಇದಲ್ಲದೆ, ಸ್ಟರ್ಲಿಂಗ್ ಕ್ಷೇತ್ರದ ಇತರ ರಾಷ್ಟ್ರಗಳಿಗೆ ನಮ್ಮ ಸಾಮಾನುಗಳು ಹೆಚ್ಚಾಗಿ ರಫ್ತಾಗುತ್ತವೆಂಬ ನಿರೀಕ್ಷಣೆ ಕೇವಲ ಭ್ರಾಂತಿ. ಆಮದು ವ್ಯಾಪಾರವನ್ನು ತೆಗೆದುಕೊಂಡರೆ, ನಮ್ಮ ದೇಶಕ್ಕೆ ಹೆಚ್ಚುವರಿ ಸಾಮಾನುಗಳು ಸ್ಟರ್ಲಿಂಗ್ ಪ್ರದೇಶದಿಂದ ಬರುತ್ತವೆ. ಇದರಿಂದ ಸಾಮಾನ್ಯವಾಗಿ ಬ್ರಿಟನ್ನಿನ ಮತ್ತು ಇತರ ಸುಲಭನಾಣ್ಯ ರಾಷ್ಟ್ರಗಳ ಬೆಲೆಯ ಏರುವಿಕೆಯ ಪ್ರಮಾಣದಲ್ಲಿ ಮಾತ್ರ ಈ ಸಾಮಾನುಗಳ ಬೆಲೆ ಏರುವುದು. ಆದರೆ, ಅಮೆರಿಕಾದಿಂದ ಮತ್ತು ಇತರ ಡಾಲರ್ ರಾಷ್ಟ್ರಗಳಿಂದ ಆಮದಾಗಿರುವ ಸಾಮಾನುಗಳ ಬೆಲೆ ಹೆಚ್ಚಾಗಲೇಬೇಕು. ಈ ಮುಂದಿನ ಕೋಷ್ಟಕಗಳಿಂದ ನಮ್ಮ ರಫ್ತು ಆಮದು ಸಾಮಾನುಗಳ ಒಟ್ಟು ಮೊತ್ತ ತಿಳಿದುಬರುತ್ತದೆ.

*

# ಪ್ರಧಾನ ರಫ್ತುಗಳು, ಆಮದುಗಳು

(ಕೋಟಿ ರೂಪಾಯಿಗಳಲ್ಲಿ)

## ರಫ್ತು

ಮಾರ್ಚ ತಿಂಗಳಿಗೆ ಮುಗಿಯುವ ೧೨ ತಿಂಗಳು

| | ೧೯೪೮ | ೧೯೪೯ |
|---|---|---|
| ಸೆಣಬಿನ ನಾರು ಮತ್ತು ವಸ್ತುಗಳು | ೧೨೭·೮೨ | ೧೪೬·೩೧ |
| ಸೆಣಬು | ೨೫·೮೬ | ೨೩·೮೯ |
| ಹತ್ತಿನೂಲು ಮತ್ತು ವಸ್ತುಗಳು | ೨೦·೫೩ | ೪೧·೧೩ |
| ಹತ್ತಿ | ೩೯·೮೭ | ೧೯·೧೫ |
| ಟೀ | ೫೪·೯೦ | ೬೩·೬೯ |
| ಚರ್ಮ | ೧೪·೪೯ | ೧೨·೬೯ |
| ಗೋಂದು, ಅರಗು. | ೯·೮೭ | ೯·೪೯ |
| ಹೊಗೇಸೊಪ್ಪು | ೬·೬೫ | ೮·೩೬ |
| ಸಂಬಾರ ಸಾಮಾನುಗಳು | ೬·೪೨ | ೫·೫೩ |

## ಆಮದು

ಮಾರ್ಚ ತಿಂಗಳಿಗೆ ಮುಗಿಯುವ ೧೨ ತಿಂಗಳು

| | ೧೯೪೮ | ೧೯೪೯ |
|---|---|---|
| ಯಂತ್ರಗಳು | ೫೯·೧೪ | ೮೦·೮೭ |
| ಧಾನ್ಯ, ಹಿಟ್ಟು, ದ್ವಿದಳಧಾನ್ಯ | ೨೩·೦ | ೬೭·೫೧ |
| ಹತ್ತಿನೂಲು ಮತ್ತು ವಸ್ತುಗಳು | ೯·೫೧ | ೧೭·೦೬ |
| ಲೋಹಗಳು | ೨೩·೦೩ | ೩೨·೮೯ |
| ವಾಹನಗಳು | ೨೬·೬೪ | ೩೨·೬೮ |
| ರಸಾಯನಿಕ ಪದಾರ್ಥಗಳು, ಔಷಧಗಳು | ೨೦·೦೪ | ೨೮·೮೯ |
| ವಿದ್ಯುಚ್ಛಕ್ತಿಯ ಸಾಮಾನುಗಳು, ಇತರ ಸಾಧನೆಗಳು | ೯·೭೨ | ೧೧·೪೦ |
| ಎಣ್ಣೆಗಳು | ೩೬·೯೭ | ೩೭·೬೬ |
| ಕಟ್ಲರಿ (ಕತ್ತಿ, ಚೂರಿ, ಚಾಕು) ಮತ್ತು ಲೋಹದ ಸಾಮಾನುಗಳು | ೨೧·೮೩ | ೧೬·೪೪ |
| ಕಾಗದ ಮುಂತಾದುವು | ೧೪·೨೧ | ೧೫·೦೮ |

7

ಈ ಕೆಳಗಿನ ಕೋಷ್ಟಕವು ಪ್ರತ್ಯೇಕ ರಾಷ್ಟ್ರಗಳೊಂದಿಗೆ ಭಾರತದ ಆಮದು ರಫ್ತುಗಳನ್ನು ತೋರಿಸುತ್ತದೆ.

## ಭಾರತದ ಆಮದು ರಫ್ತುಗಳು

(ಕೋಟಿ ರೂಪಾಯಿಗಳಲ್ಲಿ)

ಮಾರ್ಚಿ ೧೯೪೯ ಕ್ಕೆ ಕೊನೆಯಾಗುವ ೧೨ ತಿಂಗಳು

ನಾಣ್ಯ ಮೌಲ್ಯವನ್ನು ಇಳಿಸಿರುವ ರಾಷ್ಟ್ರಗಳು

| | ರಫ್ತು | ಆಮದು | ಸಿಲಕು |
|---|---|---|---|
| ಬ್ರಿಟನ್ | ೯೭·೨೬ | ೧೫೨·೦೪ | —೫೪·೭೮ |
| ಆಸ್ಟ್ರೇಲಿಯ | ೨೦·೫೨ | ೨೦·೯೩ | —೦·೪೧ |
| ಈಜಿಪ್ಟ್ | ೬·೭೨ | ೩೧·೮೯ | ೨೫·೧೭ |
| ಸ್ವೀಡನ್ | ೩·೧೨ | ೬·೦೫ | —೨·೯೩ |
| ಪೋರ್ಚುಗಲ್ ಮತ್ತು ಪೋರ್ಚುಗೀಸ್ ಆಫ್ರಿಕ | ೨·೩೨ | ೨·೬೫ | —೦·೩೩ |
| ಇತರ ದೇಶಗಳು | ೧೨೬·೧೪ | ೧೧೯·೫೭ | +೬·೫೭ |

ನಾಣ್ಯಮೌಲ್ಯವನ್ನು ಇಳಿಸದಿರುವ ರಾಷ್ಟ್ರಗಳು

| | ರಫ್ತು | ಆಮದು | ಸಿಲಕು |
|---|---|---|---|
| ಅಮೆರಿಕ | ೭೦·೬೪ | ೧೦೪·೨೪ | —೩೩·೬೦ |
| ಕೆನಡ | ೩·೩೯ | ೨·೯೧ | ೦·೪೮ |
| ಬೆಲ್ಜಿಯಂ ಮತ್ತು ಬೆಲ್ಜಿಯನ್ ಕಾಂಗೊ | ೬·೮೭ | ೭·೬೨ | —೦·೭೫ |
| ಅರ್ಜೆಂಟೈನ್ (ಗುಣಿತ ವಿನಿಮಯದರಗಳು) | ೧೬·೭೬ | ೬·೬೦ | ೧೦·೧೬ |
| ಸ್ವಿಜರ್ಲೆಂಡ್ | ೧·೨೨ | ೩·೬೬ | ೨·೪೪ |
| ಜಪಾನ್ | ೪·೫೯ | ೬·೩೭ | —೧·೭೮ |

ಈ ಮುಂದಿನ ಕೋಷ್ಟಕಗಳು ಭಾರತದ ವಿವಿಧ ಸಾಮಾನುಗಳ ಆಮದು ಮತ್ತು ರಫ್ತುಗಳನ್ನು ಅಮೆರಿಕದೊಂದಿಗೆ ಮತ್ತು ಬ್ರಿಟನ್ನಿನೊಂದಿಗೆ ತೋರಿಸುತ್ತವೆ.

## ಅಮೆರಿಕದೊಂದಿಗೆ ವ್ಯಾಪಾರ

(ಮಿಲಿಯನ್ ಡಾಲರುಗಳಲ್ಲಿ)

### ರಫ್ತು

| | ೧೯೪೮ | ೧೯೪೯ (ಜನವರಿ–ಜೂನ್) |
|---|---|---|
| ಸೆಣಬು ವಸ್ತುಗಳು | ೧೫೨.೬ | ೬೫.೦ |
| ಪಾನಕದ ಮದ್ಯ | ೧೪.೮ | ೮.೪ |
| ಗೋಂದು, ಮರದ ಅಂಟು | ೧೮.೬ | ೮.೨ |
| ಲೋಹಗಳಲ್ಲದ ಖನಿಜ ವಸ್ತುಗಳು | ೧೭.೦ | ೬.೬ |
| ಸಂಬಾರದ ಪದಾರ್ಥಗಳು | ೮.೨ | ೪.೭ |
| ಕಚ್ಚಾ ಉಣ್ಣೆ | ೮.೨ | ೪.೦ |
| ಇತರ ಸಾಮಾನುಗಳು | ೭೮.೫ | ೨೯.೫ |
| ಒಟ್ಟು | ೨೫೭.೯ | ೧೨೬.೪ |

### ಆಮದು

| | ೧೯೪೮ | ೧೯೪೯ (ಜನವರಿ–ಜೂನ್) |
|---|---|---|
| ಯಂತ್ರಗಳು | ೫೯.೬ | ೪೨.೭ |
| ಆಹಾರ | ೬೭.೫ | ೭೭.೦ |
| ವಾಹನಗಳು | ೭೮.೮ | ೧೫.೦ |
| ಪೆಟ್ರೋಲಿಯಂ ವಸ್ತುಗಳು | ೨೦.೬ | ೧೫.೭ |
| ಲೋಹ ವಸ್ತುಗಳು | ೨೯.೬ | ೧೫.೨ |
| ಬಣ್ಣಗಳು, ವಾರ್ನಿಶ್ | ೧೯.೪ | ೧.೫ |
| ಇತರ ಸಾಮಾನುಗಳು | ೪೧.೨ | ೨೬.೨ |
| ಒಟ್ಟು | ೨೭೨.೭ | ೧೪೮.೫ |

## ಬ್ರಿಟನ್ನಿನೊಂದಿಗೆ ವ್ಯಾಪಾರ

(ಮಿಲಿಯನ್ ಪೌಂಡುಗಳಲ್ಲಿ)

| ರಫ್ತು | ೧೯೪೮ | ೧೯೪೯ (ಜನವರಿ-ಜೂನ್) | ಆಮದು | ೧೯೪೮ | ೧೯೪೯ (ಜನವರಿ-ಜೂನ್) |
|---|---|---|---|---|---|
| ಟೀ | ೩೫.೧ | ೧೮.೮ | ಯಂತ್ರ | ೩೪.೦ | ೨೦.೯ |
| ಸೆಣಬು ವಸ್ತುಗಳು | ೧೫.೮ | ೫.೧ | ವಾಹನಗಳು | ೧೨.೮ | ೯.೬ |
| ಬೀಜಗಳು ಮತ್ತು ಕಾಯಿಗಳು | ೯.೬ | ೨.೫ | ರಸಾಯನಿಕ ಪದಾರ್ಥಗಳು (ಔಷಧಗಳು, ಬಣ್ಣಗಳು) | ೯.೮ | ೭.೩ |
| ಹದಮಾಡಿದ ಚರ್ಮದ ವಸ್ತುಗಳು | ೭.೨ | ೪.೮ | ವಿದ್ಯುಚ್ಛಕ್ತಿಯ ವಸ್ತುಗಳು | ೬.೦ | ೫.೮ |
| ಕಚ್ಚಾ ಸೆಣಬು | ೫.೯ | ೩.೫ | ಹತ್ತಿ ನೂಲು ಮತ್ತು ವಸ್ತುಗಳು | ೭.೦ | ೮.೫ |
| ಇತರ ಸಾಮಾನುಗಳು | ೨೨.೬ | ೧೧.೪ | ಇತರ ಸಾಮಾನುಗಳು | ೨೭.೦ | ೨೦.೯ |
| ಒಟ್ಟು | ೯೬.೨ | ೪೬.೧ | ಒಟ್ಟು | ೯೬.೬ | ೭೩.೦ |

ಈ ಅಂಕಿ ಅಂಶಗಳಿಂದ ಮುಖ್ಯವಾಗಿ ಭಾರತದ ವ್ಯಾಪಾರ ರಚನೆ ವ್ಯಕ್ತವಾಗುತ್ತದೆ. ಅಂದರೆ, ರಫ್ತು ವ್ಯಾಪಾರಕ್ಕಿಂತ, ಆಮದು ವ್ಯಾಪಾರದ ಪ್ರಮಾಣವೇ ಹೆಚ್ಚಾಗಿದೆ.

ಭಾರತದ ವಿದೇಶಿ ವ್ಯಾಪಾರ ರಚನೆಯಲ್ಲಿ ಭಾರತ ಮತ್ತು ಪಾಕೀಸ್ಥಾನಗಳ ವ್ಯಾಪಾರ ತೂಕವನ್ನು ಈ ಸಂದರ್ಭದಲ್ಲಿ ಪರಿಶೀಲಿಸುವುದು ಆವಶ್ಯಕ. ಪಾಕೀಸ್ಥಾನ ಸರಕಾರವು ರೂಪಾಯಿಯ ಮೌಲ್ಯವನ್ನು ಇಳಿಸಿಲ್ಲ. ಪಾಕೀಸ್ಥಾನದ ಈ ನಿರ್ಧಾರದಿಂದ, ಈ ಎರಡು ರಾಷ್ಟ್ರಗಳ ಆರ್ಥಿಕ ರಚನೆಗಳಲ್ಲಿ ಮಹತ್ತರವಾದ ಏರುಪೇರುಗಳಾಗುತ್ತವೆ. ಆದರೆ, ಪಾಕೀಸ್ಥಾನದ ಈ ನಿರ್ಧಾರ ಅಷ್ಟು ಅನಿರೀಕ್ಷಿತವೇ? ಪಾಕೀಸ್ಥಾನದ ಆರ್ಥಿಕ ವಿದ್ಯಮಾನಗಳನ್ನು ಗಮನಿಸಿದವರಿಗೆ, ಈ ಅಂಶದಲ್ಲಿ ಏನೂ ಆಶ್ಚರ್ಯವಿಲ್ಲ. ಆ ರಾಷ್ಟ್ರದ ವಿಲಕ್ಷಣ ಆರ್ಥಿಕ ನೀತಿಯ ಪ್ರದರ್ಶನವೊಂದು ಇದು. ಪಾಕೀಸ್ಥಾನ ಸರಕಾರವು ಈ ನಿರ್ಧಾರಕ್ಕೆ ಕಾರಣವನ್ನು ಕೊಡಲು ಪ್ರಯತ್ನಿಸಿದೆ. ಪ್ರಜೆಗಳು ಇದನ್ನು ಆಹ್ವಾನಿಸಿದ್ದಾರೆಂದು ಸರಕಾರದ ದೃಢ ನಂಬಿಕೆ. ಪಾಕೀಸ್ಥಾನಕ್ಕೆ ಡಾಲರು ಸಮಸ್ಯೆಯಿಲ್ಲದಿರುವಾಗ, ರೂಪಾಯಿಯ ವಿನಿಮಯ ಬೆಲೆಯನ್ನು ಮೇಲ್ಮಟ್ಟದಲ್ಲಿರಿಸುವುದು ಸೂಕ್ತವಾಗಿ ತೋರಿರಬಹುದು. ಹಣದುಬ್ಬರದ ವೃದ್ಧಿಯನ್ನು ತಡೆಗಟ್ಟಿ, ಜೀವನದ ವೆಚ್ಚವನ್ನು ಕಡಮೆಮಾಡುವ ಧ್ಯೇಯ ಇದರಿಂದ ಸಾಧನೆಯಾಗುತ್ತದೆಂಬ ಆಶೆ ಪಾಕೀಸ್ಥಾನದ ಸರಕಾರದಲ್ಲಿ ಅಂಕುರಿಸಿರಬಹುದು. ಉತ್ತರ ಪಾಕೀಸ್ಥಾನದ ಹಣದುಬ್ಬರವೇ ರೂಪಾಯಿಯ ಮೌಲ್ಯದ ಇಳಿವರಿಯನ್ನು ವಿರೋಧಿಸಲು ಪ್ರಧಾನಕಾರಣವಾಯಿತೆಂದು, ಪಾಕೀಸ್ಥಾನ ಸರಕಾರವು ಬಹು ಆಶ್ಚರ್ಯಕರವಾದ ವಾದವನ್ನು ಹೂಡಿದೆ. ಆದರೆ, ರೂಪಾಯಿಯ ಮೇಲ್ಮಟ್ಟದ ವಿನಿಮಯ ದರದಿಂದ, ಸೆಣಬಿಗೆ ಗಿರಾಕಿಯಿಲ್ಲದೆ, ಅದರ ಬೆಲೆ ಬಹು ಮಟ್ಟಿಗೆ ಇಳಿಯುತ್ತದೆಂದು ಉತ್ತರ ಪಾಕೀಸ್ಥಾನದ ರೈತರು ಹೆದರಿದ್ದಾರೆ. ಎಷ್ಟು ಕಾಲದವರೆಗೆ ಪಾಕೀಸ್ಥಾನವು ರೂಪಾಯಿಯ ವಿನಿಮಯ ಬೆಲೆಯನ್ನು ಈ ರೀತಿ ಮೇಲ್ಮಟ್ಟದಲ್ಲಿರಿಸಲು ಸಾಧ್ಯ. ಈ

ಸಂದರ್ಭದಲ್ಲಿ. ಲಂಡನ್ನಿನ ಪ್ರಮುಖ ಆರ್ಥಿಕ ವಾರಪತ್ರಿಕೆಯಾದ ಎಕಾನಮಿಸ್ಟ್ ಪತ್ರಿಕೆಯ ಅಭಿಪ್ರಾಯ ಗಮನಾರ್ಹವಾಗಿದೆ.

“ ಪಾಕೀಸ್ಥಾನದ ಘಟನೆ ಕೇವಲ ಕ್ಷಣಿಕವಾದುದು. ಬ್ರಿಟನ್ನು ಸ್ಟರ್ಲಿಂಗಿನ ಮೌಲ್ಯದ ಇಳಿವರಿಯನ್ನು ಪಾಕೀಸ್ಥಾನಕ್ಕೆ ಮೊದಲೇ ತಿಳಿಸಲಿಲ್ಲವಾದುದರಿಂದ, ಈ ಹೊಸರಾಷ್ಟ್ರದ ಸ್ಥಾನಮಾನಗಳಿಗೆ ಲೋಪ ಬಂದಿರಬಹುದು. ಇನ್ನೊಂದು ವಿಷಯ—ಪಾಕೀಸ್ಥಾನವು ಡಾಲರುಗಳನ್ನು ಸಂಪಾದಿಸುವ ಶಕ್ತಿಯನ್ನು ಹೊಂದಿದೆ. ಇದಲ್ಲದೆ, ಸ್ಟರ್ಲಿಂಗಿಗೆ ಅನುಸಾರವಾಗಿ ರೂಪಾಯಿಯ ವಿನಿಮಯ ಬೆಲೆಯನ್ನು ಇಳಿಸಿದ ಭಾರತಕ್ಕಿಂತಲೂ, ಪಾಕೀಸ್ಥಾನದ ಘನತೆ ಹೆಚ್ಚಿನದು ಎಂದು ತೋರಿಸುವ ಅವಕಾಶವೂ ಒಂದು ಕಾರಣ ವಾಗಿರಬಹುದು. ಈ ನಿರ್ಧಾರದಿಂದ ಪಾಕೀಸ್ಥಾನದ ರೂಪಾಯಿಯ ಸ್ಟರ್ಲಿಂಗ್ ವಿನಿಮಯಬೆಲೆ ೨ ಷಿಲಿಂಗ್ ೩ ಪೆನ್ನಿಗಳು ಅಥವಾ ಇಂಡಿಯದ ರೂಪಾಯಿಗಿಂತ ನೇಕಡ ೪೪ ರಷ್ಟು ಹೆಚ್ಚಾಗುತ್ತದೆ. ಎರಡು ನಾಣ್ಯಗಳನ್ನೂ ಯಾವ ವ್ಯತ್ಯಾಸವಿಲ್ಲದೆ ವಿನಿಯಮಾಡ ಬಹುದಾಗಿರುವುದರಿಂದಲೂ, ಎರಡು ರಾಷ್ಟ್ರಗಳ ಗಡಿಗಳಲ್ಲಿ ವಿನಿಮಯ ಹತೋಟಿಗಳಿಲ್ಲದಿರುವುದರಿಂದಲೂ, ಸ್ಥಿತಿ ಬಹುಕಾಲ ಉಳಿಯಲಾರದು. ”

‘ಇದರಿಂದ ಎರಡು ರಾಷ್ಟ್ರಗಳ ವ್ಯಾಪಾರದಲ್ಲಿ ಆಗುವ ಬದಲಾವಣೆಗಳೇನು? ೧೯೪೯ ನೆಯ ಇಸವಿ ಮಾರ್ಚಿ ಕೊನೆಗೆ ಭಾರತದ ಒಂದು ವರ್ಷದ ಒಟ್ಟು ವ್ಯಾಪಾರ ಪ್ರಮಾಣ ೧,೧೩೧ ಕೋಟಿ ರೂಪಾಯಿಗಳು. ಇದೇಕಾಲದಲ್ಲಿ ಇಂಡಿಯಾ–ಪಾಕೀಸ್ಥಾನ್ ವ್ಯಾಪಾರ ೧೯೫ ಕೋಟಿ ರೂಪಾಯಿಗಳೆಂದು ಅಂದಾಜು ಮಾಡಲಾಗಿದೆ. ಇಂಡಿಯಾದ ಒಟ್ಟು ವ್ಯಾಪಾರ ತೂಕದಲ್ಲಿ ಪ್ರತಿಕೂಲ ೨೨೩ ಕೋಟಿರೂಪಾಯಿಗಳು, ಪಾಕೀಸ್ಥಾನದೊಂದಿಗೆ ವ್ಯಾಪಾರದಲ್ಲಿ ನಷ್ಟಾಂಶ ೪೧ ಕೋಟಿರೂಪಾಯಿಗಳು. ಮುಖ್ಯವಾಗಿ, ಸೆಣಬು ಮತ್ತು ಹತ್ತಿ, ಪಾಕೀಸ್ಥಾನದಿಂದ ಆಮದಾದ ಒಟ್ಟು ಪ್ರಮಾಣದ ನೇಕಡ ೮೦ ರಷ್ಟು. ಈ ಕಾಲದಲ್ಲಿ ೧೩೧ ಕೋಟಿ ರೂಪಾಯಿಗಳ ಆಹಾರ ಧಾನ್ಯಗಳನ್ನು ಆಮದುಮಾಡಿಕೊಂಡಿದ್ದೇವೆ. ಇದರಲ್ಲಿ,

ಪಾಕೀಸ್ಥಾನದಿಂದ ೫೬,೦೦೦ ಟನ್ನುಗಳ ಆಹಾರವನ್ನು ೧೫೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ತರಿಸಿಕೊಂಡಿದ್ದೇವೆ.

ಪಾಕೀಸ್ಥಾನದಿಂದ ಭಾರತವು ತರಿಸಿಕೊಳ್ಳಬೇಕಾದ ಮುಖ್ಯ ಕಚ್ಚಾಸಾಮಾನುಗಳು ಸೆಣಬು ಮತ್ತು ಹತ್ತಿ. ೧೯೪೮—೪೯ ರಲ್ಲಿ ಇಂಡಿಯಾ ಪಾಕೀಸ್ಥಾನದಿಂದ ೪೬ ಲಕ್ಷ ಬೇಲುಗಳಷ್ಟು ಸೆಣಬನ್ನು ತರಿಸಿಕೊಂಡಿದೆ. ೧೯೪೮—೪೯ ರಲ್ಲಿ ಪಾಕೀಸ್ಥಾನ ಒಟ್ಟು ೭೬೦,೦೦೦ ಬೇಲುಗಳಷ್ಟು ಹತ್ತಿಯನ್ನು ರಫ್ತುಮಾಡಿತು. ಇವರ ಪೈಕಿ ೩೭೫,೦೦೦ ಬೇಲುಗಳು ಭಾರತಕ್ಕೂ, ೩೮೫,೦೦೦ ಬೇಲುಗಳು ಯೂರೋಪಿನ ದೇಶಗಳಿಗೂ ರಫ್ತಾಯಿತು. ಭಾರತದ ರಾಜಕೀಯ ವಿಭಜನೆಯ ದುರಂತ, ನಮ್ಮ ಮುಖ್ಯ ಕೈಗಾರಿಕೆಯಾದ ಸೆಣಬು ಕೈಗಾರಿಕೆಯ ಅವ್ಯವಸ್ಥೆ. ಸೆಣಬು ಬೆಳೆಯುವ ಪ್ರದೇಶವು ಪಾಕೀಸ್ಥಾನದಲ್ಲಿ ಸೆಣಬು ಕೈಗಾರಿಕೆಗಳು ಭಾರತದಲ್ಲಿ. ಪಾಕೀಸ್ಥಾನಕ್ಕೂ, ಭಾರತಕ್ಕೂ, ಕಚ್ಚಾ ಮಾಲುಗಳ ಮತ್ತು ಪದಾರ್ಥಗಳ ವಿನಿಮಯದ ಒಪ್ಪಂದದ ಮೇಲೆ ಭಾರತದ ಸೆಣಬುಕೈಗಾರಿಕೆ ಉಳಿಯಬೇಕು, ಪಾಕೀಸ್ಥಾನದ ಸೆಣಬಿಗೆ ಗಿರಾಕಿ ಇರಬೇಕು. ಪಾಕೀಸ್ಥಾನ್ ಸ್ಟರ್ಲಿಂಗ್ ಕ್ಷೇತ್ರಕ್ಕೆ ಸೇರಿದ್ದರೂ, ಅಪಾಯಕರವಾದ ದಾರಿಯಲ್ಲಿ ನಡೆಯುತ್ತಿದೆ. ಸೆಣಬನ್ನು ಬೆಳೆಯುವ ಪ್ರದೇಶ ಪಾಕಿಸ್ಥಾನದಲ್ಲಿರಬಹುದು; ಆದರೆ, ಅದನ್ನು ಉಪಯೋಗಿಸಿ, ಪಾಕೀಸ್ಥಾನದ ಸೆಣಬಿಗೆ ಗಿರಾಕಿಯನ್ನೊದಗಿಸುವ ಕೈಗಾರಿಕೆ ಇಂಡಿಯಾದೇಶದಲ್ಲಿದೆ. ಈ ಮುಖ್ಯ ಅಂಶವನ್ನು ಪಾಕೀಸ್ಥಾನ ಮರೆಯಬಾರದು. ಸಾಮಾನ್ಯವಾಗಿ, ಇಂಡಿಯಾದ ಸಣಬು ಗಿರಣಿಗಳು ವರ್ಷಕ್ಕೆ ೭೨ ಲಕ್ಷ ಬೇಲುಗಳಷ್ಟು ಸೆಣಬನ್ನು ಉಪಯೋಗಿಸುತ್ತವೆ. ಈ ವರ್ಷ ನಮ್ಮ ದೇಶದಲ್ಲೇ ೨೯ ಲಕ್ಷ ಬೇಲುಗಳಷ್ಟು ಸೆಣಬು ಬೆಳೆಯುವ ನಿರೀಕ್ಷಣೆ ಇದೆ. ಆದುದರಿಂದ ಇದರೊಂದಿಗೆ ಈಗ ಇರುವಸೆಣಬಿನಿಂದ, ಸುಮಾರು ಆರುತಿಂಗಳು ಕಾಲ ಗಿರಣಿಗಳು ನಡೆಯಲು ಅವಕಾಶವಿದೆ. ನಮ್ಮ ಸೆಣಬುಕೈಗಾರಿಕೆ ಪಾಕೀಸ್ಥಾನದ ಕಚ್ಚಾ ಸೆಣಬಿನ ಆಮದಿಗೆ ಅಧೀನವಾದರೆ, ನೂರಕ್ಕೆ ೭೨ ರಷ್ಟು ಡಾಲರುಗಳನ್ನು ಸಂಪಾದಿಸುವ ನಮ್ಮ ಕೈಗಾರಿಕೆಯು

ಪ್ರಗತಿಹೊಂದಲಾರದು. ಈಗಾಗಲೇ, ಪಾಕೀಸ್ಥಾನದ ವರ್ತನೆಯನ್ನು ಪ್ರತಿಭಟಿಸಿ, ಸೆಣಬಿನಲ್ಲಿ ಸ್ವಪರಿಪೂರ್ಣತೆಯನ್ನು ಸಾಧಿಸಲು ರೀತಿ ನೀತಿಗಳ ಯೋಜನೆ ರೂಪುಗೊಂಡಿದೆ. ಸೆಪ್ಟೆಂಬರ್ ತಿಂಗಳ ಕೊನೆಯ ವಾರದ ಪ್ರಾರಂಭದಲ್ಲಿ ಕೈಗಾರಿಗೆ ಹಾಗೂ ವ್ಯಾಪಾರ ಪ್ರತಿನಿಧಿಗಳ ಮತ್ತು ಸರಕಾರದ ಪ್ರತಿನಿಧಿಗಳ ಸಮ್ಮೇಳನ ಸೇರಿ, ಪಾಕೀಸ್ಥಾನದ ವರ್ತನೆಯಿಂದ ಉತ್ಪನ್ನವಾಗಲಿರುವ ವ್ಯಾಪಾರ ತೊಡಕುಗಳನ್ನೂ, ಕಚ್ಚಾ ಸೆಣಬು ಮತ್ತು ಹತ್ತಿಯ ಆಮದಿನ ವಿಷಯಗಳನ್ನೂ, ಚರ್ಚಿಸಲಾಗಿದೆ. ಕಚ್ಚಾ ಸೆಣಬಿನ ಮತ್ತು ಸೆಣಬು ವಸ್ತುಗಳ ಸಂಬಂಧದಲ್ಲಿ ಆಗಿರುವ ನಿರ್ಧಾರ ಪ್ರಕಟವಾಗಿದೆ. ಅದರಂತೆ, ಕಚ್ಚಾ ಸೆಣಬಿನ ಬೆಲೆಯನ್ನು ಮೊದಲಿನ ಪ್ರಮಾಣಲ್ಲೇ ಇರಿಸಬೇಕೆಂದೂ, ತಯಾರಾದ ಸೆಣಬಿನ ವಸ್ತುಗಳ ಬೆಲೆಯನ್ನು ನಿರ್ದಿಷ್ಟವಾಗಿ ನಿರ್ಧರಿಸಬೇಕೆಂದೂ ತೀರ್ಮಾನವಾಗಿದೆ. ಈ ವ್ಯವಸ್ಥೆಯು ಪಾಕೀಸ್ಥಾನದಿಂದ ಹೆಚ್ಚಿನ ಬೆಲೆಯಲ್ಲಿ ಸೆಣಬನ್ನು ಆಮದುಮಾಡಿಕೊಳ್ಳುವುದನ್ನು ತಡೆಗಟ್ಟುತ್ತದೆ. ಪಾಕಿಸ್ಥಾನದ ಸಂಕುಚಿತ ಆರ್ಥಿಕ ನೀತಿಯ ಫಲವಾಗಿ ಭಾರತವು ಕಚ್ಚಾ ಸೆಣಬಿನ ಸರಬರಾಜಿನಲ್ಲಿ ಸ್ವಪರಿಪೂರ್ಣತೆಯನ್ನು ಹೊಂದಲು ಪ್ರೋತ್ಸಾಹವಾಗಿದೆ. ೧೯೫೧ ರ ಸಮಯಕ್ಕೆ ನಮಗೆ ಬೇಕಾಗುವಷ್ಟು ಕಚ್ಚಾ ಸೆಣಬನ್ನು ಬೆಳೆಯುವ ಒಂದು ಯೋಜನೆಯೂ ಸಹಾ ರೂಪುಗೊಂಡಿದೆ. ಸೆಣಬು ಬೆಳೆ ಅತ್ಯಂತ ಲಾಭದಾಯಕವಾದುದು.

ಪಾಕೀಸ್ಥಾನದ ಸೆಣಬಿಗೆ ಭಾರತದ ಗಿರಣಿಗಳ ಗಿರಾಕಿ ತಪ್ಪಿದರೆ, ಅಷ್ಟು ಅಪಾರವಾದ ಸೆಣಬನ್ನು ಇಟ್ಟುಕೊಳ್ಳಲೂ ಕೂಡ ಪಾಕೀಸ್ಥಾನದಲ್ಲಿ ಸರಿಯಾದ ವ್ಯವಸ್ಥೆಯಿಲ್ಲ. ಪಾಕೀಸ್ಥಾನ ಸರಕಾರದ ಈ ಧೋರಣೆಯಿಂದ ಬಡ ರೈತರು ಅಪಾರವಾದ ಕಷ್ಟ ನಷ್ಟಗಳಿಗೆ ಈಡಾಗುತ್ತಾರೆ. ದೀರ್ಘಕಾಲದ ಯೋಜನೆಯಲ್ಲಿ, ಪಾಕೀಸ್ಥಾನ ಬೇರೆ ದೇಶಗಳಿಗೆ ತನ್ನ ಸೆಣಬನ್ನು ಮಾರಟ ಮಾಡಬಹುದು. ಆದರೆ, ಇದು ಸಾಧ್ಯವಾಗಲಾರದು. ಅನಂತರ, ಪಾಕೀಸ್ಥಾನವೇ ಸೆಣಬು ಗಿರಣಿಗಳನ್ನು ಸ್ಥಾಪಿಸಿ, ಕಚ್ಚಾ ಸೆಣಬನ್ನು ಅಲ್ಲಿಯೇ

ಉಪಯೋಗಿಸುವ ಸಂಭವವಿದೆ. ಇದನ್ನು ಬಹು ಸೂಕ್ಷ್ಮವಾಗಿ ಪರಿಶೀಲಿಸಿದರೆ, ಇದೂ ಸಹಾ ಸಾಧ್ಯವಾಗಲಾರದೆಂಬುದು ವ್ಯಕ್ತವಾಗುತ್ತದೆ. ಸೆಣಬು ವಸ್ತುಗಳ ತಯಾರಿಕೆಗೆ ಚಿಟ್ಟಿಗಾಂಗ್‌ನಲ್ಲಿ ಕೆಲವು ಗಿರಣಿಗಳನ್ನು ಸ್ಥಾಪಿಸಬಹುದು; ಮತ್ತು ಸೆಣಬು ಪ್ರದೇಶಗಳಲ್ಲಿ ಸಂಚಾರ ಸೌಕರ್ಯಗಳಿರುವ ಕಡೆ ಗಿರಣಿಗಳನ್ನು ಸ್ಥಾಪಿಸಬಹುದು. ಆದರೆ, ಕೈಗಾರಿಕಾ ಸ್ಥಾಪನೆಯ ತತ್ತ್ವಗಳನ್ನು ಪರಿಶೀಲಿಸಿದರೆ, ಇನ್ನು ಬಹುಕಾಲದ ಮೇಲೂ ಪಾಕೀಸ್ಥಾನ ಸೆಣಬುಗಿರಣಿಗಳನ್ನು ಸ್ಥಾಪಿಸಿ, ಕಚ್ಚಾ ಸೆಣಬನ್ನು ಉಪಯೋಗಿಸಲು ಅಸಾಧ್ಯವೆಂದು ತಿಳಿದುಬರುತ್ತದೆ.

ಪಾಕೀಸ್ಥಾನದ ಹತ್ತಿಯು ಹೆಚ್ಚಿನ ಪ್ರಮಾಣವನ್ನು ಇಂಡಿಯಾ ಮತ್ತು ಬ್ರಿಟನ್ನು ಕೊಳ್ಳುತ್ತಿವೆ. ಈಗ ಬ್ರಿಟನ್ನಾಗಲೀ, ಭಾರತವಾಗಲೀ ಪಾಕೀಸ್ಥಾನದ ಹತ್ತಿಯನ್ನು ಕೊಳ್ಳುವಹಾಗಿಲ್ಲ. ಮೊದಲು ಪಾಕೀಸ್ಥಾನದ ಹತ್ತಿ ಬೇಲಿಗೆ ೯೮೮ ರೂಪಾಯಿಗಳಿತ್ತು; ಈಗ ಭಾರತದ ರೂಪಾಯಿಯ ಮೌಲ್ಯದ ಇಳಿವರಿಯಿಂದ ಅದೇ ಹತ್ತಿ ಬೇಲಿಗೆ, ೧,೪೨೫ ರೂಪಾಯಿಗಳಾಗುತ್ತದೆ. ಸ್ಟರ್ಲಿಂಗ್ ರಾಷ್ಟ್ರಗಳು ಇನ್ನು ಮೇಲೆ ಪೂರ್ವ ಆಫ್ರಿಕ, ಈಜಿಪ್ಟ್ ಮತ್ತು ಸೂಡಾನ್—ಈ ದೇಶಗಳಿಂದ ಹತ್ತಿಯನ್ನು ಆಮದು ಮಾಡಿಕೊಳ್ಳುತ್ತವೆ. ಪಶ್ಚಿಮ ಯೂರೋಪಿನ ರಾಷ್ಟ್ರಗಳು ಮಾರ್ಷಲ್ ಡಾಲರುಗಳ ಸಹಾಯದಿಂದ ಅಮೆರಿಕದ ಹತ್ತಿಯನ್ನು ತರಿಸಿಕೊಳ್ಳಲು ಅನುಕೂಲವಾಗುತ್ತದೆ. ಭಾರತವು ಪಾಕೀಸ್ಥಾನದ ಹತ್ತಿಯನ್ನು ಕೊಳ್ಳದೆ ಇರಬಹುದು; ಬೇರೆ ಕಡೆಯಿಂದ ಹತ್ತಿಯನ್ನು ಆಮದು ಮಾಡಿಕೊಳ್ಳಲು ಸೌಲಭ್ಯಗಳಿವೆ ೧೯೪೮-೧೯೪೯ ರಲ್ಲಿ ಪಾಕೀಸ್ಥಾನ ೯೮೦,೦೦೦ ಬೇಲುಗಳಷ್ಟು ಹತ್ತಿಯನ್ನು ಬೆಳೆಯಿತು. ೭೬೦,೦೦೦ ಬೇಲುಗಳಷ್ಟು ರಫ್ತಾಗಿ, ಪಾಕೀಸ್ಥಾನದ ಗಿರಣಿಗಳು ೯೫,೦೦೦ ಬೇಲುಗಳಷ್ಟು ಹತ್ತಿಯನ್ನು ಉಪಯೋಗಿಸಿದವು. ಇದರಿಂದ, ಒಟ್ಟು ೮೫೫,೦೦೦ ಬೇಲುಗಳಷ್ಟು ಹತ್ತಿ ಉಪಯೋಗವಾಗಿ, ೧೨೫,೦೦೦ ಬೇಲುಗಳಷ್ಟು ಹತ್ತಿ ಉಳಿದಿದೆ; ಈ ವರ್ಷ ಹತ್ತಿಯ ಬೆಳೆ ೧,೧೦೦,೦೦೦

ಬೇಲುಗಳಷ್ಟು ಆಗಬಹುದೆಂದು ನಿರೀಕ್ಷಣೆ ಇದೆ. ಒಟ್ಟು ೧,೨೫,೦೦೦ ಬೇಲುಗಳಷ್ಟು ಹತ್ತಿಯನ್ನು ಈ ವರ್ಷ ಮಾರಾಟಮಾಡಬೇಕಾಗುತ್ತದೆ. ಇಷ್ಟು ಹತ್ತಿಯನ್ನು ಯಾವ ದೇಶದಲ್ಲಿ ಮಾರಾಟಮಾಡಲು ಸಾಧ್ಯವಾಗುತ್ತವೆ? ಭಾರತವಾಗಲೀ, ಬ್ರಿಟನ್ನಾಗಲೀ, ಇತರ ಸ್ಟರ್ಲಿಂಗ್ ರಾಷ್ಟ್ರಗಳಾಗಲೀ, ಪಾಕೀಸ್ಥಾನದ ಹತ್ತಿಯನ್ನು ಕೊಳ್ಳುವುದಿಲ್ಲ. ಪಾಕೀಸ್ಥಾನದ ಹತ್ತಿಯನ್ನು ತರಿಸಿಕೊಳ್ಳದಿದ್ದರೆ, ಭಾರತದ ಹತ್ತಿಯ ಗಿರಣಿಗಳಿಗೆ ತೊಂದರೆಯಾಗಬಹುದು. ವಿದೇಶಿ ನಾಣ್ಯಗಳ ಅಭಾವವಿರುವ ಕಾಲದಲ್ಲಿ ಬೇರೆ ಕಡೆಯಿಂದ ಹತ್ತಿಯನ್ನು ತರಿಸಿಕೊಳ್ಳುವುದು ಕಷ್ಟ. ಪಾಕೀಸ್ಥಾನದ ಹತ್ತಿಯನ್ನು ಉಪಯೋಗಿಸಿ ಬಟ್ಟೆ ತಯಾರುಮಾಡಲು ನಮ್ಮ ಗಿರಣಿಗಳಿಗೆ ಸುಲಭ. ಗಿರಣಿಗಳ ಯಂತ್ರೋಪಕರಣಗಳನ್ನು ಸೂಕ್ತವಾಗಿ ಬದಲಾಯಿಸಿ, ಬೇರೆ ದೇಶಗಳ ಹತ್ತಿಯನ್ನು ಉಪಯೋಗಿಸಬಹುದು; ಇದರಿಂದ ಕಾಲವಿಳಂಬವಾಗುತ್ತದೆ; ಅಪಾರ ವೆಚ್ಚವೂ ಆಗುತ್ತದೆ.

ಇದರಿಂದ, ಎರಡು ರಾಷ್ಟ್ರಗಳಿಗೂ ತೊಂದರೆ. ಪಾಕೀಸ್ಥಾನದ ರೂಪಾಯಿಯ ವಿನಿಮಯ ಬೆಲೆ ಅತಿ ಹೆಚ್ಚಾಗಿದೆ. ಇದನ್ನು ವ್ಯಾಪಾರ ಮತ್ತು ವಿನಿಮಯ ಹತೋಟಿಗಳಿಂದ ಊರ್ಜಿತಗೊಳಿಸಬೇಕು. ಇದರಿಂದ, ಪಾಕೀಸ್ಥಾನದ ರಫ್ತು ವ್ಯಾಪಾರಕ್ಕೆ ತೊಂದರೆಯಾಗುತ್ತದೆ. ರಫ್ತುವ್ಯಾಪಾರಕ್ಕೆ ಉತ್ತೇಜನಕೊಡಲು, ಈಗಾಗಲೇ ಪಾಕೀಸ್ಥಾನ ಸರಕಾರವು ಕಚ್ಚಾ ಸೆಣಬಿನಮೇಲಿದ್ದ ರಫ್ತುಸುಂಕವನ್ನು ತೆಗೆದು ಹಾಕಿರುವುದರಿಂದ, ಸೆಣಬಿನ ರಫ್ತು ಬೆಲೆ ಸೇಕಡ ೧೫ರಷ್ಟು ಕಡಮೆಯಾಗುತ್ತದೆ. ಆದರೂ, ಇನ್ನೂ ಬೆಲೆಯಲ್ಲಿ ಸೇಕಡ ೨೯ರಷ್ಟು ಹೆಚ್ಚುವರಿ ಇದೆ. ಇದರ ಹಾಗೇ ಉಣ್ಣೆ, ಚರ್ಮ ಮತ್ತು ಹತ್ತಿಯ ಮೇಲಿನ ರಫ್ತುಸುಂಕವನ್ನು ತೆಗೆದುಹಾಕಬೇಕಾಗುತ್ತದೆ. ಇದರಿಂದಾಗುವ ನಷ್ಟವನ್ನು ಆಮದು ಸುಂಕಗಳಿಂದ ಸಮದೂಗಿಸಲು ಪಾಕೀಸ್ಥಾನ ಸರಕಾರವು ಪ್ರಯತ್ನಿಸುತ್ತಿದೆ. ಭಾರತದಿಂದ ಸಾಮಾನುಗಳ ಆಮದಿನ ಸಂಬಂಧದಲ್ಲಿ ಸಾರ್ವಜನಿಕ ರಹದಾರಿಗಳನ್ನು ರದ್ದುಮಾಡಿದೆ. ಆಮದಿನ ಹತೋಟಿ ಅನಿವಾರ್ಯವಾಗುತ್ತದೆ; ಅನಂತರ

ವಿನಿಮಯ ಹತೋಟಿ ಸ್ವಾಭಾವಿಕ. ಅವಶ್ಯಕವಾದರೆ, ಪಾಕೀಸ್ಥಾನ ಸರಕಾರವು ಗುಣಿತ ವಿನಿಮಯ ದರಗಳನ್ನು ಉಪಯೋಗಿಸಿ, ಈ ಆಯುಧದಿಂದ ವ್ಯಾಪಾರ ತೂಕವನ್ನು ಸಮದೂಗಿಸಬಹುದು. ಆದರೂ ಪಾಕೀಸ್ಥಾನದ ಆರ್ಥಿಕ ಸ್ಥಿತಿ ಹದಗೆಡುತ್ತದೆ. ಇದುವರೆವಿಗೂ, ಪಾಕೀಸ್ಥಾನವು ವ್ಯಾಪಾರ ತೂಕವನ್ನು ಸಮದೂಗಿಸಲು ಶ್ರಮಪಡ ಬೇಕಾಗಿರಲಿಲ್ಲ. ಈಗ, ಪರಿಸ್ಥಿತಿ ಬದಲಾಯಿಸುತ್ತದೆ. ಸ್ವಲ್ಪ ಕಾಲದಮೇಲಾದರೂ ಪಾಕೀಸ್ಥಾನ ಸರಕಾರವು ರೂಪಾಯಿಯ ಮೌಲ್ಯವನ್ನು ಸೂಕ್ತವಾಗಿ ಇಳಿಸಲೇಬೇಕಾಗುತ್ತದೆ.

ಪಾಕೀಸ್ಥಾನದಲ್ಲಿ ಶಾಖೆಗಳಿರುವ ಇಂಡಿಯಾದ ಬ್ಯಾಂಕುಗಳ ಸ್ಥಿತಿ ವಿಷಮುಗೊಂಡಿದೆ. ಸೆಪ್ಟಂಬರ್ ೧೯೪೮ರಲ್ಲಿ ರೂಪಿತವಾದ ಒಂದು ಕಾನೂನಿನಂತೆ, ಇಂಡಿಯಾದಲ್ಲಿ ಪ್ರಧಾನ ಕಚೇರಿ ಇದ್ದು, ಪಾಕೀಸ್ಥಾನದಲ್ಲಿ ಶಾಖೆಗಳಿರುವ ಬ್ಯಾಂಕುಗಳು, ಪಾಕೀಸ್ಥಾನದ ಡಿಪಾಸಿಟ್ಟು ಹೊಣೆಗಾರಿಕೆಯ ಮೇಲೆ ಶೇಕಡ ೭೦ರಷ್ಟು ರಿಜರ್ವ್ ಹಣವನ್ನು ಇಡ ಬೇಕಾಗಿದೆ. ಇದರಿಂದ ಡಿಪಾಸಿಟ್ಟುಗಳ ರೂಪದಲ್ಲಿ ಪಾಕೀಸ್ಥಾನದಲ್ಲಿ ರಿಜರ್ವ್‌ಹಣ ಅನೇಕ ಕೋಟಿ ರೂಪಾಯಿಗಳಾಗುತ್ತದೆ. ಈ ಬ್ಯಾಂಕುಗಳು ಉಳಿದ ರಿಜರ್ವ್ ಹಣವನ್ನು ಭಾರತದಲ್ಲಿ ಇಡುವ ಅಭ್ಯಾಸ ವಿದ್ದುದರಿಂದ, ಭಾರತದ ರೂಪಾಯಿಯ ಮೌಲ್ಯದ ಇಳಿಪರಿಯಿಂದ ಅತಿಹೆಚ್ಚಿನ ಪ್ರಮಾಣದಲ್ಲಿ, ಈ ಸಂಸ್ಥೆಗಳಿಗೆ ನಷ್ಟವಾಗುವ ಸಂಭವವಿದೆ.

ನಾಣ್ಯ ಮೌಲ್ಯದ ಇಳಿಪರಿಯಿಂದ ಹಣದುಬ್ಬರಕ್ಕೆ ನವ ಚೇತನ ಬಂದು ಸಾಮಾನುಗಳ ಅಭಾವ ಇನ್ನೂ ಉಗ್ರವಾಗುವ ಸಂಭವವಿದೆ. ಹಣದುಬ್ಬರವೊಂದು ಸಾಕ್ರಾಮಿಕ ರೋಗ. ಯುದ್ಧ ಕಾಲದಲ್ಲಿ ಬ್ರಿಟನ್ನಿಗೂ ಮತ್ತು ಭಾರತಕ್ಕೂ ಆದ ಆರ್ಥಿಕ ಒಪ್ಪಂದ ದಿಂದ, ರಿಜರ್ವ್ ಬ್ಯಾಂಕು ಕೋಟ್ಯಾಂತರ ರೂಪಾಯಿ ನೋಟುಗಳನ್ನು ಅಚ್ಚುಹಾಕಿ, ಯುದ್ಧಕಾರ್ಯಗಳಿಗೆ ಹಣ ಒದಗಿಸಿತು. ಯುದ್ಧಾನಂತರ, ಅನೇಕ ರಾಜಕೀಯ ಸಮಸ್ಯೆಗಳ ಪರಿಹಾರಕ್ಕಾಗಿ, ಆಹಾರದ ಆಮದಿಗಾಗಿ, ಸಾರ್ವಜನಿಕ ವಿವಿಧೋದ್ದೇಶ ಯೋಜನೆಗಳಿಗಾಗಿ, ಸರಕಾರಿ ನೌಕರರ ಹೆಚ್ಚು ಸಂಬಳಕ್ಕಾಗಿ, ನಿರಾಶ್ರಿತರ

ಸಹಾಯಕ್ಕಾಗಿ ಅಪಾರವಾದ ಪ್ರಮಾಣದಲ್ಲಿ ಹಣವು ಹೆಚ್ಚಾಗಿ ಹಣ ದುಬ್ಬರ ನಾಗಾಲೋಟದಿಂದ ಏರಿತು. ಇದರಿಂದ ಸಾಮಾನುಗಳ ಬೆಲೆ ಸ್ವೇಚ್ಛೆಯಾಗಿ, 'ನಿರಂಕುಶವಾಗಿ ಏರಿಕೋಟ್ಯಂತರ ಜನರಿಗೆ ಬಹು ಕಷ್ಟವಾಯಿತು. ರೂಪಾಯಿಯ ಬೆಲೆ ಇಳಿಯುತ್ತಾ ಇದೆ. ಈಗಿನ ರೂಪಾಯಿಯ ಬೆಲೆ ಯುದ್ಧಕಿಂತ ಹಿಂದಿನ ಕಾಲುಭಾಗದಷ್ಟು ಮಾತ್ರವಿದೆ ಎಂದು ಹೇಳಬಹುದು. ಈ ಸನ್ನಿವೇಶದಲ್ಲಿ ಮಧ್ಯಮ ವರ್ಗದವರ ಸ್ಥಿತಿಯಂತೂ ವರ್ಣಿಸಲಸಾಧ್ಯವಾಗಿದೆ. ಅತ್ಯಾವಶ್ಯಕ ಸಾಮಾನುಗಳ ಅಭಾವದಿಂದ, ಅನೇಕರು ಮಹತ್ತರವಾದ ಕಷ್ಟಗಳಿಗೆ ಗುರಿಯಾಗಿದ್ದಾರೆ. ಸಾಮಾನುಗಳ ಬೆಲೆ ಹೆಚ್ಚಾಗಬಹುದೆಂಬ ಭಯ ದಿಂದ ಜನರು ಸಾಮಾನುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಕೊಳ್ಳಲು ಆಸಕ್ತಿಯುಳ್ಳವರಾಗಿರುತ್ತಾರೆ. ಇದರಿಂದ, ಅತ್ಯಾವಶ್ಯಕವಾದ ಸಾಮಾನುಗಳ ಬೆಲೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಏರುತ್ತದೆ. ಈ ಸ್ಥಿತಿಯಲ್ಲಿ ಮುಖ್ಯ ವಸ್ತುಗಳ ಕೃತಕ ಅಭಾವವುಂಟಾಗಿ, ಬಡವರು ನರಳುತ್ತಿದ್ದಾರೆ. ಆಹಾರದ ಅಭಾವವಂತೂ ಹೇಳಲಸಾಧ್ಯವಾಗಿದೆ; ಆಹಾರಸಮಸ್ಯೆ ಇನ್ನೂ ಉಗ್ರವಾಗುತ್ತಿದೆ. ಸರಕಾರದ ಆಹಾರ ಪಡಿತರದ ವ್ಯವಸ್ಥೆ ಮತ್ತು ಸಾಮಾನುಗಳ ಬೆಲೆಯ ಮೇಲಿನ ಹತೋಟಿಗಳು ಯಶಸ್ವಿಯಾಗಿಲ್ಲ. ನಾಣ್ಯದ ಹೆಚ್ಚು ಚಲಾವಣೆಯಿಂದ ಬೆಲೆಯುಬ್ಬರ ನಗ್ನ ನರ್ತನ ಮಾಡುತ್ತಿದೆ. ಈ ಕೆಳಗಿನ ಕೋಷ್ಟಕದಿಂದ ಹಣದ ಉಬ್ಬರ ಮತ್ತು ಬೆಲೆಯುಬ್ಬರ—ವ್ಯಕ್ತವಾಗುತ್ತವೆ.

## ಆಗಸ್ಟ್ ತಿಂಗಳಿಗೆ ಕೊನೆಯಾಗುವ ೧೯೩೯ ರಲ್ಲಿ ಬೆಲೆಯ ಸೂಚಿ—೧೦೦

| ವರ್ಷ | ಚಲಾವಣೆಯಲ್ಲಿದ್ದ ನೋಟುಗಳು | ಒಟ್ಟುವ್ಯಾಪಾರದ ಬೆಲೆಯ ಸೂಚಿ ಸಂಖ್ಯೆ |
|---|---|---|
| | (ಕೋಟಿರೂಪಾಯಿಗಳು) | |
| ೧೯೩೯—೪೦. | ೨೩೬.೦ | ೧೨೫.೬ |
| ೧೯೪೦—೪೧. | ೩೩೮.೦೩ | ೧೧೪.೮ |

| ವರ್ಷ | ಚಲಾವಣೆಯಲ್ಲಿದ್ದ ನೋಟುಗಳು | ಒಟ್ಟು ವ್ಯಾಪಾರದ ಬೆಲೆಯ ಸೂಚಿ ಸಂಖ್ಯೆ |
|---|---|---|
| | (ಕೋಟಿ ರೂಪಾಯಿಗಳಲ್ಲಿ) | |
| ೧೯೪೧—೪೨. | ೨೮೬.೪೮ | ೧೩೭.೦ |
| ೧೯೪೨—೪೩. | ೫೧೩.೪೪ | ೧೭೧.೦ |
| ೧೯೪೩—೪೪. | ೭೭೭.೧೭ | ೨೩೬.೫ |
| ೧೯೪೪—೪೫. | ೯೬೮.೭೯ | ೨೪೪.೨ |
| ೧೯೪೫—೪೬. | ೧,೧೬೨ ೬೦ | ೨೪೪.೯ |
| ೧೯೪೬—೪೭. | ೧,೨೪೨.೦೦ | ೨೭೬ ೪ |
| ೧೯೪೭—೪೮. | ೧,೩೦೪.೦೦ | ೩೦೮.೨ |
| ೧೯೪೮—೪೯. | ೧,೩೦೫.೦೦ | ೩೭೬.೨ |
| ಆಗಸ್ಟ್ ೧೯೪೯. | ೧,೨೦೭.೦೦ | ೩೮೪.೬ |
| ೨-೯-೧೯೪೯. | ——— | ೩೯೧.೫ |
| ೧೦-೯-೧೯೪೯ | -- | ೩೯೨.೫ |
| ೨೪-೯-೪೯ | .... | ೩೮೮.೧ |

(ಈ ಕಾಲದಲ್ಲಿ ರೂಪಾಯಿ ನಾಣ್ಯಗಳು ೧೨೦ ಕೋಟಿಯಿಂ ೧೪೭ ಕೋಟಿಗೆ ಹೆಚ್ಚಾದವು)

ಈ ಕೋಷ್ಟಕದ ಬೆಲೆಯ ಸೂಚಿ ಸಂಖ್ಯೆಗಳು ಹತೋ ಬೆಲೆಗಳ ಸಂಬಂಧದಲ್ಲಿ ನಿರ್ಧರವಾಗಿವೆ. ಕಾಳಸಂತೆಯ ಬೆಲೆಗಳ ಅಪಾರವಾದ ಪ್ರಮಾಣದಲ್ಲಿ ಹೆಚ್ಚಾಗಿವೆ.

ಸರಕಾರದ ಹಣದುಬ್ಬರ ನಿವಾರಣಾ ಕ್ರಮಗಳು ಯಶ ಯಾಗಿಲ್ಲ. ಅಕ್ಟೋಬರ್ ೧೯೪೮ರಲ್ಲಿ ಹಣದುಬ್ಬರ ನಿವಾರಣಾ ಕ್ರಮಗಳು ಪ್ರಕಟವಾಗುವುದಕ್ಕಿಂತ ಮುನ್ನ ಬೆಲೆಯ ಸೂಚಿ ಸಂ ೩೮೨; ಆದರೆ ಸೆಪ್ಟೆಂಬರ್ ೧೦ನೇ ತಾರೀಖು ೧೯೪೯ರಲ್ಲಿ ಬೆಲೆ ಸೂಚಿ ಸಂಖ್ಯೆಯು ೩೯೨.೫ಕ್ಕೆ ಏರಿತು. ಆಹಾರ ಧಾನ್ಯಗಳಲ್ಲಿ ಮತ್ತು ಕೈಗಾರಿಕಾ ಕಚ್ಚಾಮಾಲುಗಳಲ್ಲೂ ಬೆಲೆ ಬಹಳ ಹೆಚ್ಚಾಗಿ ಈಗ ರೂಪಾಯಿಯ ಮೌಲ್ಯದ ಇಳಿವರಿಯಿಂದ ಆಹಾರಧಾನ್ಯಗ

ಬೆಲೆ ಹೆಚ್ಚಾಗುವುದಲ್ಲದೆ, ಅಮೆರಿಕದಿಂದ ಆಮದಾಗಬೇಕಾದ ಬಂಡವಾಳ ಸಾಮಗ್ರಿಗಳ ಬೆಲೆಗಳೂ ಹೆಚ್ಚಾಗುತ್ತವೆ. ಅಮೆರಿಕದೇಶದಿಂದ ಸಂಪೂರ್ಣವಾಗಿ ಆಹಾರ ಧಾನ್ಯಗಳ ಆಮದನ್ನು ನಿಲ್ಲಿಸಲು ಸಾಧ್ಯವಿಲ್ಲ. ಸ್ಟರ್ಲಿಂಗ್ ಕ್ಷೇತ್ರದಲ್ಲಿಯೂ ಸಾಮಾನುಗಳ ಬೆಲೆ ಹೆಚ್ಚಾಗಿ, ಆ ಪ್ರದೇಶದಿಂದ ಆಮದಾಗುವ ಸಾಮಾನುಗಳ ಬೆಲೆಯೂ ಹೆಚ್ಚಾಗುತ್ತದೆ; ಇದರಿಂದ ಜೀವನದ ವೆಚ್ಚವು ಏರಿ, ಕಾರ್ಮಿಕ ವೇತನಗಳು ಹೆಚ್ಚಾಗಿ, ಸಾಮಾನುಗಳ ತಯಾರಿಕೆಯ ವೆಚ್ಚ ಮತ್ತು ಮಾರಾಟ ಮಾಡುವ ಬೆಲೆ ಹೆಚ್ಚಾಗುತ್ತವೆ. ಸರಕಾರದ ನಷ್ಟಾಂಶ ಬಡ್ಜೆಟ್‌ಗಳಿಂದ, ಹಣದುಬ್ಬರವು ಈಗಾಗಲೇ ವೃದ್ಧಿಯಾಗಿದೆ; ರೂಪಾಯಿಯ ಮೌಲ್ಯದ ಇಳಿವರಿಯಿಂದ ಬಡ್ಜೆಟ್ ಅಂದಾಜು, ನಷ್ಟಾಂಶದ ಬಡ್ಜೆಟ್ ಆಗುವ ಭಯ ಸೂಚನೆ ಇದೆ. ೧೯೫೧ ನೆಯ ಇಸವಿಯ ಕೊನೆಯೊಳಗೆ ಆಹಾರದ ಸ್ವಪರಿಪೂರ್ಣತೆ—ಆಗುವ ನಿರೀಕ್ಷಣೆ ಇದ್ದರೂ, ಈ ಯೋಜನೆ ಫಲದಾಯಕವಾಗುವುದು ಕಷ್ಟ. ಅಮೆರಿಕದ ಆಹಾರ ಧಾನ್ಯಗಳ ಬೆಲೆ ಇದೇ ರೀತಿ ಇದ್ದರೆ, ನಾವು ಹೆಚ್ಚುವರಿ ಬೆಲೆಯಲ್ಲಿ ಆಹಾರ ಧಾನ್ಯಗಳನ್ನು ತರಿಸಿಕೊಂಡು ನೂರಕ್ಕೆ ೪೪ ರಷ್ಟು ಹೆಚ್ಚಾಗಿ ರೂಪಾಯಿಗಳನ್ನು ಕೊಡಬೇಕಾಗುತ್ತದೆ.

ರೂಪಾಯಿಯ ಮೌಲ್ಯದ ಇಳಿತಾಯದಿಂದ ಭಾರತಕ್ಕೆ ಆಗಿರುವ ಇನ್ನೊಂದು ನಷ್ಟ ಸ್ಟರ್ಲಿಂಗ್ ನಿಧಿಯ ಕ್ಷೀಣತೆ. ಎರಡನೆಯ ಯುದ್ಧ ಕಾಲದಲ್ಲಿ ಬ್ರಿಟಿಷ್ ಸಾಮ್ರಾಜ್ಯದ ಹಿತಕ್ಕೋಸ್ಕರ, ರಕ್ಷಣೆಗೋಸ್ಕರ, ನಮ್ಮ ಜನರು ಸಹಿಸಲಸಾಧ್ಯವಾದ ಕಷ್ಟ ನಷ್ಟಗಳಿಗೆ ಈಡಾದುದರ ಫಲವಾಗಿ ಸ್ಟರ್ಲಿಂಗ್ ನಿಧಿಯು ನಮಗೆ ಲಭಿಸಿತು. ಆಗಸ್ಟ್ ೧೪, ೧೯೪೭ ರಲ್ಲಿ ಭಾರತಕ್ಕೂ ಬ್ರಿಟನ್ನಿಗೂ ಆದ ಮೊದಲನೆಯ ತಾತ್ಕಾಲಿಕ ಸ್ಟರ್ಲಿಂಗ್ ಒಪ್ಪಂದದ ಪ್ರಕಾರ, ನಮ್ಮ ಸ್ಟರ್ಲಿಂಗ್ ನಿಧಿ ೧,೧೬೦ ಮಿಲಿಯನ್ ಪೌಂಡುಗಳೆಂದು ತೀರ್ಮಾನವಾಯಿತು. ಡಿಸೆಂಬರ್ ೩೧, ೧೯೪೭ ರ ವರೆಗೆ ಯಾವ ಹಣದ ಕ್ಷೇತ್ರದಲ್ಲಾದರೂ ವೆಚ್ಚ ಮಾಡಲು ಮೂರೂವರೆ ಕೋಟಿ ಪೌಂಡುಗಳನ್ನು ಒಂದನೆಯ ಕ್ರಮಾಂಕದ ಲೆಕ್ಕದಲ್ಲಿ ಇಗ್ಲೆಂಡಿನ ಬ್ಯಾಂಕಿನಲ್ಲಿಡಲಾಯಿತು. ಇದರ

ಜೊತೆಗೆ ಮೂರು ಕೋಟಿ ಪೌಂಡ್ ದುಡಿಯುವ ಬಂಡವಾಳವನ್ನು ಕೊಡಲಾಯಿತು. ಇದನ್ನು ಯಾವ ರಾಷ್ಟ್ರದ ಹಣದೊಂದಿಗಾದರೂ ವಿನಿಮಯಮಾಡಬಹುದಾಗಿತ್ತು. ಉಳಿದ ಸ್ಟರ್ಲಿಂಗ್ ನಿಧಿಯನ್ನು ಎರಡನೆಯ ಕ್ರಮಾಂಕದ ಲೆಕ್ಕದಲ್ಲಿರಿಸಲಾಯಿತು ; ಇದು ಘನೀಭೂತ ನಿಧಿ; ಇದರಿಂದ ಹಣವನ್ನು ಉಪಯೋಗಿಸುವಂತಿರಲಿಲ್ಲ.

ಈ ಆಗಸ್ಟ್ ಒಪ್ಪಂದವು ಡಿಸೆಂಬರ್ ತಿಂಗಳ ಕೊನೆಗೆ ಮುಗಿದು ಹೋಯಿತು. ಪುನಃ ಫೆಬ್ರುವರಿ ೧೯೪೮ ರಲ್ಲಿ ಜೂನ್ ೩೦ ರ ವರೆಗೂ ಜಾರಿಯಲ್ಲಿರುವ ಎರಡನೆಯ ಸ್ಟರ್ಲಿಂಗ್ ಒಪ್ಪಂದವಾಯಿತು. ಈ ಒಪ್ಪಂದ ಪ್ರಕಾರ ಹೋದ ವರ್ಷ ಒಂದನೆಯ ಕ್ರಮಾಂಕದ ಲೆಕ್ಕದಲ್ಲಿ ಉಳಿದಿದ್ದ ೩ ಕೋಟಿ ೩೦ ಲಕ್ಷ ಪೌಂಡನ್ನು ದುಡಿಯುವ ಬಂಡವಾಳಕ್ಕಾಗಿ ಉಪಯೋಗಿಸಲು, ಒಂದನೆಯ ಕ್ರಮಾಂಕದ ಲೆಕ್ಕಕ್ಕೆ ಸಾಗಿಸಲು ತೀರ್ಮಾನವಾಯಿತು. ಈ ಅರ್ಧ ವರ್ಷಕ್ಕೆ ವಿದೇಶಿ ವ್ಯಾಪಾರಕ್ಕೆ ಬೇಕಾಗುವ ಹಣವನ್ನೊದಗಿಸಲು ಎರಡನೆಯ ಕ್ರಮಾಂಕದ ಲೆಕ್ಕದಿಂದ ಒಂದು ಕೋಟಿ ಎಂಬತ್ತು ಲಕ್ಷ ಪೌಂಡುಗಳನ್ನು ಜಮಾ ಮಾಡಲು ಒಪ್ಪಿಗೆಯಾಯಿತು. ಈ ಅರ್ಧ ವರ್ಷದಲ್ಲಿ ಒಂದನೆಯ ಕ್ರಮಾಂಕದ ಲೆಕ್ಕಕ್ಕೆ ಸೇರಿದ ಹಣ ೫ ಕೋಟಿ ೧೦ ಲಕ್ಷ ಪೌಂಡುಗಳು. ಈ ಹಣದಲ್ಲಿ ಕೇವಲ ಒಂದು ಕೋಟಿ ಪೌಂಡುಗಳಿಗೆ ಮಾತ್ರ ಡಾಲರುಗಳು ದೊರೆಯಲು ಅವಕಾಶವಾಯಿತು. ಉಳಿದ ೪ ಕೋಟಿ ೧೦ ಲಕ್ಷ ಪೌಂಡುಗಳನ್ನು ಸ್ಟರ್ಲಿಂಗ್ ಹೊರತು ಬೇರೆ ದೇಶದ ನಾಣ್ಯಗಳೊಡನೆ ವಿನಿಮಯಮಾಡುವ ಹಾಗಿರಲಿಲ್ಲ.

ಈರೀತಿಯಾದ ಕೇವಲ ಕ್ಷಣಿಕಕಾಲದ ಸ್ಟರ್ಲಿಂಗ್ ಒಪ್ಪಂದಗಳಿಂದ ನಮಗೆ ಏನೂ ಅನುಕೂಲವಾಗಲಿಲ್ಲ. ಪುನಃ ಜೂನ್ ತಿಂಗಳಲ್ಲಿ ಸ್ಟರ್ಲಿಂಗ್ ಒಪ್ಪಂದದ ವಿಷಯದಲ್ಲಿ ಮಾತುಕತೆಗಳು ಪ್ರಾರಂಭವಾದವು. ಇದರ ಫಲವಾಗಿ, ಜೂನ್ ೩೦, ೧೯೫೧ರವರೆಗಿರುವ ಮೂರು ವರ್ಷದ ಸ್ಟರ್ಲಿಂಗ್ ಒಪ್ಪಂದವಾಯಿತು. ಈ ಒಪ್ಪಂದದಂತೆ, ೧೯೫೧ನೆಯ ಇಸವಿಯ ಕೊನೆಯವರೆಗೆ ೮೦ ಮಿಲಿಯನ್

ಪೌಂಡುಗಳನ್ನು ಮತ್ತು ಡಾಲರುಗಳಿಗೆ ವಿನಿಮಯವಾಗುವ ೧೫ ಮಿಲಿಯನ್ ಸ್ಟರ್ಲಿಂಗನ್ನು ಕೊಡಲು ಬ್ರಿಟನ್ನು ಒಪ್ಪಿತು. ಇವರ ಜೊತೆಗೆ ಅಂತರ ರಾಷ್ಟ್ರೀಯ ಆರ್ಥಿಕ ಸಂಸ್ಥೆಯು ೧೦೦ ಮಿಲಿಯನ್ ಡಾಲರುಗಳನ್ನು ಕೊಡುವ ನಿರೀಕ್ಷಣೆ ಇತ್ತು. ೧೯೪೭-೪೮ರಲ್ಲಿ ಭಾರತವು ಆಮದು ವ್ಯಾಪಾರದ ಮೇಲೆ ಆತಂಕಗಳನ್ನು ತೆಗೆದು ಹಾಕಿದ್ದರಿಂದ, ೧೯೪೮ನೆಯ ಇಸವಿಗಿಂತ ಮೊದಲೇ ಈ ಹಣ ವೆಚ್ಚವಾಯಿತು. ಆದ್ದರಿಂದ, ಈ ಒಪ್ಪಂದವು ಪುನರ್ವಿಮರ್ಶೆಯಾಗಿ ಬ್ರಿಟನ್ನು ೧೪೦ ಮಿಲಿಯನ್ ಡಾಲರುಗಳನ್ನು ಮತ್ತು ೧೯೫೦ರಲ್ಲಿ, ೧೯೫೧ರಲ್ಲಿ ಪ್ರತಿ ವರ್ಷ ೫೦ ಮಿಲಿಯನ್ ಪೌಂಡುಗಳನ್ನು ಕೊಡಲು ಒಪ್ಪಿಕೊಂಡಿತು. ಆರ್ಥಿಕ ಸಂಸ್ಥೆಯಿಂದ ನಿರೀಕ್ಷಿಸಿದ ಸಾಲ ೧೦೦ ಮಿಲಿಯನ್ ಡಾಲರುಗಳಿಂದ ೫೬ ಮಿಲಿಯನ್ ಡಾಲರುಗಳಿಗೆ ಇಳಿಯಿತು.

ಬ್ರಿಟನ್ನು ನಮ್ಮ ಆವಶ್ಯಕತೆಗೆ ಅನುಕೂಲವಾಗಿ ಹೆಚ್ಚುವರಿ ಪ್ರಮಾಣದಲ್ಲಿ ಸ್ಟರ್ಲಿಂಗನ್ನು ಕೊಡಲು ಒಪ್ಪಿಕೊಂಡಿದ್ದಕ್ಕೆ ಕಾರಣವೇನು ? ಇದಕ್ಕೆ ಮುಖ್ಯಕಾರಣ ಬ್ರಿಟನ್ನು ಡಾಲರು ಪ್ರದೇಶಕ್ಕೆ ಹೆಚ್ಚು ರಫ್ತುಮಾಡಲು ಅವಕಾಶವಾಗಲಿಲ್ಲ. ಆದ್ದರಿಂದ, ತನ್ನ ಹಾಗೆ ಬೆಲೆಗಳು ಉಬ್ಬರವಾಗಿರುವ ದೇಶಗಳಿಗೆ ಸಾಮಾನುಗಳನ್ನು ರಫ್ತು ಮಾಡಲು ಪ್ರಯತ್ನಮಾಡಿತು. ಅತ್ಯಂತ ಹೆಚ್ಚಿನ ತಯಾರಿಕಾ ವೆಚ್ಚ ಮತ್ತು ಬೆಲೆಯುಬ್ಬರವಾಗಿದ್ದ ರಾಷ್ಟ್ರಗಳ ಪೈಕಿ ಭಾರತವೊಂದು. ಸ್ಟರ್ಲಿಂಗ್ ನಿಧಿಯಿಂದ ಹೆಚ್ಚಿನ ಸಹಾಯ ಭಾರತಕ್ಕೆ ದೊರಕದಿದ್ದಿದ್ದರೆ, ಡಾಲರು ಪ್ರದೇಶದಿಂದ ಆಮದನ್ನು ಕಡಮೆಮಾಡಿದಂತೆ, ಬ್ರಿಟನ್ನಿನಿಂದಲೂ ಆಮದನ್ನು ಕಡಮೆಮಾಡಬೇಕಾಗಿತ್ತು. ಆದ್ದರಿಂದ ಸ್ಟರ್ಲಿಂಗ್ ಹೆಚ್ಚಾಗಿ ಭಾರತಕ್ಕೆ ದೊರಕಿದ್ದು ಬ್ರಿಟನ್ನಿನ ಉದಾರತೆಯಿಂದಲ್ಲ; ಬ್ರಿಟನ್ನಿನ ಉತ್ಪತ್ತಿಯನ್ನು ಉದ್ಯೋಗವನ್ನು ಹೆಚ್ಚು ಮಾಡುವುದಕ್ಕಾಗಿ.

ನಾಣ್ಯಮೌಲ್ಯದ ಇಳಿವರಿಯು ಈ ಪರಿಸ್ಥಿತಿಯನ್ನು ಯಾವ ರೀತಿ ಬದಲಾಯಿಸಿದೆ ? ಬ್ರಿಟನ್ನಿನ ರಫ್ತು ವ್ಯಾಪಾರ ಅಮೆರಿಕದಲ್ಲಿ

ಹೆಚ್ಚಾದರೆ, ಆಗ ಭಾರತದ ಗಿರಾಕಿಗೆ ಬ್ರಿಟನ್ನು ಅಧೀನವಾಗಬೇಕಾಗಿಲ್ಲ. ಬ್ರಿಟನ್ನಿನ ರಫ್ತು ವ್ಯಾಪಾರ ಅಮೆರಿಕದ ಕಡೆ ತಿರುಗಿದರೆ, ಅದೇ ಪ್ರಮಾಣದಲ್ಲಿ ಸ್ಟರ್ಲಿಂಗ್ ನಿಧಿಯಿಂದ ಹೆಚ್ಚು ಸ್ಟರ್ಲಿಂಗನ್ನು ಭಾರತಕ್ಕೆ ಕೊಡುವ ಆವಶ್ಯಕತೆ ಕಡಮೆಯಾಗುತ್ತದೆ. ಬ್ರಿಟನ್ನಿನಿಂದ ಭಾರತಕ್ಕೆ ಆಮದಾಗುವ ಸಾಮಾನುಗಳ ಪ್ರಮಾಣ ಕಡಮೆಯಾದರೆ, ಭಾರತಕ್ಕೆ ತೊಂದರೆಯೇ. ಇದರಿಂದ, ನಮಗೆ ದೊರುಕುವ ಸಾಮಾನುಗಳ ಸರಬರಾಜು ಕಡಮೆಯಾಗುವುದಲ್ಲದೆ, ನಮ್ಮ ಸ್ಟರ್ಲಿಂಗ್ ನಿಧಿಯನ್ನು ಉಪಯೋಗಿಸುವ ಅವಕಾಶವೂ ಕಡಮೆಯಾಗುತ್ತದೆ

ರೂಪಾಯಿಯ ಮೌಲ್ಯದ ಇಳಿವರಿ ಸ್ಟರ್ಲಿಂಗ್ ಮೌಲ್ಯದ ಇಳಿತಕ್ಕೆ ಅನುಗುಣವಾಗಿರುವುದರಿಂದ, ಸ್ಟರ್ಲಿಂಗ್ ನಿಧಿಯಲ್ಲಿ ಯಾವ ಬದಲಾವಣೆಯೂ ಆಗಿಲ್ಲವೆಂದು ಕೆಲವರ ವಾದ. ಆದರೆ ಸ್ಟರ್ಲಿಂಗ್ ಮೌಲ್ಯದ ಇಳಿವರಿಯಿಂದ ನಮ್ಮ ಸ್ಟರ್ಲಿಂಗ್ ನಿಧಿಯ ಡಾಲರು ಬೆಲೆ ನೂರಕ್ಕೆ ೩೦ರಷ್ಟು ಕಡಮೆಯಾಗಿದೆ ಎಂಬ ವಿಷಯವನ್ನು ನಾವು ತಿಳಿದುಕೊಳ್ಳಬೇಕಾದುದು ಅತ್ಯಾವಶ್ಯಕವಾಗಿದೆ. ನಮ್ಮ ಸ್ಟರ್ಲಿಂಗ್ ನಿಧಿಯು ಆರ್ಥಿಕ ಅಭಿವೃದ್ಧಿಗೆ ಬಹು ಮುಖ್ಯ ಉಪಕರಣ. ಈ ನಿಧಿಯ ಆಧಾರದ ಮೇಲೆ ಅಮೆರಿಕದಿಂದ ಕೈಗಾರಿಕೆ ಬಂಡವಾಳವನ್ನು ಒದಗಿಸಿಕೊಳ್ಳಲು ಅನುಕೂಲವಾಗುತ್ತದೆ. ನಮ್ಮ ವ್ಯಾಪಾರಕ್ಕೆ, ಕೈಗಾರಿಕಾಭಿವೃದ್ಧಿಗೆ ಮುಖ್ಯವಾಗಿ ಅಮೆರಿಕದ ಡಾಲರುಗಳು ಬೇಕು. ಸ್ಟರ್ಲಿಂಗ್ ಮೌಲ್ಯದ ಇಳಿವರಿಯಿಂದ ಸ್ಟರ್ಲಿಂಗ್ ನಿಧಿಯ ಡಾಲರು ಬೆಲೆ ಕಡಮೆಯಾಗುತ್ತದೆ. ಉದಾಹರಣೆಗಾಗಿ, ಮೊದಲು ೧೫ ಮಿಲಿಯನ್ ಪೌಂಡ್ ಸ್ಟರ್ಲಿಂಗಿಗೆ ೬೦ ಮಿಲಿಯನ್ ಡಾಲರುಗಳು ಬರುತ್ತಿದ್ದವು; ಈಗ ಅಷ್ಟೇ ಡಾಲರುಗಳಿಗೆ ೨೦ ಮಿಲಿಯನ್ ಪೌಂಡುಗಳಿಗಿಂತ ಹೆಚ್ಚಾಗಿ ಕೊಡಬೇಕಾಗುತ್ತದೆ. ಇದರಿಂದ ನಮ್ಮ ಸ್ಟರ್ಲಿಂಗ್ ನಿಧಿಯನ್ನು ಸ್ಟರ್ಲಿಂಗ್ ಪ್ರದೇಶದಲ್ಲೇ ವಿನಿಮಯ ಮಾಡಬೇಕಾಗುತ್ತದೆ. ಹಾಗೆ ಮಾಡುವುದರಿಂದ, ನಮ್ಮ ನಿಧಿಯ ಬೆಲೆ ಕುಗ್ಗುವುದಿಲ್ಲ ಎನ್ನುವುದೂ ಸಹಾ ಸಂದೇಹಾಸ್ಪದವಾಗಿದೆ. ಸ್ಟರ್ಲಿಂಗ್ ಮೌಲ್ಯದ ಇಳಿವರಿಯಿಂದ, ಸ್ಟರ್ಲಿಂಗಿನ ಬೆಲೆ ಕುಗ್ಗಿ, ಕ್ಷೀಣವಾಗಿ, ಸ್ಟರ್ಲಿಂಗ್

ಪ್ರದೇಶವಲ್ಲಿ ಸಾಮಾನುಗಳ ಬೆಲೆಯುಬ್ಬರವಾಗುತ್ತದೆ. ಇದರಿಂದ ನಮ್ಮ ಸ್ಟರ್ಲಿಂಗ್ ನಿಧಿಯ ಚಿನ್ನದ ಬೆಲೆ ಕಡಮೆಯಾಗುತ್ತದೆ.

ಇದಲ್ಲದೆ, ಅಕ್ಟೋಬರ್ ೨೬ನೇ ತಾರೀಖಿನಲ್ಲಿ ಸರ್ ಸ್ಟಾಫರ್ಡ್ ಕ್ರಿಪ್ಸರು ಕಾಮನ್ಸ್ ಸಭೆಯಲ್ಲಿ ಮಾತನಾಡುತ್ತಾ, ಇನ್ನು ಸ್ಟರ್ಲಿಂಗ್ ನಿಧಿಯಿಂದ ಕಡಮೆ ಪ್ರಮಾಣದಲ್ಲಿ ಭಾರತಕ್ಕೆ ಸ್ಟರ್ಲಿಂಗನ್ನು ಕೊಡ ಲಾಗುತ್ತದೆಂದು ಹೇಳಿದ್ದಾರೆ. ಡಾಲರುಗಳ ಕ್ಷಾಮವನ್ನು ಪರಿಹಾರ ಮಾಡಲು ಬ್ರಿಟನ್ನಿನಿಂದ ಹೆಚ್ಚಾಗಿ ಸಾಮಾನುಗಳು ಡಾಲರ್ ಪ್ರದೇಶಕ್ಕೆ ರಫ್ತಾಗಬೇಕಾಗಿರುವುದರಿಂದ, ಭಾರತಕ್ಕೆ ಸ್ಟರ್ಲಿಂಗನ್ನು ಒಪ್ಪಂದದ ಪ್ರಕಾರ ಕೊಡಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ. ಕ್ರಿಪ್ಸರು ಇಷ್ಟು ಬೇಗನೆ ಈ ಧೋರಣೆಯನ್ನು ತಾಳಿರುವುದು ಆಶ್ಚರ್ಯವಾಗಿದೆ. ಇದು ನಂಬಿಕೆದ್ರೋಹವಲ್ಲದೆ, ಇದರಿಂದ ಭಾರತದ ಆರ್ಥಿಕ ಪುನರ್ರಚನೆಗೆ ತೊಂದರೆಯಾಗುತ್ತದೆ.

ಭಾರತವು ಅಂತರರಾಷ್ಟ್ರೀಯ ಆರ್ಥಿಕ ಸಂಸ್ಥೆಯಿಂದ ಹಾಗೂ ಅಂತರರಾಷ್ಟ್ರೀಯ ಬ್ಯಾಂಕಿನಿಂದ ಡಾಲರು ಸಾಲವನ್ನು ತೆಗೆದುಕೊಂಡಿದೆ. ಈ ಸಾಲಗಳ ರೂಪಾಯಿ ಬೆಲೆ ಈಗ ಹೆಚ್ಚಾಗುತ್ತದೆ. ರೂಪಾಯಿಯ ಮೌಲ್ಯದ ಇಳಿವರಿಯಿಂದ ಹೊರದೇಶಗಳ ಬಂಡವಾಳ ಆದರಲ್ಲೂ ಅಮೆರಿಕದ ಬಂಡವಾಳ ಹೆಚ್ಚಾಗಿ ಭಾರತಕ್ಕೆ ಬರುತ್ತದೆಂದು ಹೇಳಲಾಗಿದೆ. ಆದರೆ, ಪರದೇಶದವರಲ್ಲಿ ಬಂಡವಾಳವನ್ನು ಒದಗಿಸುವ ಆಸಕ್ತಿಯನ್ನು ಉತ್ಪನ್ನಮಾಡಲು ನಾಣ್ಯದ ಆಂತರ್ಯ ಬೆಲೆಯು ಮಾತ್ರ ಮುಖ್ಯವಲ್ಲ. ಆ ರಾಷ್ಟ್ರದ ರಾಜಕೀಯ ಭದ್ರತೆ, ವಿದೇಶನೀತಿ, ಆರ್ಥಿಕ ಹಾಗೂ ವಾಣಿಜ್ಯನೀತಿ ಮತ್ತು ಆಡಳಿತ ದಕ್ಷತೆ—ಈ ಅಂಶಗಳಿಗೆ ಹೆಚ್ಚು ಮಹತ್ವವಿದೆ. ಪರದೇಶದವರು ಈ ವಿಷಯುಗಳ ಪರಿಶೀಲನೆಯಿಂದ ತೃಪ್ತಿಹೊಂದದಿದ್ದರೆ, ನಾಣ್ಯದ ಮೌಲ್ಯದ ಅಪರಿಮಿತ ಇಳಿವರಿಯಿಂದ ಹೊರಗಿನ ಬಂಡವಾಳ ಸೌಲಭ್ಯಗಳು ಒದಗಲಾರವು. ಆದ್ದರಿಂದ, ರೂಪಾಯಿಯ ಮೌಲ್ಯದ ಇಳಿವರಿಯೊಂದಿಗೆ, ಭಾರತ ಸರಕಾರವು ಸೂಕ್ತವಾದ ಕ್ರಮಗಳಿಂದ ಅನುಕೂಲವಾದ ಆರ್ಥಿಕ ಹಾಗೂ ರಾಜಕೀಯ ವಾತಾವರಣವನ್ನು ಕಲ್ಪಿಸಿ, ಅಮೆರಿಕದ ಬಂಡವಾಳವನ್ನು ಆಕರ್ಷಿಸಬೇಕು.

# ೬. ಮುಂದೇನು ?

ರೂಪಾಯಿಯ ಮೌಲ್ಯಗ ಇಳಿಪರಿಯಿಂದ ಉತ್ಪನ್ನವಾಗುವ ಸಮಸ್ಯೆಗಳನ್ನು ಪರಿಹರಿಸಲು ವಾಣಿಜ್ಯ ಮಂತ್ರಿಗಳು ಈಗಾಗಲೇ, ಕೆಲವು ಕ್ರಮಗಳನ್ನು ಕೈಗೊಂಡಿದ್ದಾರೆ. ಕೆಲವು ವಸ್ತುಗಳ ಮೇಲೆ ರಫ್ತು ಸುಂಕಗಳನ್ನು ವಿಧಿಸಿದ್ದಾರೆ. ಇವುಗಳಲ್ಲಿ ಮುಖ್ಯವಾದುವು, ಎಣ್ಣೆ ಬೀಜಗಳು, ತರಕಾರಿ ಎಣ್ಣೆಗಳು, ವನಸ್ಪತಿ, ಉಕ್ಕು, ಹೊಗೇ ಸೊಪ್ಪು, ಇತ್ಯಾದಿ. ಕಲ್ಲಿದ್ದಲಿನ ರಫ್ತು ವ್ಯಾಪಾರವನ್ನು ಕ್ರಮಗೊಳಿಸಲು, ಇದರ ವ್ಯಾಪಾರವನ್ನು ಸರಕಾರವೇ ವಹಿಸಿಕೊಂಡಿದೆ. ಕಚ್ಚಾ ಸೆಣಬು ಮತ್ತು ಹತ್ತಿಯು ಸರಿಯಾದ ಬೆಲೆಯಲ್ಲಿ ಗಿರಣಿಗಳಿಗೆ ಸರಬರಾಜಾಗುವ ವ್ಯವಸ್ಥೆಯನ್ನು ಮಾಡುವುದು; ಪಾಕೀಸ್ಥಾನದಿಂದ ಸಾಮಾನುಗಳನ್ನು ಆಮದುಮಾಡಿಕೊಳ್ಳುವ ಸಂಬಂಧದಲ್ಲಿ ಸಾರ್ವಜನಿಕ ರಹದಾರಿಗಳನ್ನು ರದ್ದು ಮಾಡುವುದು, ಕೆಲವು ಅತ್ಯಾವಶ್ಯಕ ಔಷಧಿ ಸಾಮಾನುಗಳನ್ನು ಅಮೆರಿಕದಿಂದ ತರಿಸಿಕೊಳ್ಳಲು ಅವಕಾಶವನ್ನು ಹೆಚ್ಚಿಸಿ, ಅವುಗಳ ಅಭಾವದಿಂದ ಬೆಲೆ ಏರದಂತೆ ತಡೆಯುವುದು. ಕೊನೆಯದಾಗಿ, ರಫ್ತು ವ್ಯಾಪಾರಕ್ಕೆ ಹೆಚ್ಚು ಪ್ರೋತ್ಸಾಹ ಕೊಡುವುದು.

ಈ ರಕ್ಷಣಾ ಕ್ರಮಗಳಲ್ಲದೆ, ಆರ್ಥಿಕ ಸಚಿವರು ಫಲದಾಯಕವಾದ, ಸರ್ವ ವ್ಯಾಪಕವಾದ ಯೋಜನೆಯನ್ನು ರೂಪಿಸಿದ್ದಾರೆ. ಇದು ಆರ್ಥಿಕ ಸಚಿವರ ಎಂಟು—ಅಂಶಗಳ ಯೋಜನೆ (The Eight-point programme). ಇವು ಯಾವುವೆಂದರೆ :

(೧) ದೇಶದ ಅತ್ಯಾವಶ್ಯಕ ಸಾಮಾನುಗಳ ಆಮದನ್ನು ಗೌರವಿಸಿ, ವಿದೇಶಿ ನಾಣ್ಯದ ವೆಚ್ಚವನ್ನು ಅತ್ಯಂತ ಕಡಮೆ ಮಾಡಲು, ಈ ಹೊಸ ಸನ್ನಿವೇಶದಲ್ಲಿ ಭಾವೀವ್ಯಾಪಾರದ ರಚನೆಯನ್ನು ರೂಪುಗೊಳಿಸುವುದು.

(೨) ರೂಪಾಯಿಯ ವಿನಿಮಯ ಬೆಲೆಯ ಸಂಬಂಧದಲ್ಲಿ ನಾಣ್ಯ

ಗಳ ಮೌಲ್ಯ ಹೆಚ್ಚುವರಿಯಾಗಿರುವ ಇತರ ದೇಶಗಳಿಂದ ಆದಷ್ಟು ಕಡಮೆ ಬೆಲೆಗಳಲ್ಲಿ ಕೈಗಾರಿಕೋಪಕರಣಗಳನ್ನು ಆಮದುಮಾಡಿಕೊಳ್ಳುವ ಧ್ಯೇಯದಿಂದ ನಮ್ಮ ವ್ಯಾಪಾರ ಶಕ್ತಿಯನ್ನು ಉಪಯೋಗಿಸುವುದು

(೩) ಬ್ಯಾಂಕುಗಳ ಹಣದ ವ್ಯವಸ್ಥೆಯಿಂದಲೂ, ಕಾನೂನು ಹಾಗೂ ಆಡಳಿತ ಕ್ರಮಗಳಿಂದಲೂ, ಸಟ್ಟಾವ್ಯಾಪಾರದ ಬೆಲೆಗಳು ಏರದಂತೆ ತಡೆಯುವುದು.

(೪) ಆದಷ್ಟು ಹೆಚ್ಚಿನ ಪ್ರಮಾಣದಲ್ಲಿ ವಿದೇಶಿ ಹಣವನ್ನು ಸಂಪಾದಿಸುವ ಸೌಲಭ್ಯಗಳನ್ನು ಪಡೆಯಲು ಹಾಗೂ, ರೂಪಾಯಿಯ ಮೌಲ್ಯದ ಇಳಿವರಿಯಿಂದ ಉದ್ಭವಿಸುವ ಅನುಕೂಲಗಳನ್ನು ವಿದೇಶಿ ಆಮದು ವರ್ತಕ, ಭಾರತದ ಉದ್ಯಮಿ ಮತ್ತು ಭಾರತದ ಖಜಾನೆ— ಇವುಗಳಿಗೆ ಸಮವಾಗಿ ಹಂಚಲು, ದುರ್ಲಭ ನಾಣ್ಯ ಪ್ರದೇಶಗಳಿಗೆ ರಫ್ತಾಗುವ ಸಾಮಾನುಗಳ ಮೇಲೆ ಯಾವ ಭೇದಭಾವವೂ ಇಲ್ಲದೆ, ಒಂದೇ ರೀತಿಯಾಗಿ ರಫ್ತು ಸುಂಕಗಳನ್ನು ವಿಧಿಸುವುದು.

(೫) ರೂಪಾಯಿಯ ಮೌಲ್ಯದ ಇಳಿವರಿಯಿಂದ ಉತ್ಪನ್ನವಾಗುವ ಅನುಕೂಲ್ಯಗಳನ್ನು ಉಪಯೋಗಿಸಿ, ಬಂಡವಾಳವನ್ನು ಕೈಗಾರಿಕೋದ್ಯಮಗಳಲ್ಲಿ ಹೆಚ್ಚಾಗಿ ಹಾಕುವ ಆಸಕ್ತಿಯನ್ನುಂಟುಮಾಡಿ, ಇದರಿಂದ ಉತ್ಪತ್ತಿಗೆ ಸಹಾಯವಾಗುವಂತೆ ಮತ್ತು ಆರ್ಥಿಕ ಪ್ರಗತಿಗೆ ಸಾಧಕವಾಗುವಂತೆ, ಹೆಚ್ಚಿನ ಪ್ರಚಾರದಿಂದ ತೀವ್ರವಾದ ಹಣ ಉಳಿಸುವ ಯೋಜನೆಯನ್ನು ರೂಪುಗೊಳಿಸಬೇಕು. ಇದು ಯಶಸ್ವಿಯಾಗದಿದ್ದರೆ, ಕಡ್ಡಾಯದಿಂದಾಗಲೀ ಅಥವಾ ಗ್ರಾಮಾಂತರಗಳಲ್ಲಿ ಬ್ಯಾಂಕಿಂಗ್ ಸೌಲಭ್ಯಗಳನ್ನು ಹರಡಲು ಸರಿಯಾದ ಸರ್ಕಾರದ ಸಹಾಯವನ್ನು ಪಡೆದಾಗಲಿ, ಹಣ ಉಳಿಸುವ ಯೋಜನೆಯನ್ನು ಕಾರ್ಯರೂಪಕ್ಕೆ ತರಬೇಕು.

(೬) ಆದಾಯ ತೆರಿಗೆ ವಿಚಾರಣಾ ಸಮಿತಿಗೆ ಇನ್ನೂ ಅನ್ವಯವಾಗದಿರುವವರು, ಯುದ್ಧ ಕಾಲದ ಲಾಭದ ಪ್ರಮಾಣದಲ್ಲಿ ಐಚ್ಛಿಕವಾಗಿ ತೆರಿಗೆಯನ್ನು ಕೊಡಲು ಸೌಲಭ್ಯಗಳನ್ನು ಕಲ್ಪಿಸುವುದು.

(೭) ಈ ವರ್ಷ ಸಾರ್ವಜನಿಕ ವೆಚ್ಚದಲ್ಲಿ ೪೦ ಕೋಟಿ ರೂಪಾಯಿಗಳನ್ನು ಮಿತವ್ಯಯದಿಂದ ಕಡಮೆ ಮಾಡಿ, ಮುಂದಿನ ವರ್ಷ, ೧೯೪೯—೫೦ ರ ಬಡ್ಜೆಟ್ ಅಂದಾಜಿಗಿಂತ, ಎರಡರಷ್ಟು ವೆಚ್ಚವನ್ನು ಉಳಿಸುವುದು. ಹಣ ಕೂಡಿಡುವ ಯೋಜನೆ ಕಾರ್ಯಕ್ಷೇತ್ರದಲ್ಲಿ ಇನ್ನೂ ಫಲದಾಯಕವಾದರೆ, ಅಭಿವೃದ್ಧಿ ಯೋಜನೆಗಳಿಗೆ ಇನ್ನೂ ಹೆಚ್ಚಿನ ಬಂಡವಾಳ ಸಿಕ್ಕುತ್ತದೆ.

(೮) ಪ್ರಾಂತಗಳ ಮತ್ತು ಸಂಸ್ಥಾನಗಳ ಸಹಕಾರದಿಂದ ಅತ್ಯಾವಶ್ಯಕ ಸಾಮಾನುಗಳ, ತಯಾರಾದ ಸಾಮಾನುಗಳ ಹಾಗೂ ಆಹಾರ ಧಾನ್ಯಗಳ ಚಿಲ್ಲರೆ ಬೆಲೆಗಳಲ್ಲಿ, ಹಂಚಿಕೆ ಮತ್ತು ಇತರ ವೆಚ್ಚಗಳನ್ನು ಕಡಮೆ ಮಾಡುವುದರಿಂದ ಸೇಕಡ ೧೦ ರಷ್ಟು ಇಳಿಸಲು ಕ್ರಮಗಳನ್ನು ಕೈಗೊಳ್ಳುವುದು.

ಈ ಅಂಶಗಳನ್ನು ಪ್ರತ್ಯೇಕವಾಗಿ ಚರ್ಚಿಸುವುದು ಆವಶ್ಯಕ. ಒಂದನೆಯ ಅಂಶವನ್ನು ತೆಗೆದುಕೊಂಡರೆ ರೂಪಾಯಿಯ ಮೌಲ್ಯದ ಇಳಿವರಿಯು ರಫ್ತು ವ್ಯಾಪಾರಕ್ಕೆ ಸಾಧಕವಾಗಿ, ಆಮದು ವ್ಯಾಪಾರಕ್ಕೆ ಆತಂಕವನ್ನುಂಟು ಮಾಡುವುದರಿಂದ, ವ್ಯಾಪಾರವನ್ನು ಸರ್ಕಾರವು ವ್ಯವಸ್ಥೆಗೊಳಿಸುವ ಆವಶ್ಯಕತೆ ಕಡಮೆಯಾಗುತ್ತದೆ. ಆದರೆ ಭಾರತದಲ್ಲಿ ವ್ಯಾಪಾರದ ಹತೋಟಿಯ ಆವಶ್ಯಕತೆ ಹೆಚ್ಚಾಗುತ್ತಿದೆ. ಪಾಕೀಸ್ಥಾನದೊಂದಿಗೆ ವ್ಯಾಪಾರವನ್ನು ಬಿಟ್ಟರೆ, ಇತರ ದೇಶಗಳ ವ್ಯಾಪಾರದ ಸಂಬಂಧದಲ್ಲಿ, ನಮ್ಮ ವಿದೇಶ ವ್ಯಾಪಾರ ನೀತಿ ಬದಲಾವಣೆಯಾಗುವುದಿಲ್ಲ. ಆಮದು ವ್ಯಾಪಾರದ ಸಂಬಂಧದಲ್ಲಿ, ಡಾಲರುಗಳ ವೆಚ್ಚವನ್ನು ಕನಿಷ್ಠ ಪ್ರಮಾಣದಲ್ಲಿರಿಸುವುದೇ ಕಾಮನ್ ವೆಲ್ತ್ ರಾಷ್ಟ್ರಗಳ ನೀತಿ. ಕಾಮನ್ ವೆಲ್ತಿನ ಆರ್ಥಿಕ ಮಂತ್ರಿಗಳ ಸಮ್ಮೇಳನದಲ್ಲಿ ಇದೊಂದು ಮುಖ್ಯ ಅಂಶವಾಗಿತ್ತು. ಬ್ರಿಟನ್ನು ನಮ್ಮ ಸ್ಟರ್ಲಿಂಗ್ ನಿಧಿಯಿಂದ, ನಮಗೆ ಬೇಕಾದಷ್ಟು ಸ್ಟರ್ಲಿಂಗನ್ನು ಕೊಡಲು ಸಾಧ್ಯವಿಲ್ಲವೆಂದು ಯೋಚಿಸಿರುವುದರಿಂದ, ಹೇರಳ ನಾಣ್ಯ ಪ್ರದೇಶಗಳಿಂದಲೂ ನಾವು ಆಮದನ್ನು ಕಡಮೆ ಮಾಡಬೇಕಾಗುತ್ತದೆ. ರಫ್ತು ವ್ಯಾಪಾರದ ಸಂಬಂಧದಲ್ಲಿ, ದುರ್ಲಭ ನಾಣ್ಯರಾಷ್ಟ್ರಗಳಿಗೆ ಹೆಚ್ಚಾಗಿ ಸಾಮಾನು

ಗಳನ್ನು ರಫ್ತುಮಾಡುವುದೇ ಪ್ರಧಾನಧ್ಯೇಯ. ಈ ವಿಷಯದಲ್ಲಿ, ಈಗಾಗಲೇ ಸರಕಾರವು ರಫ್ತು ಸಾಧನೆಯ ಸಮಿತಿಯ ಸಲಹೆ ಗಳನ್ನು ಪರ್ಯಾಲೋಚಿಸುತ್ತದೆ. ಆದರಿಂದ, ವ್ಯಾಪಾರ ಹತೋಟಿಯ ವಿಷಯದಲ್ಲಿ ಹೊಸದಾಗಿ ಏನನ್ನೂ ಯೋಚಿಸುವ ಆವಶ್ಯಕತೆಯಿಲ್ಲ. ಇರುವ ಆರ್ಥಿಕ ನೀತಿಯನ್ನು ತೀವ್ರವಾಗಿ ಉಪಯೋಗಿಸಬೇಕು.

ಎರಡನೆಯ ಅಂಶ, ನಮ್ಮ ವ್ಯಾಪಾರಶಕ್ತಿಯನ್ನು ಸದುಪ ಯೋಗ ಪಡಿಸಿಕೊಳ್ಳುವುದು. ಆದರೆ, ನಮ್ಮ ವ್ಯಾಪಾರಶಕ್ತಿ ವಿಶೇಷ ಗಳನ್ನು ಪಾಕೀಸ್ಥಾನದ ವ್ಯಾಪಾರದೊಂದಿಗೆ ಮಾತ್ರ ಯಶಸ್ವಿಯಾಗಿ ಉಪಯೋಗಿಸಬಹುದು. ಇದರಿಂದ, ಪಾಕೀಸ್ಥಾನದೊಂದಿಗೆ ಲಾಭ ದಾಯಕವಾದ ವ್ಯಾಪಾರದ ಒಪ್ಪಂದವನ್ನು ಸಾಧಿಸಬಹುದು. ಪಾಕೀಸ್ಥಾನದಿಂದ ಕಚ್ಚಾ ಸೆಣಬು ಮತ್ತು ಹತ್ತಿಯನ್ನು ಆಮದು ಮಾಡಿಕೊಳ್ಳುವ ವಿಷಯದಲ್ಲಿ ಒಂದೆರಡು ವರ್ಷಗಳ ತಾತ್ಕಾಲಿಕ ಒಪ್ಪಂದದಿಂದ, ಭಾರತದ ಹಾಗೂ ಪಾಕೀಸ್ಥಾನದ ಕಷ್ಟಗಳು ಪರಿಹಾ ರವಾಗುತ್ತವೆ. ಇದಲ್ಲದೆ, ವ್ಯಾಪಾರಾಭಿವೃದ್ಧಿಯನ್ನು ಸಾಧಿಸಲು ಹೊಸವಿನಿಮಯ ದರಗಳಿಗೆ ಸಂಬಂಧಿಸಿದ ಹೊಸ ಹಣಕಾಸಿನ ಲೇವಾ ದೇವಿಗಳ ಒಪ್ಪಂದವನ್ನು ಮಾಡಿಕೊಳ್ಳುವ ವಿಷಯವನ್ನು ಗಮನಿಸ ಬೇಕು. ಭಾರತದ ಅಪಾರಸಾಮಾನುಗಳ ಆಮದಿಗೆ ವಿದೇಶಿ ಹಣದ ಅಭಾವವಿದ್ದಾಗ, ಇಂಥ ಒಪ್ಪಂದವು ವಿನಿಮಯ ಕಷ್ಟಗಳನ್ನು ಪರಿ ಹರಿಸಿ, ನಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸುತ್ತದೆ.

ಮೂರನೆಯ ಅಂಶವನ್ನು ಕಾರ್ಯಕ್ಷೇತ್ರದಲ್ಲಿ ಯಶಸ್ವಿಗೊಳಿಸು ವುದು ಬಹುಕಷ್ಟ. ಬಹುವ್ಯಾಪಕವಾದ ಮತ್ತು ತೀವ್ರವಾದ ಹತೋಟಿ ಗಳಿಂದ ಇದು ಸಾಧ್ಯವಾಗಬಹುದು. ಇಲ್ಲವಾದಲ್ಲಿ ಸಟ್ಟಾವ್ಯಾಪಾರದ ಬೆಲೆಗಳು ಸ್ವಚ್ಛಂದವಾಗಿ ಏರುತ್ತವೆ.

ನಾಲ್ಕನೆಯ ಅಂಶವನ್ನು ಬಹು ಎಚ್ಚರಿಕೆಯಿಂದ ನೋಡ ಬೇಕಾಗುತ್ತದೆ. ರಫ್ತು ಸುಂಕಗಳು, ನಾಣ್ಯಮೌಲ್ಯದ ಇಳಿವರಿಯ ಅನುಕೂಲಗಳನ್ನು ನಿವಾರಿಸುತ್ತವೆ. ರಫ್ತು ಸಾಮಾನುಗಳ ಬೆಲೆಯ ಏರುವಿಕೆಯಿಂದ, ಹೆಚ್ಚು ಸಾಮಾನುಗಳನ್ನು ಹೊರ ದೇಶಗಳಲ್ಲಿ

ಮಾರಲು ತೊಂದರೆಯಾಗುತ್ತದೆ. ಈಗಿರುವ ಅನಿಶ್ಚಿತ ಆರ್ಥಿಕ ಸನ್ನಿವೇಶದಲ್ಲಿ, ವಿವಿಧ ಸಾಮಾನುಗಳಿಗೆ ಸರಿಯಾದ ರಫ್ತು ಸುಂಕಗ ಪ್ರಮಾಣವನ್ನು ನಿಷ್ಕರ್ಷಿಸುವುದು ಕಷ್ಟವಾಗುತ್ತದೆ. ಒಂದು ವರ್ಷದ ಕಾಲಕ್ಕೂ ಕೂಡ ನಿರ್ದಿಷ್ಟವಾದ ಸುಂಕವು ಅಯುಕ್ತವಾಗುತ್ತದೆ. ಆದ್ದರಿಂದ, ಸುಂಕಗಳನ್ನು ಅಸಾಧಾರಣ ಎಚ್ಚರಿಕೆಯಿಂದಲೂ ವಿವೇಚನಾ ಶಕ್ತಿಯಿಂದಲೂ ವಿಧಿಸದಿದ್ದರೆ, ಇವುಗಳಿಂದ ತೊಂದರೆಯೇ ಹೆಚ್ಚು.

ನಾಲ್ಕನೆಯ ಅಂಶದಲ್ಲಿ, ಹಣ ಹೂಡಿಡುವ ಅಥವಾ ಹಣವನ್ನು ಉಳಿಸುವ ಯೋಜನೆಯನ್ನು ರೂಪಿಸಲಾಗಿದೆ. ಕೇವಲ ರೂಪಾಯಿಯ ಮೌಲ್ಯದ ಇಳಿವರಿಯೇ ಕೈಗಾರಿಕಾ ಪ್ರಗತಿಗೆ ಸಾಧನವಾಗುತ್ತದೆ; ಆದ್ದರಿಂದ ಸರಕಾರವು ಇತರ ಕ್ರಮಗಳಿಂದ ಇದನ್ನು ಬಲಪಡಿಸ ಬಹುದು ಎಂಬ ಭಾವನೆ ಇದ್ದಹಾಗೆ ತೋರುತ್ತದೆ. ಭಾರತದಲ್ಲಿ ಹಣದುಬ್ಬರವು ತಾನೇತಾನಾಗಿ ತಾಂಡವವಾಡುತ್ತಿರುವ ಸನ್ನಿವೇಶದಲ್ಲಿ, ರೂಪಾಯಿಯ ಮೌಲ್ಯದ ಇಳಿವರಿಯಿಂದ ನಮ್ಮ ಸಾಮಾನುಗಳು ಹೊರದೇಶಗಳಿಗೆ ರಫ್ತಾಗಿ, ನಮ್ಮ ಆವಶ್ಯಕತೆಗಳಿಗೆ ಸಾಮಾನುಗಳಿಲ್ಲದೆ, ಆಮದು ಸಾಮಾನುಗಳ ಮತ್ತು ರಾಷ್ಟ್ರದ ಸಾಮಾನುಗಳ ಬೆಲೆಗಳು ಹೆಚ್ಚಾಗುತ್ತವೆ. ಭಾರತವು ವಿವಿಧ ಯಂತ್ರಗಳಿಗಾಗಿ ಮತ್ತು ಅತ್ಯಾವಶ್ಯಕ ಕಚ್ಚಾ ಮಾಲುಗಳಿಗಾಗಿ ಪರದೇಶಗಳಿಗೆ ಅಧೀನವಾಗಿರುವುದರಿಂದ, ಇವುಗಳ ಬೆಲೆಯುಬ್ಬರದಿಂದ ನಮ್ಮ ಕೈಗಾರಿಕಾಭಿವೃದ್ಧಿಗೆ ಮಹತ್ತರವಾದ ಕಂಟಕವಾಗುತ್ತದೆ. ಈ ಪರಿಸ್ಥಿತಿಯಲ್ಲಿ ಹಣ ಉಳಿಸುವ ಯೋಜನೆಗಳು ಫಲಕಾರಿಯಾಗುವುದು ಕಷ್ಟ. ಈಗಾಗಲೇ ಕಡ್ಡಾಯದ ಹಣ ಉಳಿಸುವ ವ್ಯವಸ್ಥೆಯನ್ನು ಸರಕಾರಿ ನೌಕರರ ಕ್ಷೇತ್ರದಲ್ಲಿ ಕಾರ್ಯರೂಪಕ್ಕೆ ತರಲಾಗಿದೆ. ಇತರ ಕ್ಷೇತ್ರಗಳಲ್ಲಿ ಈ ಯೋಜನೆ ಎಷ್ಟರಮಟ್ಟಿಗೆ ಫಲಕಾರಿಯಾಗುತ್ತದೆಂಬುದನ್ನು ನೋಡಬೇಕಾಗಿದೆ.

ಆರನೆಯ ಅಂಶ ಬಹು ವಿಚಿತ್ರವಾಗಿದೆ. ಈ ಅಂಶದಂತೆ, ಕಾಳಸಂತೆಯಲ್ಲಿ ಲಾಭಸಂಪಾದಿಸಿರುವವರು ಐಚ್ಛಿಕವಾಗಿ ಸರಕಾರಕ್ಕೆ

ತಿಳಿಸಬೇಕೆಂದು ಕೇಳಲಾಗುತ್ತದೆ. ಈ ರೀತಿಯಾಗಿ ದೇಶಭಕ್ತಿಯಿಂದ ತಮ್ಮ ತಪ್ಪನ್ನು ಒಪ್ಪಿಕೊಳ್ಳುವವರನ್ನು ಶಿಕ್ಷಿಸಲಾಗುವುದಿಲ್ಲ. ಇದುವರೆವಿಗೂ ತೆರಿಗೆಯನ್ನು ಕೊಡದೆ ತಪ್ಪಿಸಿಕೊಂಡಿರುವ ಈ ಕಾಳ ಸಂತೆಯ ಹಣದ ಮೇಲೆ, ಪ್ರಚಲಿತ ತೆರಿಗೆಯನ್ನು ವಿಧಿಸಲಾಗುತ್ತದೆ.

ಈ ಸುಂದರವಾದ ಯೋಜನೆ ಯಶಸ್ವಿಯಾಗಲಾರದು. ಯಾವ ಕಾಳಸಂತೆಯ ವ್ಯಾಪಾರಗಾರನೂ ಅಧರ್ಮದಿಂದ ಗಳಿಸಿದ ಹಣದ ಪ್ರಮಾಣವನ್ನು ಸರಕಾರಕ್ಕೆ ಸೂಚಿಸುವುದಿಲ್ಲ; ತಾನು ಸಂಪಾದಿಸಿದ ಹಣದಲ್ಲಿ ಒಂದು ಭಾಗವನ್ನು ಯಾರೂ ಐಚ್ಛಿಕವಾಗಿ ಕೊಡುವುದಿಲ್ಲ. ಮನುಷ್ಯ ಸ್ವಭಾವದ ರಚನೆಯೇ ಹೀಗೆ. ಒಂದು ಪಕ್ಷ, ಸರ್ಕಾರವು ಯಶಸ್ವಿಯಾದರೆ, ಈ ಯೋಜನೆ ಫಲಕಾರಿಯಾದರೆ, ಇನ್ನು ಮುಂದೆ ಯಾರೂ ಧರ್ಮಬುದ್ಧಿಯಿಂದ ವ್ಯಾಪಾರ ಮಾಡುವುದಿಲ್ಲ.

ಏಳನೆಯ ಅಂಶ ಸಾರ್ವಜನಿಕ ವೆಚ್ಚದಲ್ಲಿ ಉಳಿತಾಯ. ಯುದ್ಧಾನಂತರದ ಹಣದುಬ್ಬರಕ್ಕೆ ಮುಖ್ಯ ಕಾರಣ ಸರಕಾರದ ಅಮಿತವಾದ ವೆಚ್ಚದ ಯೋಜನೆಗಳು. ಸಾರ್ವಜನಿಕ ವೆಚ್ಚದಲ್ಲಿ ಉಳಿತಾಯವಾಗಬೇಕಾದರೆ, ನಮ್ಮ ವಿವಿಧ ಸಾರ್ವಜನಿಕ ಅಭಿವೃದ್ಧಿಯೋಜನೆಗಳನ್ನು ನಿಲ್ಲಿಸಬೇಕಾಗುತ್ತದೆ.

ಎಂಟನೆಯ ಅಂಶ ಗಮನಾರ್ಹವಾಗಿದೆ. ದೇಶದ ಆರ್ಥಿಕ ಹಿತದೃಷ್ಟಿಯಿಂದ ಬೆಲೆಗಳ ಮಟ್ಟ ಕಡಮೆಯಾಗಲೇಬೇಕು. ಈ ಸಮಯದಲ್ಲಿ ಸರಕಾರವು ಬೆಲೆಗಳ ರಚನೆಯನ್ನು ಕೂಲಂಕಷವಾಗಿ ಪರಿಶೀಲಿಸುವುದು ಅತ್ಯಗತ್ಯ. ಸಾಮಾನುಗಳ ಬೆಲೆಯ ಇಳಿವರಿ ಸರ್ವಸಮ್ಮತವಾದುದು; ಆದರೆ ಇದನ್ನು ಕಾರ್ಯತಃ ಸಾಧಿಸುವುದೇ ಒಂದು ಸಮಸ್ಯೆ. ವ್ಯವಸಾಯಗಾರರು ಕೊಳ್ಳುವ ಸಾಮಾನುಗಳಲ್ಲಿ, ಸಾಮಾನುಗಳ ಏಕಪ್ರಕಾರವಾದ ಸರಬರಾಜು ಬೆಲೆಯ ಇಳಿವರಿಯಷ್ಟೇ ಮುಖ್ಯವಾದುದು. ಸೀಮೆ ಎಣ್ಣೆ, ಸಕ್ಕರೆ, ಉಪ್ಪು, ಬಟ್ಟೆ ಮತ್ತು ಕಬ್ಬಿಣದ ಉಪಕರಣಗಳ ಹಂಚಿಕೆ ವ್ಯವಸ್ಥೆ ಸಮರ್ಪಕವಾಗಿಲ್ಲ. ಆಡಳಿತ ಯಂತ್ರ ಬಲವಾಗಬೇಕು, ಹೆಚ್ಚಿನ ಪರಿಶ್ರಮ, ದಕ್ಷತೆ, ಪ್ರಾಮಾಣಿಕತೆ— ಅತ್ಯವಶ್ಯ. ಆದರೆ, ನಮ್ಮ ಆಡಳಿತ ಯಂತ್ರವು

ಶಿಥಿಲವಾಗಿದೆ ಎಂದು ಆರ್ಥಿಕ ಸಚಿವರು ನಿರಾಶೆಯಿಂದ ಹೇಳಿದ್ದಾರೆ.

ನಾಣ್ಯ ಮೌಲ್ಯದ ಇಳಿವರಿಯ ಸಂದರ್ಭದಲ್ಲಿ, ಬೆಲೆಗಳ ಇಳಿವರಿಯಲ್ಲದೆ ಸಾಮಾನುಗಳ ತಯಾರಿಕೆಯು ವೆಚ್ಚ ಕಡಮೆಯಾಗಬೇಕು. ನಮ್ಮ ವಿದೇಶಿ ವ್ಯಾಪಾರದಲ್ಲಿ ಪೈಪೋಟಿಶಕ್ತಿಯನ್ನು ಪಡೆಯಲು ಇದು ಸುಸಮಯ, ಉತ್ಪತ್ತಿ ವೆಚ್ಚದ ಇಳಿವರಿಯಿಂದ ಇದು ಸಾಧ್ಯ. ನಮ್ಮ ದೇಶದಲ್ಲ ಯೋಜನೆಗಳಿಗೆ ಕ್ಷಾಮವಿಲ್ಲ; ಅನೇಕ ಸಾರಿ ವಿವಿಧ ಆರ್ಥಿಕ ಯೋಜನೆಗಳು ಚರ್ಚೆಯಾಗಿವೆ, ಕಾರ್ಯವಿಧಾನ ರೂಪುಗೊಂಡಿದೆ, ನೀತಿ ಪ್ರತಿಪಾದಿತವಾಗಿದೆ. ಆದರೆ, ಕಾರ್ಯಕ್ಷೇತ್ರದಲ್ಲಿ ಇವು ಯಶಸ್ವಿಯಾಗಿಲ್ಲ. ಸರಕಾರವು ನಿರ್ದಿಷ್ಟ ನೀತಿಯಿಂದ ಪ್ರಗತಿಯನ್ನು ಸಾಧಿಸಬೇಕು; ಕಾರ್ಯದ ಎಡರುತೊಡರುಗಳಿಗೆ ಹೆದರಬಾರದು. ಸ್ವತಂತ್ರ ಭಾರತದಲ್ಲಿ ಯಾವ ಶಕ್ತಿಗೂ ಅಭಾವವಿಲ್ಲ.

ರೂಪಾಯಿಯ ಮೌಲ್ಯದ ಇಳಿವರಿಯು ಅನಿಶ್ಚಿತ ವಾತಾವರಣವನ್ನು ಕಲ್ಪಿಸಿದೆ. ಭಾರತದ ಆರ್ಥಿಕ ಪ್ರಗತಿಯ ದೃಷ್ಟಿಯಿಂದ, ರೂಪಾಯಿ ಮೌಲ್ಯದ ಇಳಿವರಿಯ ಆಗುಹೋಗುಗಳನ್ನು, ಸಾಧಕ ಬಾಧಕಗಳನ್ನು ನಿರ್ದಿಷ್ಟವಾಗಿ ತೂಕಮಾಡಿ ಹೇಳುವುದು ಕಷ್ಟ. ಸ್ಟರ್ಲಿಂಗ್ ಪ್ರದೇಶದೊಂದಿಗೆ ನಮ್ಮ ವ್ಯಾಪಾರ ಅತಿಮುಖ್ಯವಾಗಿರುವುದರಿಂದ, ಸ್ಟರ್ಲಿಂಗ್ ಮೌಲ್ಯದ ಇಳಿತಕ್ಕೆ ಸರಿಯಾಗಿ ಭಾರತದ ರೂಪಾಯಿಯ ಮೌಲ್ಯದ ಇಳಿತಾಯ ಅನಿವಾರ್ಯವೆಂದೇ ಹೇಳಬೇಕು.

ರೂಪಾಯಿಯ ಮೌಲ್ಯದ ಇಳಿವರಿಯಿಂದ ನಮ್ಮ ವ್ಯಾಪಾರದಲ್ಲಿ ಸಮತೂಕವಾಗುವುದಿಲ್ಲವೆಂಬುದು ಈಗಾಗಲೇ ವೇದ್ಯವಾಗಿದೆ. ಪಾಕೀಸ್ಥಾನ ಮತ್ತು ಭಾರತದ ಆರ್ಥಿಕ ನೀತಿಯಲ್ಲಿ ಮಹತ್ತರ ವಾದ ಏರುಪೇರುಗಳಾಗುತ್ತವೆ. ನಮ್ಮ ಸೆಣಬು ಮತ್ತು ಬಟ್ಟೆ ಕೈಗಾರಿಕೆಗಳಿಗೆ ಪಾಕೀಸ್ಥಾನದ, ಕಚ್ಚಾ ಸೆಣಬು ಮತ್ತು ಹತ್ತಿ ಅತ್ಯಾವಶ್ಯಕ. ಪಾಕೀಸ್ಥಾನ್, ಈರೀತಿಯಾಗಿ ಡಾಲರು ರಾಷ್ಟ್ರಗಳನ್ನು ಸೇರಿದರೆ, ಭಾರತದ ರಫ್ತು ಅನುಕೂಲಗಳು ಕ್ಷೀಣವಾಗಿ, ನಮ್ಮ ಆರ್ಥಿಕ ಯಂತ್ರ ಇನ್ನೂ ಹದಗೆಡುತ್ತದೆ. ಭಾರತಕ್ಕೂ ಪಾಕೀಸ್ಥಾನಕ್ಕೂ

ಹಣಕಾಸಿನ ವ್ಯವಸ್ಥೆಯಲ್ಲಿ, ವಿನಿಮಯ ಬೆಲೆಗಳಲ್ಲಿ ಹಾಗೂ ವ್ಯಾಪಾರದಲ್ಲಿ ಸಾಮರಸ್ಯವಿಲ್ಲದಿದ್ದರೆ, ಆರ್ಥಿಕ ದೃಷ್ಟಿಯಿಂದ, ಎರಡು ರಾಷ್ಟ್ರಗಳಿಗೂ ಅಪಾಯ.

ರೂಪಾಯಿಯ ಮೌಲ್ಯದ ಇಳಿವರಿಯಿಂದ ನಮ್ಮ ಆಮದು ವ್ಯಾಪಾರಕ್ಕೂ ತೊಂದರೆಯಾಗಿದೆ. ದುರ್ಲಭ ನಾಣ್ಯ ಪ್ರದೇಶಗಳಾದ ಅಮೆರಿಕ, ಕೆನಡ, ಅರ್ಜೆಂಟೈನ, ಸ್ವಿಟ್ಜರ್ಲೆಂಡ್, ಬೆಲ್ಜಿಯಂ, ಲಕ್ಸೆಂಬರ್ಗ್ ಮತ್ತು ಜಪಾನ್—ಈ ದೇಶಗಳಿಂದ ೧೯೪೮-೪೯ರಲ್ಲಿ ಭಾರತದ ಮೂರನೆಯ ಒಂದು ಭಾಗದಷ್ಟು ಸಾಮಾನುಗಳು ಆಮದಾಗಿಬಂದಿವೆ. ಕಾಮನ್‌ವೆಲ್ತ್ ಆರ್ಥಿಕ ಸಚಿವರ ಸಮ್ಮೇಳನದಲ್ಲಿ ಆದ ನಿರ್ಧಾರಗಳಂತೆ ಭಾರತವು ಡಾಲರುಪ್ರದೇಶದಿಂದ ಆಮದನ್ನು ಬಹು ಕಡಮೆ ಮಾಡಿದೆ. ಇದರಿಂದ ಸ್ಟರ್ಲಿಂಗ್ ಕ್ಷೇತ್ರದ ರಾಷ್ಟ್ರಗಳಿಂದ, ಭಾರತವು ಹೆಚ್ಚಾಗಿ ಸಾಮಾನುಗಳನ್ನು ಆಮದುಮಾಡಿಕೊಳ್ಳಬೇಕಾಗಿದೆ. ಆದರೆ ಸ್ಟರ್ಲಿಂಗ್ ಕ್ಷೇತ್ರದ ರಾಷ್ಟ್ರಗಳಿಂದ ಭಾರತಕ್ಕೆ ಬೇಕಾದ ಎಲ್ಲಾ ಸಾಮಾನುಗಳನ್ನೂ, ಯಂತ್ರೋಪಕರಣಗಳನ್ನೂ, ಆಮದುಮಾಡಿಕೊಳ್ಳಲು ಸಾಧ್ಯವಿಲ್ಲ. ಇತ್ತೀಚೆಗೆ ಮಹತ್ತರವಾದ ವಿವಿಧೋದ್ದೇಶ ಸಾರ್ವಜನಿಕ ಕೆಲಸಗಳನ್ನು* ಭಾರತ ಸರಕಾರವು ಕೈಗೊಂಡಿದೆ. ಈ

* ಪಶ್ಚಿಮ ಬಂಗಾಳದಲ್ಲಿ **ದಾಮೋದರ ಕಣಿವೆಯ** ಕೆಲಸ ಪ್ರಾರಂಭವಾಗಿದೆ. ಇದು ವಿವಿಧೋದ್ದೇಶ ನದಿಯ ಕಣಿವೆ ಯೋಜನೆ; ಇದರ ಒಟ್ಟು ವೆಚ್ಚ ೫೫ ಕೋಟಿ ರೂಪಾಯಿಗಳೆಂದು ಅಂದಾಜುಮಾಡಲಾಗಿದೆ. ದಾಮೋದರ ನದಿಯ ಅತಿ ಪ್ರವಾಹದ ಹಾವಳಿಯನ್ನು ತಡೆಗಟ್ಟಿ, ಸುಮಾರು ೭,೬೩,೮೦೯ ಎಕರೆ ಭೂಮಿಗೆ ನೀರಾವರಿ ಸೌಕರ್ಯಗಳನ್ನು ಒದಗಿಸಿ, ಸುಮಾರು ೨,೦೦,೦೦೦ ಕಿಲೋವ್ಯಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸುವುದು, ಈ ಯೋಜನೆಯ ಧ್ಯೇಯಗಳು. ಒರಿಸ್ಸಾ ಪ್ರಾಂತದ **ಹಿರಾಕಡ್ ಅಣೆಕಟ್ಟು.** ಮೂರು ನಾಲ್ಕು ಅಣೆಕಟ್ಟುಗಳಿಂದ ಸರೋವರಗಳನ್ನು ನಿರ್ಮಿಸಿ, ನೀರಾವರಿ ಸೌಲಭ್ಯಗಳನ್ನೂ ಮತ್ತು ವಿದ್ಯುಚ್ಛಕ್ತಿಯ ಸರಬರಾಯಿಯನ್ನೂ ಒದಗಿಸಬೇಕೆಂದು ಮೊದಲಿನ ಯೋಜನೆ ಇತ್ತು. ಈಗ ಒಂದು ಅಣೆಕಟ್ಟಿನ ಯೋಜನೆ ಮಾತ್ರ ಕಾರ್ಯರೂಪಕ್ಕೆ ಬಂದಿದೆ.

ದೊಡ್ಡ ಯೋಜನೆಗಳಿಗೆ ಅಮೇರಿಕಾದ ಯಂತ್ರೋಪಕರಣಗಳು, ಔದ್ಯೋಗಿಕ ಸಲಹೆ ಅತ್ಯಾವಶ್ಯಕ. ಇದರಿಂದ ನಾವು ಸೇಕಡ ೩೦ ರಷ್ಟು ಬೆಲೆ ಹೆಚ್ಚುಕೊಟ್ಟು ಈ ಸಾಮುಗ್ರಿಗಳನ್ನು ತರಿಸಿಕೊಳ್ಳಬೇಕಾಗಿದೆ.

ಡಾಲರು ಪ್ರದೇಶದಿಂದ ಆಹಾರ ಧಾನ್ಯಗಳನ್ನು ಆಮದು ಮಾಡಿಕೊಳ್ಳುವುದಿಲ್ಲ ಎಂದು ಹೇಳಿರುವ ಆರ್ಥಿಕ ಸಚಿವರ ಅಭಿಪ್ರಾಯವನ್ನು ಅಂಕಿಅಂಶಗಳಿಂದ ಸಮರ್ಥಿಸುವುದು ಕಷ್ಟ. ಪ್ರಕೃತ ಸನ್ನಿವೇಶದಲ್ಲಿ ಭಾರತ ಮತ್ತು ಇತರ ಸ್ಟರ್ಲಿಂಗ್ ರಾಷ್ಟ್ರಗಳು ಡಾಲರು ಪ್ರದೇಶದಿಂದ ಆಹಾರ ಧಾನ್ಯಗಳ ಆಮದನ್ನು ಸಂಪೂರ್ಣವಾಗಿ ನಿಲ್ಲಿಸಿ, ಬೇರೆ ದೇಶಗಳಿಂದ ತರಿಸಿಕೊಳ್ಳಲು ಸಾಧ್ಯವೇ ? ಸ್ಟರ್ಲಿಂಗ್ ಕ್ಷೇತ್ರದ ಜನರಿಗೆ ಸಾಕಾಗುವಷ್ಟು ಆಹಾರ ಧಾನ್ಯಗಳನ್ನು ಸ್ಟರ್ಲಿಂಗ್ ರಾಷ್ಟ್ರಗಳು ಬೆಳೆಯಲಾರವು. ಅಂದರೆ, ಈ ಪ್ರದೇಶದಲ್ಲಿ ಆಹಾರದ ಸ್ವಪರಿಪೂರ್ಣತೆಯಿಲ್ಲ. ವಿಶ್ವಸಂಸ್ಥೆಯು ಸಂಗ್ರಹಿಸಿದ ಪ್ರಪಂಚದ ಉತ್ಪತ್ತಿ ಅಂಕಿ ಅಂಶಗಳು ಬಹು ಸ್ವಾರಸ್ಯವಾದ ವಿಷಯವನ್ನು ಹೊರಪಡಿಸಿವೆ. ೧೯೪೩ ರಲ್ಲಿ ಪ್ರಪಂಚದ ಕೈಗಾರಿಕಾ ಉತ್ಪತ್ತಿ ೧೯೩೮ ಕ್ಕಿಂತ ಸೇಕಡ ೪೨ ರಷ್ಟು ಹೆಚ್ಚಾಗಿತ್ತು ; ಆದರೆ ೧೯೩೪–೩೮ ರ ಸರಾಸರಿಗಿಂತ ಸೇಕಡ ೪ ರಷ್ಟು ಕಡಿಮೆಯಾಗಿತ್ತು. ಈ ಅಂಕಿ

ಮಹಾನದಿಯನ್ನು ತಡೆಗಟ್ಟಿ ಮೂರು ಮೈಲಿ ಉದ್ದದ ಅಣೆಕಟ್ಟನ್ನು ಹಾಕಲು ಮತ್ತು ಎರಡು ಜಲವಿದ್ಯುಚ್ಛಕ್ತಿಯ ಯೋಜನೆಗಳನ್ನು ಸ್ಥಾಪಿಸಲು ಏರ್ಪಾಡಾಗಿದೆ. ಹಿರಾಕಡ್ ಅಣೆಕಟ್ಟಿನ ಕೆಲಸ ಏಪ್ರಿಲ್ ೧೨, ೧೯೪೮ ರಲ್ಲಿ ಸಂಬಲ್‌ಪುರದ ಹತ್ತಿರ ಪ್ರಾರಂಭವಾಯಿತು. ಇದರಿಂದ, ೧೧,೦೦೦,೦೦ ಎಕರೆಗಳಿಗೆ ನೀರಾವರಿ ಸೌಲಭ್ಯಗಳನ್ನೂ ೩೫,೦೦೦,೦೦ ಕಿಲೋವ್ಯಾಟುಗಳಷ್ಟು ವಿದ್ಯುಚ್ಛಕ್ತಿಯನ್ನು ಒದಗಿಸಿರುವುದಲ್ಲದೆ, ಹಡಗು ಸಂಚಾರಕ್ಕೆ ಅನಕೂಲವನ್ನು ಕಲ್ಪಿಸಲಾಗುತ್ತದೆ. ಈ ಯೋಜನೆಯ ಅಂದಾಜು ವೆಚ್ಚ ೪೭.೪ ಕೋಟಿ ರೂಪಾಯಿಗಳು, ಇವಲ್ಲದೆ, ಕೋಸಿ, ನರ್ಮದ, ಮತ್ತು ಆಸ್ಸಾಮ್ ನದಿಗಳ ಅಭಿವೃದ್ಧಿಯೋಜನೆಗಳು ಕಾರ್ಯರೂಪಕ್ಕೆ ಬಂದಿವೆ.

ಅಂಶಗಳನ್ನು ಇನ್ನೂ ಸೂಕ್ಷ್ಮವಾಗಿ ಪರಿಶೀಲಿಸಿದಲ್ಲಿ, ಅಮೆರಿಕ ಮತ್ತು ಕೆನಡಾದಲ್ಲಿ ೧೯೪೮—೪೯ ರ ಆಹಾರಧಾನ್ಯಗಳ ಬೆಳೆ ೧೯೩೪—೩೯ ರ ಸರಾಸರಿಗಿಂತ ಸೇಕಡ ೪೦ ರಷ್ಟು ಹೆಚ್ಚಾಗಿತ್ತು. ಆಹಾರ ಕೊರತೆಯಿರುವ ಪ್ರದೇಶಗಳಲ್ಲಿ, ಆಹಾರ ಧಾನ್ಯಗಳ ಬೆಳೆಯ ಕ್ಷೀಣತೆಯು, ಆಹಾರ ಹೆಚ್ಚಾಗಿರುವ ಪ್ರದೇಶಗಳ ಸಂಕುಚಿತ ಮನೋಭಾವನೆಯಿಂದ ಇನ್ನೂ ವೃದ್ಧಿಯಾಯಿತು. ಉತ್ತರ ಅಮೆರಿಕಾ ಹೊರತು ಉಳಿದ ಆಹಾರದ ಹೆಚ್ಚುವರಿ ಪ್ರದೇಶಗಳು, ಉತ್ಪತ್ತಿಯ ಪ್ರಮಾಣದಲ್ಲಿ ಆಹಾರವನ್ನು ರಫ್ತುಮಾಡದೆ, ಹೆಚ್ಚು ಆಹಾರವನ್ನು ತಮ್ಮ ಉಪಯೋಗಕ್ಕೇ ಇಟ್ಟುಕೊಂಡವು. ಆದ್ದರಿಂದ, ಆಹಾರಾಭಾವದ ಪ್ರದೇಶಗಳು ಯುದ್ಧಕ್ಕಿಂತ ಹಿಂದಿನ ಪ್ರಮಾಣಕ್ಕಿಂತ ಹೆಚ್ಚಾಗಿ ಉತ್ತರ ಅಮೆರಿಕಾದ ಆಹಾರ ಧಾನ್ಯಗಳ ಆಮದಿನ ಮೇಲೆ ಜೀವಿಸಬೇಕಾಗಿದೆ. ೧೯೪೭—೪೯ ರಲ್ಲಿ ಉತ್ತರ ಅಮೆರಿಕ ಮತ್ತು ಕೆನಡ, ಪ್ರಪಂಚದ ಆಹಾರಧಾನ್ಯಗಳ ರಫ್ತಿನ ಸೇಕಡ ೪೬ ರಷ್ಟು ಕಳುಹಿಸಿವೆ. ಈ ಪ್ರಮಾಣ ೧೯೩೪—೧೯೩೮ ರಲ್ಲಿ ಕೇವಲ ಸೇಕಡ ೧೮ ಮಾತ್ರವಿತ್ತು.

ಸ್ಟರ್ಲಿಂಗ್ ಕ್ಷೇತ್ರದಿಂದ ಆಹಾರವನ್ನು ಆಮದು ಮಾಡಿಕೊಂಡು ನಮ್ಮ ಆಹಾರದ ಕೊರತೆಯನ್ನು ನಿವಾರಿಸ ಬಹುದೆಂದು ಯೋಚಿಸಿರುವ ಆಶಾವಾದಿಗಳು ಈ ಅಂಕಿ ಅಂಶಗಳನ್ನು ಗಮನಿಸಿ, ಕೇವಲ ಭಾವನಾ ಪ್ರಪಂಚದ ಭ್ರಾಂತಿಯಿಂದ, ನೈಜಪ್ರಪಂಚದ ಅನುಭವಕ್ಕೆ ಬರಬೇಕು. ಈಗಾಗಲೇ ಭಾರತವು ಡಾಲರು ಪ್ರದೇಶದಿಂದ ಆಮದು ಮಾಡಿಕೊಳ್ಳುವ ಆಹಾರ ಧಾನ್ಯಗಳಿಗೆ ೧೦೦ ಕೋಟಿ ರೂಪಾಯಿಗಳನ್ನು ಪ್ರತಿವರ್ಷ ವೆಚ್ಚಮಾಡುತ್ತಿದೆ. ರೂಪಾಯಿಯ ಮೌಲ್ಯದ ಇಳಿವರಿಯಿಂದ ಆಹಾರ ಧಾನ್ಯಗಳ ಬೆಲೆ ಸ್ವಾಭಾವಿಕವಾಗಿ ಹೆಚ್ಚಾಗುತ್ತದೆ. ಇದರ ಫಲವಾಗಿ ಜೀವನದ ವೆಚ್ಚವು ಏರುತ್ತದೆ ; ಇದು ಹಣದುಬ್ಬರಕ್ಕೆ ನವ ಚೈತನ್ಯವನ್ನು ಕೊಟ್ಟು ರಫ್ತು ಸಾಮಾನುಗಳ ಬೆಲೆಯನ್ನು ಹೆಚ್ಚಿಸುತ್ತದೆ.

ರೂಪಾಯಿಯ ಮೌಲ್ಯದ ಇಳಿವರಿಯಿಂದ ಭಾರತದ ರಫ್ತು

ವ್ಯಾಪಾರಕ್ಕೆ ಅನುಕೂಲವಾಗದಿದ್ದರೂ, ಸ್ಟರ್ಲಿಂಗ್ ಕ್ಷೇತ್ರದ ಕೆಲವು ಮುಖ್ಯ ರಾಷ್ಟ್ರಗಳು ಅಮೆರಿಕಕ್ಕೆ ಹೆಚ್ಚು ಸಾಮಾನುಗಳನ್ನು ರಫ್ತು ಮಾಡಲು ಅವಕಾಶವಾಗಬಹುದು. ಬ್ರಿಟನ್ನು ಡಾಲರ್ ಪ್ರದೇಶಕ್ಕೆ ಹೆಚ್ಚಿನ ಪ್ರಮಾಣದಲ್ಲಿ ರಫ್ತುಮಾಡಬೇಕೆಂದು ಸರ್ ಸ್ಟ್ಯಾಫರ್ಡ್ ಕ್ರಿಪ್ಸರ ಆಶೆ. ಆದರೆ, ಸ್ಟರ್ಲಿಂಗ್ ಬೆಲೆಯ ಕುಗ್ಗುವಿಕೆಯಿಂದ, ಕಾರ್ಮಿಕ ವೇತನಗಳು ಹೆಚ್ಚಾಗದಿದ್ದರೆ ಇದು ಸಾಧ್ಯ. ಕಾರ್ಮಿಕ ಸಂಘಗಳ ಹಾಗೂ ಕೈಗಾರಿಕೋದ್ಯಮಿಗಳ ಸಹಕಾರದಿಂದ ಪರಿಸ್ಥಿತಿ ಸುಧಾರಿಸಬಹುದು. ಕಾರ್ಮಿಕ ವೇತನಗಳು ಹೆಚ್ಚಾಗದಂತೆ ತಡೆಯಲು ಬ್ರಿಟನ್ನಿನ ಯಾವ ಸರಕಾರಕ್ಕೂ ಸಾಧ್ಯವಾಗದಿರಬಹುದು. ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕದ ಸ್ಥಿತಿ ಉತ್ತಮವಾಗಿರುವುದರಿಂದ, ಒಟ್ಟಿನಲ್ಲಿ ಸ್ಟರ್ಲಿಂಗ್ ಕ್ಷೇತ್ರದ ಡಾಲರುಗಳ ಸಮಸ್ಯೆ ಸ್ವಲ್ಪ ಮಟ್ಟಿಗೆ ಪರಿಹಾರವಾಗಬಹುದು. ಭಾರತದಲ್ಲಿ ಮಾತ್ರ, ರೂಪಾಯಿಯ ವಿನಿಮಯ ಬೆಲೆಯ ಇಳಿವರಿಯಿಂದ, ಹಣದುಬ್ಬರವು ವೃದ್ಧಿಯಾಗಿ ನಮ್ಮ ಸಾಲಸೋಲಗಳ ಸಮಸ್ಯೆ ಇನ್ನೂ ವಿಷಮವಾಗಬಹುದು. ಅಮೆರಿಕ ಬಿಟ್ಟರೆ ಇತರ ಪ್ರದೇಶಗಳಿಂದ ಹೆಚ್ಚು ಆಹಾರ ಧಾನ್ಯಗಳನ್ನು ತರಿಸಿಕೊಳ್ಳಲು ಸಾಧ್ಯವಿಲ್ಲ.*

ಸ್ಟರ್ಲಿಂಗ್ ಕ್ಷೇತ್ರಕ್ಕೆ ಸೇರಿರುವುದರಿಂದ, ಭಾರತದ ಅನುಕೂಲಗಳು ಎಷ್ಟೆಂಬುದು ವ್ಯಕ್ತವಾಗುತ್ತದೆ. ಸ್ಟರ್ಲಿಂಗ್ ಕ್ಷೇತ್ರದಲ್ಲಿ ಭಾರತವು ಇನ್ನೂ ಇರುವುದು ಉಚಿತವೇ? ಸ್ಟರ್ಲಿಂಗ್ ಕ್ಷೇತ್ರವಿರುವುದು ಬ್ರಿಟನ್ನಿನ ರಾಜಕೀಯ ಹಾಗೂ ಆರ್ಥಿಕ ಪ್ರಗತಿಗಾಗಿ; ಬೇರೆ ರಾಷ್ಟ್ರಗಳ ಪ್ರಗತಿ ಅಷ್ಟು ಮುಖ್ಯವಲ್ಲ. “ನಮ್ಮ ದೇಶವು ಎಲ್ಲಾ ಸಂಪತ್ಸಾಧನೆಗಳನ್ನೂ ಒಟ್ಟು ಸೇರಿಸಿ, ಡಾಲರು ನಿಧಿಯ ಸಹಾಯ

* ಈಗ ಅಮೆರಿಕಕ್ಕೂ ಭಾರತಕ್ಕೂ ಒಂದು ಒಪ್ಪಂದವಾಗಿ, ಅಮೆರಿಕ ನಮಗೆ ಒಂದು ಮಿಲಿಯನ್ ಟನ್ನುಗಳಷ್ಟು ಗೋಧಿಯನ್ನು ಕೊಡಲೊಪ್ಪಿದೆ; ಇದರ ಬೆಲೆ ೮೦,೦೦೦,೦೦೦ ಡಾಲರುಗಳು. ಇದಕ್ಕೆ ಬದಲಾಗಿ, ಭಾರತವು ಕೆಲವು ಮುಖ್ಯ ಕಚ್ಚಾಮಾಲುಗಳನ್ನು ಕೊಡಲೊಪ್ಪಿದೆ.

ವಿಲ್ಲದೆಯೇ ವ್ಯಾಪಾರ ನಡೆಸುವ ಅಂತರ ರಾಷ್ಟ್ರೀಯ ವ್ಯಾಪಾರ ರಚನೆಯನ್ನು ರೂಪುಗೊಳಿಸುವ ಕಾಲವೀಗ ಬಂದಿದೆ" ಎಂದು ನಮ್ಮ ಆರ್ಥಿಕ ಸಚಿವರು ಹೇಳಿದ್ದಾರೆ. ಪ್ರಕೃತ ಪರಿಸ್ಥಿತಿಯಲ್ಲಿ ನಮ್ಮ ಆರ್ಥಿಕ ಕ್ಷೇತ್ರದ ಎಡರುತೊಡರುಗಳನ್ನು ಗ್ರಹಿಸಿ ಕಾರ್ಯಕ್ಷೇತ್ರದಲ್ಲಿ ಕಾಲಿಡುವುದು ಉಚಿತ. ನಾವು ರಫ್ತು ವ್ಯಾಪಾರವನ್ನು ಹೆಚ್ಚಿಸಬೇಕಾದರೆ, ಉತ್ಪತ್ತಿ ವೆಚ್ಚವನ್ನು ಕಡಮೆಮಾಡಬೇಕಾದರೆ, ನಮ್ಮ ಅಭಿವೃದ್ಧಿ ಯೋಜನೆಗಳು ಯಶಸ್ವಿಯಾಗಬೇಕಾದರೆ, ಸಾಮಾನ್ಯ ಪ್ರಜೆಗಳ ಜೀವನದ ವೆಚ್ಚವನ್ನು ಹೆಚ್ಚಿಸುತ್ತಿರುವ ಅನೇಕ ಸಾಮಾನುಗಳ ಬೆಲೆಯನ್ನು ಇಳಿಸುವುದು ಪ್ರಥಮ ಅಂಶ. ಸರಿಯಾದ ರೀತಿಯಲ್ಲಿ ಮತ್ತು ಸಾಕಾದಷ್ಟು ಪ್ರಮಾಣದಲ್ಲಿ ಬಂಡವಾಳವನ್ನು ಒದಗಿಸಲು ಅಮೆರಿಕ ಒಪ್ಪಿಕೊಂಡರೆ ಮಾತ್ರ ನಮ್ಮ ಅಭಿವೃದ್ಧಿ ಯೋಜನೆಗಳೆಲ್ಲವನ್ನೂ ಕಾರ್ಯರೂಪಕ್ಕೆ ತರಬೇಕು. ಸರಿಯಾದ ಕ್ರಮಗಳನ್ನನುಸರಿಸದಿದ್ದರೆ, ರೂಪಾಯಿಯ ಮೌಲ್ಯದ ಇಳಿವರಿಯಿಂದ ಕಷ್ಟನಷ್ಟಗಳೇ ಹೆಚ್ಚಾಗುತ್ತವೆ.